ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ,
ಬೆಳಗಾವಿ

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ರಾಜ್‌ಕುಮಾರ್ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 50ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ರಾಜ್‌ಕುಮಾರ್ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 50ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
14/2/2019
(ಜಯಲಕ್ಷ್ಮೀ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆರೋಗ್ಯ-1&2)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	50
ಮಾನ್ಯ ಸದಸ್ಯರ ಹೆಸರು	ಶ್ರೀ ರಾಜ್ ಕುಮಾರ್ ಪಾಟೀಲ್ (ಸೇಡಂ)
ಉತ್ತರಿಸಬೇಕಾದ ದಿನಾಂಕ	14-02-2019
ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಸೇಡಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ; (ಗ್ರಾಮವಾರು ವಿವರ ನೀಡುವುದು)	ಸೇಡಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ (8) ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. 1)ಕೋಲಕುಂದಾ 2)ಇಟ್ಕಾಲ 3)ಕಾನಾಗಡ್ಡಾ 4)ಕೆ.ಆರ್.ಪಳ್ಳಿ 5)ಮದನಾ 6)ಕುರಕುಂಟಾ 7)ಯಡಗಾ 8)ಕೋಡ್ಲಾ.
ಆ)	ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ; (ಪೂರ್ಣ ವಿವರ ನೀಡುವುದು)	ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗಿದೆ.
ಇ)	ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು? (ವಿವರ ನೀಡುವುದ)	ಬಂದಿದೆ. ಖಾಲಿಯಿರುವ ಹುದ್ದೆಗಳ ಪೈಕಿ ಕೆಲವೊಂದು ಹುದ್ದೆಗಳಾದ ಗ್ರೂಪ್-'ಡಿ' ಔಷಧ ತಜ್ಞ ಮತ್ತು ಶುಶ್ರೂಷಕ ಹುದ್ದೆಗಳ ಸೇವೆಯನ್ನು ಸರ್ಕಾರದ ಆದೇಶದಂತೆ ಟೆಂಡರ್ ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲಾಗುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.

ಆಕುಕ 13 ಎಸ್‌ಎಂಎಂ 2019

(ಶಿವಾನಂದ ಎಸ್. ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ-1

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆಪಿಎಸ್‌ಸಿ ಮೂಲಕ ಆಯ್ಕೆಗೊಂಡು 255 ತಜ್ಞ ವೈದ್ಯರು ಸ್ಥಳ ಆಯ್ಕೆಮಾಡಿಕೊಂಡಿದ್ದು 159 ತಜ್ಞ ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

255 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು, ಸ್ಥಳ ಆಯ್ಕೆ ಮಾಡಿಕೊಂಡಿದ್ದು 233 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರಿ ಆದೇಶ ಸಂಖ್ಯೆ: ಆಕುಕ 297 ಹೆಚ್‌ಎಸ್‌ಹೆಚ್ 2015, ದಿನಾಂಕ:22-04-2016 ಮತ್ತು ಸೇರ್ಪಡೆ ದಿ:07.10.2016 ಹಾಗೂ ಆಕುಕ 359 ಹೆಚ್‌ಎಸ್‌ಹೆಚ್ 2016, ದಿನಾಂಕ:01-08-2016 (ಎಂಬಿಬಿಎಸ್ ವೈದ್ಯಾಧಿಕಾರಿಗಳ ಹುದ್ದೆಗೆ ಎದುರು ಆಯುಷ್ ವೈದ್ಯರ ನೇಮಕಾತಿ) ರಲ್ಲಿ ಆದೇಶಿಸಲಾಗಿದೆ.

ತಜ್ಞ ವೈದ್ಯರನ್ನು "On Call Basis" ಮೇಲೆ ತೆಗೆದುಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಆಕುಕ 178 ಹೆಚ್‌ಎಸ್‌ಹೆಚ್ 2011 ದಿನಾಂಕ: 20-05-2016ರಲ್ಲಿ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 554 ಹೆಚ್‌ಎಸ್‌ಹೆಚ್ 2016, ದಿನಾಂಕ: 22-11-2016 ರಲ್ಲಿ ಸೂಚಿತವಾದಂತೆ ತಜ್ಞ ವೈದ್ಯರುಗಳ ಎದುರು ಹುದ್ದೆಯಲ್ಲಿ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಯುಕ್ತರು, ಆರೋಗ್ಯ ಮತ್ತು ಕು.ಕ ಸೇವೆಗಳು, ಬೆಂಗಳೂರು ಸುತ್ತೋಲೆ ಸಂಖ್ಯೆ: ಜೆಆರ್‌ಓ(1ಎ)/101/2012-13, ದಿನಾಂಕ: 09-12-2016 ರಂತೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಜಿಲ್ಲಾ ಆಕುಕ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ವೈದ್ಯರ ಪದವಿಯನ್ನು ಸರ್ಕಾರಿ ಕೋಟಾದಲ್ಲಿ ಪೂರ್ಣಗೊಳಿಸಿದ ವೈದ್ಯರುಗಳನ್ನು 1 ವರ್ಷ ಕಡ್ಡಾಯ ಗ್ರಾಮೀಣ ಸೇವೆಯಡಿಯಲ್ಲಿ ವೈದ್ಯರುಗಳನ್ನು ನೇಮಿಸಿಕೊಳ್ಳಲಾಗುತ್ತಿದೆ.

ವೈದ್ಯರ ನೇಮಕಾತಿ ಸಮಾಲೋಚನೆ ನಂತರ ಹೆಚ್ಚಿನ ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಇರುವುದರಿಂದ ಕೆಪಿಎಸ್‌ಸಿ ಯಿಂದ ತಜ್ಞ ವೈದ್ಯರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹೆಚ್ಚುವರಿ ಪಟ್ಟಿಯನ್ನು ಕಳುಹಿಸಿಕೊಡುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿ:01.12.2018 ರಂದು ಪತ್ರ ಬರೆಯಲಾಗಿದೆ.

ಕರ್ನಾಟಕ ಲೋಕಸೇವಾ ಆಯೋಗದಿಂದ ಹೆಚ್ಚುವರಿ ಪಟ್ಟಿಯನ್ನು ನೀಡಿದನಂತರ ನಿಯಮಾನುಸಾರ ವೈದ್ಯರುಗಳಿಗೆ ನೇಮಕಾತಿ ಆದೇಶವನ್ನು ನೀಡಲು ಕ್ರಮವಹಿಸಲಾಗುತ್ತದೆ.

ಕಿರಿಯ ವೈದ್ಯಕೀಯ ಪ್ರಯೋಗಾಶಾಲಾ ಟೆಕ್ನಾಲಜಿಸ್ಟ್/ ಫಾರ್ಮಸಿಸ್ಟ್/ ಎಲೆಕ್ಟ್ರೀಷಿಯನ್/ ಸೋಷಿಯಲ್‌ವರ್ಕರ್/ ಡೆಂಟಲ್ ಮೆಕ್ಯಾನಿಕ್/ ಗ್ರೂಪ್-ಡಿ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರದಿಂದ ಅನುಮತಿ ನೀಡಲಾಗಿದೆ.

ಇಲಾಖೆಯ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ 2017-18ನೇ ಸಾಲಿನಲ್ಲಿ ಮತ್ತು 2018-19 ನೇ ಸಾಲಿನಲ್ಲಿ ವಿವಿಧ ಅರೆ ವೈದ್ಯಕೀಯ ಹುದ್ದೆಗಳಲ್ಲಿ 2181 ಹುದ್ದೆಗಳನ್ನು ನೇಮಕಾತಿ ಮಾಡಿ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 07 ಎಂಎಲ್ಎ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.02.2019.

ಇಂದ,

ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನಸಭೆ ಸದಸ್ಯರಾದ **ಶ್ರೀ ರೇಣುಕಾಚಾರ್ಯ ಎಂ.ಪಿ (ಹೊನ್ನಾಳಿ)** ಇವರ **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:979** ಕ್ಕೆ ಉತ್ತರಿಸುವ ಬಗ್ಗೆ.

---***---

ಮಾನ್ಯ ವಿಧಾನಸಭೆ ಸದಸ್ಯರಾದ **ಶ್ರೀ ರೇಣುಕಾಚಾರ್ಯ ಎಂ.ಪಿ (ಹೊನ್ನಾಳಿ)** ಇವರ **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:979** ಕ್ಕೆ ದಿನಾಂಕ:14.02.2019 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ಧಪಡಿಸಿ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Jacintha

(ಎಂ.ಜೆಸಿಂತಾ)
ಶಾಖಾಧಿಕಾರಿ (ತಾಂತ್ರಿಕ-I)
ಜಲಸಂಪನ್ಮೂಲ ಇಲಾಖೆ.

<u>ಪ್ರತಿಯನ್ನು:-</u>

1. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
4. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
5. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು, (ಸೇವೆಗಳು) ಜಲಸಂಪನ್ಮೂಲ ಇಲಾಖೆ.
6. ಸರ್ಕಾರದ ಉಪ ಕಾರ್ಯದರ್ಶಿ (ಕೆ.ಜಿ.ಜೆ.ಎನ್.ಎಲ್) ಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
7. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಜಿ ಮತ್ತು ಸಮನ್ವಯ) ಜಲಸಂಪನ್ಮೂಲ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 979
ಸದಸ್ಯರ ಹೆಸರು : ರೇಣುಕಾಚಾರ್ಯ ಎಂ.ಪಿ (ಹೊನ್ನಾಳಿ)
ಉತ್ತರಿಸುವ ದಿನಾಂಕ : 14.02.2019
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ತುಂಗಾ ಅಚ್ಚುಕಟ್ಟು ನಾಲೆಯ ಒಟ್ಟು ವಿಸ್ತೀರ್ಣ ಎಷ್ಟು; ಈ ನಾಲೆಯ ಆಧುನೀಕರಣಕ್ಕೆ ಯಾವ ವರ್ಷದಲ್ಲಿ ಮಂಜೂರಾತಿ ದೊರೆತಿದೆ; ಈ ನಾಲೆಯ ಆಧುನೀಕರಣಕ್ಕೆ ಮಂಜೂರಾದ ಮೊತ್ತ ಎಷ್ಟು; ಅದರಲ್ಲಿ ಬಿಡುಗಡೆಯಾದ ಮೊತ್ತ ಎಷ್ಟು;	ತುಂಗಾ ಅಣೆಕಟ್ಟು ಯೋಜನೆಯು ಒಟ್ಟು 8705 ಹೆ. ನೀರಾವರಿ ಪ್ರದೇಶವನ್ನು ಹೊಂದಿರುತ್ತದೆ. ದಿನಾಂಕ:28.06.2012 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ನಾಲೆಯ ಆಧುನೀಕರಣಕ್ಕೆ ರೂ.309.00 ಕೋಟಿ ಮಂಜೂರಾಗಿದ್ದು, ಸದರಿ ಯೋಜನೆಗೆ ಇಲ್ಲಿಯವರೆಗೆ ರೂ.123.11 ಕೋಟಿಗಳ ವೆಚ್ಚ ಮಾಡಲಾಗಿರುತ್ತದೆ.
ಆ)	ಈ ನಾಲೆಯ ಕಾಮಗಾರಿಯು ಪ್ರಗತಿಯಲ್ಲಿದೆಯೇ; ಪ್ರಗತಿಯಲ್ಲಿದ್ದಲ್ಲಿ ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸುವುದು ಇದರ ಬಗ್ಗೆ ಸರ್ಕಾರದ ಕ್ರಮ ಏನು;	ಪ್ರಗತಿಯಲ್ಲಿದೆ. ಕಾಮಗಾರಿಯನ್ನು 2019 ರ ಬೇಸಿಗೆ ಹಂಗಾಮಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
ಇ)	ಯಾವ ಯಾವ ಉಪ-ವಿಭಾಗ ಕಚೇರಿಗಳು ಈ ಕಾಮಗಾರಿಯನ್ನು ನಿರ್ವಹಿಸುತ್ತಿವೆ; ಈ ಪೈಕಿ ಹೊನ್ನಾಳಿ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ. ಕಾಮಗಾರಿ ನಡೆದಿದೆ; (ವಿವರ ನೀಡುವುದು)	1. ನಂ.5 ತುಂಗಾ ಮೇಲ್ದಂಡೆ ಯೋಜನಾ ಉಪವಿಭಾಗ, ಗಾಜನೂರು 2. ನಂ.3 ತುಂಗಾ ಮೇಲ್ದಂಡೆ ಯೋಜನಾ ಉಪವಿಭಾಗ, ಗಾಜನೂರು 3. ತುಂಗಾ ಮೇಲ್ದಂಡೆ ಯೋಜನೆ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಉಪವಿಭಾಗ, ಶಿವಮೊಗ್ಗ 4. ನಂ.4 ತುಂಗಾ ಅಣೆಕಟ್ಟು ಉಪವಿಭಾಗ, ಶಿವಮೊಗ್ಗ 5. ನಂ.6 ತುಂಗಾ ಮೇಲ್ದಂಡೆ ಯೋಜನಾ ಉಪವಿಭಾಗ, ಹೊನ್ನಾಳಿ ಉಪವಿಭಾಗ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ ಇಲ್ಲಿಯವರೆಗೆ 13 ಕಿ.ಮೀ. ಮುಖ್ಯ ಕಾಲುವೆ ಹಾಗೂ 12 ಕಿ.ಮೀ. ಉದ್ದದ ವಿತರಣಾ ಕಾಲುವೆಗಳ ಆಧುನೀಕರಣ ಕಾಮಗಾರಿ ಪೂರ್ಣಗೊಳಿಸಲಾಗಿರುತ್ತದೆ.
ಈ)	ತುಂಗಾ ಅಚ್ಚುಕಟ್ಟು ನಾಲೆಯು ಎಷ್ಟು ಜಿಲ್ಲೆಗಳ ವ್ಯಾಪ್ತಿಗೆ ಒಳಪಡುತ್ತದೆ; ಈ ನಾಲೆಯ ಕೊನೆ ಭಾಗದ ರೈತರಿಗೆ ನೀರು ಸರಿಯಾಗಿ ತಲುಪುತ್ತಿದೆಯೇ; ಈ ನಾಲೆಯ ಹೂಳನ್ನು ತೆಗೆಯುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕಾಗಿ ಎಷ್ಟು ಅನುದಾನ ಮಂಜೂರು ಆಗಿದೆ; ಯಾವಾಗ ಪ್ರಾರಂಭ ಮಾಡಲಾಗುವುದು? (ವಿವರ ನೀಡುವುದು)	ತುಂಗಾ ಅಣೆಕಟ್ಟು ಯೋಜನೆಯು ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. 1955 ರಲ್ಲಿ ಕಾಲುವೆಗಳನ್ನು ಮಣ್ಣಿನಲ್ಲಿ ನಿರ್ಮಾಣ ಮಾಡಲಾದ ಕಾರಣ, ಅಚ್ಚುಕಟ್ಟು ವ್ಯಾಪ್ತಿಯ ಕೊನೆ ಭಾಗಕ್ಕೆ ಸಮರ್ಪಕವಾಗಿ ನೀರು ಒದಗಿಸುವಲ್ಲಿ ವ್ಯತ್ಯಯವಾಗುತ್ತಿದೆ. ಆಧುನೀಕರಣ ಕಾಮಗಾರಿಯಡಿ ಕಾಲುವೆಯಲ್ಲಿರುವ ಹೂಳು ತೆಗೆಯಲು, ಸಿಮೆಂಟ್ ಕಾಂಕ್ರೀಟ್ ಲೈನಿಂಗ್ ಹಾಗೂ ಶಿಥಿಲಗೊಂಡಿರುವ ಅಡ್ಡ ಮೋರಿಗಳ ನಿರ್ಮಾಣಕ್ಕೆ ಅನುವು ಮಾಡಲಾಗಿರುವುದರಿಂದ ನಾಲೆಯಲ್ಲಿನ ಹೂಳು ತೆಗೆಯುವ ಬಗ್ಗೆ ಪ್ರತ್ಯೇಕ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಜಸಂಇ 07 ಎಂಎಲ್ಎ 2019

[ಡಿ.ಕೆ. ಶಿವಕುಮಾರ್]
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 15 ಎಂಎಲ್‌ಎ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.02.2019.

ಇಂದ,

ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ **ಬಸವರಾಜ ಎಸ್. ಬೊಮ್ಮಾಯಿ(ಶಿಗ್ಗಾಂವ್)** ಇವರ **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:98** ಕ್ಕೆ ಉತ್ತರಿಸುವ ಬಗ್ಗೆ.

---***---

ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ **ಬಸವರಾಜ ಎಸ್. ಬೊಮ್ಮಾಯಿ(ಶಿಗ್ಗಾಂವ್)** ಇವರ **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:98** ಕ್ಕೆ ದಿನಾಂಕ:14.02.2019 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ಧಪಡಿಸಿ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

13/2

(ಶ್ರೀಹರಿ ಎಸ್.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-1)
ಜಲಸಂಪನ್ಮೂಲ ಇಲಾಖೆ.

ಪ್ರತಿಯನ್ನು:-

1. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
4. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
5. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು, (ಸೇವೆಗಳು) ಜಲಸಂಪನ್ಮೂಲ ಇಲಾಖೆ.
6. ಸರ್ಕಾರದ ಉಪ ಕಾರ್ಯದರ್ಶಿ (ಕೆ.ಜಿ.ಜೆ.ಎನ್.ಎಲ್) ಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
7. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ ಮತ್ತು ಸಮನ್ವಯ) ಜಲಸಂಪನ್ಮೂಲ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	98
ಸದಸ್ಯರ ಹೆಸರು	:	ಶ್ರೀ.ಬಸವರಾಜ್ ಎಸ್.ಬೊಮ್ಮಾಯಿ (ಶಿಗ್ಗಾಂವ್)
ಉತ್ತರಿಸುವ ದಿನಾಂಕ	:	14.02.2019
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಶಿಗ್ಗಾಂವ ಏತ ನೀರಾವರಿ ಯೋಜನೆಯಿಂದ ನೀರಾವರಿಗೆ ಒಳಪಡುವ ಅಚ್ಚುಕಟ್ಟು ಪ್ರದೇಶಗಳು ಎಷ್ಟು?	ಶಿಗ್ಗಾಂವ ಏತ ನೀರಾವರಿ ಯೋಜನೆಯ ಅಡಿಯಲ್ಲಿ ಸುಮಾರು 13500 ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಹಾಗೂ 57 ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸಲು ಯೋಜಿಸಲಾಗಿರುತ್ತದೆ.
ಆ)	ಇಲ್ಲಿಯವರೆಗೆ ಎಷ್ಟು ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ	ಪ್ರಸ್ತುತ ಸದರಿ ಯೋಜನೆಯ ಅಡಿಯಲ್ಲಿ ಸುಮಾರು 9900 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ತುಂತುರು ನೀರಾವರಿ ಪದ್ಧತಿಯಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು, ತಾಲೂಕುವಾರು ವಿವರಗಳು ಈ ಕೆಳಗಿನಂತಿವೆ: 1)ಶಿಗ್ಗಾಂವ ತಾಲೂಕಿನ 12 ಗ್ರಾಮಗಳು: 4874.87 ಹೆಕ್ಟೇರ್ 2)ಸವಣೂರ ತಾಲೂಕಿನ 7 ಗ್ರಾಮಗಳು: 2635.99 ಹೆಕ್ಟೇರ್ 3)ಹಾನಗಲ್ಲ ತಾಲೂಕಿನ 6 ಗ್ರಾಮಗಳು: 2389.17 ಹೆಕ್ಟೇರ್
ಇ)	ಕಳೆದ ಮೂರು ವರ್ಷಗಳಲ್ಲಿ ಶಿಗ್ಗಾಂವ ಏತ ನೀರಾವರಿ ಯೋಜನೆಯಿಂದ ನೀರಾವರಿ ಸೌಲಭ್ಯಕ್ಕೆ ಒಳಪಟ್ಟ ಅಚ್ಚುಕಟ್ಟು ಪ್ರದೇಶಗಳು ಎಷ್ಟು? ಉಳಿದ ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯಗಳನ್ನು ಕಲ್ಪಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು: (ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಶಿಗ್ಗಾಂವ ಏತ ನೀರಾವರಿ ಯೋಜನೆಯಿಂದ 9900 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ 3600 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ಸಂಬಂಧಿಸಿದ ಹನಿ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಯ ಡಿ.ಪಿ.ಆರ್. ಮತ್ತು ಅಂದಾಜು ಪತ್ರಿಕೆಗಳನ್ನು ತಯಾರಿಸಲಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ.
ಈ)	ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನವನ್ನು ಪಡೆಯಲಾಗಿದೆ?(ವಿವರ ಒದಗಿಸುವುದು)	ಶಿಗ್ಗಾಂವ ಏತ ನೀರಾವರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಪಡೆದಿರುವುದಿಲ್ಲ.

ಸಂಖ್ಯೆ: ಜಸಂಇ 15 ಎಂಎಲ್ಎ 2019

[ಡಿ.ಕೆ. ಶಿವಕುಮಾರ್]
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 17 ಎನ್‌ಎಲ್‌ಎ 2019

ಕರ್ನಾಟಕ ಸರ್ಕಾರದ ಸಚಿವಾಲಯ,
3ನೇ ಮಹಡಿ, ವಿಕಾಸ ಸೌಧ,
ಬೆಂಗಳೂರು, ದಿನಾಂಕ:13-02-2019.

98
U/S
14/2/2019

ಇಂದ :
ಸರ್ಕಾರದ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀಮತಿ ಜ್ಯೋತಿ ಗಣೇಶ್.ಜಿ.ಬಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:686 ಕ್ಕೆ ಮಾಹಿತಿ ಸಲ್ಲಿಸುವ ಬಗ್ಗೆ.

** ** **

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀಮತಿ ಜ್ಯೋತಿ ಗಣೇಶ್.ಜಿ.ಬಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:686 ಕ್ಕೆ ಸಂಬಂಧಿಸಿದಂತೆ ಜಲ ಸಂಪನ್ಮೂಲ ಇಲಾಖೆಯ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

ಶಾಖಾಧಿಕಾರಿ (ತಾಂತ್ರಿಕ-2),
ಜಲ ಸಂಪನ್ಮೂಲ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 686
2. ಸದಸ್ಯರ ಹೆಸರು : ಶ್ರೀ ಜ್ಯೋತಿಗಣೇಶ್ ಜಿ.ಬಿ.
3. ಉತ್ತರಿಸಬೇಕಾದ ದಿನಾಂಕ : 14-02-2019
4. ಉತ್ತರಿಸುವ ಸಚಿವರು : ಮಾನ್ಯ ಜಲ ಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ	ಹೇಮಾವತಿ ನದಿಯು ಗೊರೂರು ಜಲಾಶಯದಿಂದ TBC, NBC ನಾಲೆಗಳಿಗೆ ನೀರು ಹರಿಸುವ ಮುಖ್ಯ ನಾಲೆಯ 0 ಕಿ.ಮೀ. ನಿಂದ 72ನೇ ಕಿ.ಮೀ ವರೆಗೆ ಕಳೆದ 3 ವರ್ಷಗಳಿಂದ ಕೈಗೊಂಡ ಸಾಮರ್ಥ್ಯ ಹೆಚ್ಚಳ ಹಾಗೂ ಆಧುನೀಕರಣ ಕಾಮಗಾರಿಗಳು ಯಾವುವು;	ಹೇಮಾವತಿ ಎಡದಂಡೆ ನಾಲೆಯ ವಿನ್ಯಾಸಿತ ಸಾಮರ್ಥ್ಯವಾದ 4000 ಕ್ಯೂಸೆಕ್ಸ್ ನೀರು ಹರಿಸಲು ಅನುಕೂಲವಾಗುವಂತೆ 2015-16 ನೇ ಸಾಲಿನಲ್ಲಿ ನಾಲೆಯನ್ನು ರೀ-ಮೋಡೆಲಿಂಗ್ ಮಾಡುವ ಕಾಮಗಾರಿಯನ್ನು ರೂ.650.00 ಕೋಟಿ ಅಂದಾಜು ಮೊತ್ತದೊಂದಿಗೆ ಕೈಗೊಳ್ಳಲಾಗಿರುತ್ತದೆ. ವಿನ್ಯಾಸಿತ ಸಾಮರ್ಥ್ಯದ ನೀರಿನ ಹರಿವಿಗೆ ಅಡಚಣೆಯುಂಟು ಮಾಡುತ್ತಿದ್ದಂತಹ ಹಾಗೂ ಶಿಥಿಲಾವಸ್ಥೆಯಲ್ಲಿದ್ದಂತಹ ರಸ್ತೆ ಸೇತುವೆಗಳು, ಗಾಡಿ ಸೇತುವೆಗಳು, ಅಂಡರ್ ಟನಲ್‌ಗಳು, ಮೂರು ಮೇಲ್ಗಾಲುವೆಗಳನ್ನು ಮರುನಿರ್ಮಿಸಿ ಸಂಪೂರ್ಣ ಉದ್ದಕ್ಕೆ ಶಿಥಿಲವಾಗಿದ್ದಂತಹ ಲೈನಿಂಗ್ ಕಾಮಗಾರಿ ಮತ್ತು ಏರಿ ಅಭಿವೃದ್ಧಿಯನ್ನು ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.
ಆ	ಇದಕ್ಕಾಗಿ ಎಷ್ಟು ಹಣ ವ್ಯಯಿಸಲಾಗಿದೆ; ಸಾಮರ್ಥ್ಯವನ್ನು ಯಾವ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ; ಕಾಮಗಾರಿ ಸಂಪೂರ್ಣ ಮುಗಿದಿದೆಯೇ; (ನಕ್ಷೆ ಸಹಿತ, ದಾಖಲೆಗಳ ಸಹಿತ ವಿವರ ನೀಡುವುದು)	ಹೇಮಾವತಿ ಎಡದಂಡೆ ನಾಲೆಯ ಸರ:0.00 ಯಿಂದ 72.00 ನೇ ಕಿಮೀ ವರೆಗೆ ರೀ-ಮೋಡೆಲಿಂಗ್ ಮಾಡುವ ಕಾಮಗಾರಿಗೆ ಇದುವರೆವಿಗೆ ರೂ.597.87 ಕೋಟಿ ವೆಚ್ಚ ಮಾಡಲಾಗಿದೆ. ಈ ಆಧುನೀಕರಣ ಕಾಮಗಾರಿಯಲ್ಲಿ ನಾಲೆಯ ನೀರಿನ ಹರಿವಿನ ಸಾಮರ್ಥ್ಯವನ್ನು 2800 ಕ್ಯೂಸೆಕ್ಸ್‌ನಿಂದ 4000 ಕ್ಯೂಸೆಕ್ಸ್‌ಗಳಿಗೆ ಹೆಚ್ಚಿಸಲಾಗಿದೆ. ಕಾಮಗಾರಿಯನ್ನು 2016-17 ನೇ ಸಾಲಿನಲ್ಲಿ ಭೌತಿಕವಾಗಿ ಪೂರ್ಣಗೊಳಿಸಲಾಗಿರುತ್ತದೆ. ನಕ್ಷೆಯನ್ನು **ಅನುಬಂಧ-1** ರಲ್ಲಿ ಹಾಗೂ ಛಾಯಾಚಿತ್ರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ.
ಇ	ಹೇಮಾವತಿ ತುಮಕೂರು ಶಾಖಾನಾಲೆ ಆರಂಭವಾಗುವ 70ನೇ ಕಿ.ಮೀ ನಿಂದ (ಮುಖ್ಯನಾಲೆಯಿಂದ) 165ನೇ ಕಿ.ಮೀಟರ್ ವರೆಗೆ ಹಾಗೂ ತುಮಕೂರು, ಕುಣಿಗಲ್‌ವರೆಗೆ	ಹೇಮಾವತಿ ತುಮಕೂರು ಶಾಖಾನಾಲೆ ಆರಂಭವಾಗುವ 70ನೇ ಕಿ.ಮೀ ನಿಂದ (ಮುಖ್ಯನಾಲೆಯಿಂದ) 165ನೇ ಕಿ.ಮೀಟರ್ ವರೆಗೆ ಹಾಗೂ ತುಮಕೂರು, ಕುಣಿಗಲ್‌ವರೆಗೆ ನಾಲೆಗಳ ಆಧುನೀಕರಣ ಮಾಡುವ ಪ್ರಸ್ತಾವನೆ ಇದ್ದು ಡಿ.ಪಿ.ಆರ್. ಅನ್ನು ತಯಾರಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. NBC ನಾಲೆಗಳ ಆಧುನೀಕರಣ


ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
	ಹಾಗೂ NBC ನಾಲೆಗಳ ಆಧುನೀಕರಣ ಹಾಗೂ ಸಾಮರ್ಥ್ಯ ಹೆಚ್ಚಿಸುವ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; (ಯೋಜನೆವಾರು ಸಮಗ್ರ ಮಾಹಿತಿ ನೀಡುವುದು)	ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.
ಈ	ಹೇಮಾವತಿ ತುಮಕೂರು ಮುಖ್ಯ ನಾಲೆಯಿಂದ ಚನ್ನಪಟ್ಟಣ, ಮಾಗಡಿ, ರಾಮನಗರ ತಾಲ್ಲೂಕು / ಪಟ್ಟಣಗಳಿಗೆ ನೀರು ಕೊಂಡೊಯ್ಯಲು ನೇರವಾದ ಎಕ್ಸ್‌ಪ್ರೆಸ್ ಕೆನಾಲ್ ನಿರ್ಮಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ; ಈ ಬಗ್ಗೆ ಯೋಜನೆ ರೂಪಿಸಿದ್ದಲ್ಲಿ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? (ದಾಖಲೆ / ನಕ್ಷೆ ಸಹಿತ ಸಮಗ್ರ ಮಾಹಿತಿ ನೀಡುವುದು)	ಹೇಮಾವತಿ ತುಮಕೂರು ಮುಖ್ಯ ನಾಲೆಯಿಂದ ಚನ್ನಪಟ್ಟಣ, ಮಾಗಡಿ, ರಾಮನಗರ ತಾಲ್ಲೂಕು / ಪಟ್ಟಣಗಳಿಗೆ ನೀರು ಕೊಂಡೊಯ್ಯಲು ನೇರವಾದ ಎಕ್ಸ್‌ಪ್ರೆಸ್ ಕೆನಾಲ್ ನಿರ್ಮಿಸುವ ಯೋಜನೆ ನಿಗಮದ ಮುಂದಿದೆ. ಹೇಮಾವತಿ ತುಮಕೂರು ಶಾಖಾ ನಾಲೆ 70ನೇ ಕಿ.ಮೀ.ನಿಂದ 165.60 ಕಿ.ಮೀ.ವರೆಗೆ ಸಂಪರ್ಕಿಸುವ ನಾಲಾ ನಿರ್ಮಾಣಕ್ಕೆ (ಲಿಂಕ್ ಕೆನಾಲ್) ಡಿ.ಪಿ.ಆರ್. ಅನ್ನು ರೂ.614.00 ಕೋಟಿಗಳಿಗೆ ತಯಾರಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. (ನಕ್ಷೆಯನ್ನು **ಅನುಬಂಧ-3** ರಲ್ಲಿ ಲಗತ್ತಿಸಿದೆ.)

ಸಂಖ್ಯೆ:ಜಸಂಇ 17 ಎಲ್‌ಎಕ್ಯೂ 2019

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು


ಅನುಬಂಧ –1


REMODELLING OF HLBC



ಅನುಬಂಧ -2

Road Bridge @ Ch:7718 m





Before and After Construction

Under Tunnel @ Ch:8300 m





Before and After Construction


Deep Cut @ Ch:14900 m






Before and After Construction

Aqueduct @ Ch:19100 m






Before and After Construction

Under Tunnel @ Ch:25550 m






Before and After Construction


Lining @ Ch:27350 m






Before and After Construction

Super Passage@ Ch:35072 m




Hebballa Aqueduct @ Ch:35886 m




Escape/ Regulator at Ch: 52322 m

Before Construction



During Construction



Kalasinda Aqueduct at Ch: 71772 m


During Construction





Under Tunnel at Ch: 55447 m

Before Construction




During Construction




Under Tunnel at Ch: 56952 m

Before Construction




During Construction



ಅನುಬಂಧ - 3


ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:70.00 ಕಿ.ಮೀ. ನಿಂದ 165.60 ಕಿ.ಮೀಗೆ. ವರೆಗೂ ಸಂಪರ್ಕ ಕಲ್ಪಿಸುವ ಪೈಪ್ ಲೈನ್ ಕಾಮಗಾರಿ



ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:70.00 ಕಿ.ಮೀ. ನಿಂದ 165.60 ಕಿ.ಮೀಗೆ. ವರೆಗೂ ಸಂಪರ್ಕ ಕಲ್ಪಿಸುವ

ಪೈಪ್ ಲೈನ್ ಕಾಮಗಾರಿ:

Fig: Schematic map with discharge as per Project report



ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 05 ಎಂಎಲ್ಎ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.02.2019.

61
14/2/19

ಇಂದ:

ಸರ್ಕಾರದ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಭೀಮಾ ನಾಯ್ಕ ಎಲ್.ಬಿ.ಪಿ. (ಹಗರಿಬೊಮ್ಮನಹಳ್ಳಿ), ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 620 ರ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಭೀಮಾ ನಾಯ್ಕ ಎಲ್.ಬಿ.ಪಿ. (ಹಗರಿಬೊಮ್ಮನಹಳ್ಳಿ), ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 620 ಕ್ಕೆ ದಿನಾಂಕ: 14.02.2019 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ಧಪಡಿಸಿ 300 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

(ಎಸ್.ಎನ್.ಕೇಶವಪ್ರಕಾಶ್),
ತಾಂತ್ರಿಕ ಸಹಾಯಕರು (ತಾಂತ್ರಿಕ-6) (A/C)
ಜಲಸಂಪನ್ಮೂಲ ಇಲಾಖೆ.

ಪ್ರತಿಯನ್ನು:

1. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
4. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಯವರ ಆಪ್ತ ಸಹಾಯಕರು, ಜಲ ಸಂಪನ್ಮೂಲ ಇಲಾಖೆ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸೇವೆಗಳು-ಬಿ), ಜಲ ಸಂಪನ್ಮೂಲ ಇಲಾಖೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ), ಜಲ ಸಂಪನ್ಮೂಲ ಇಲಾಖೆ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	620
ಸದಸ್ಯರ ಹೆಸರು :	ಶ್ರೀ ಭೀಮಾ ನಾಯ್ಕ ಎಲ್.ಬಿ.ಪಿ. (ಹಗರಿಬೊಮ್ಮನಹಳ್ಳಿ)
ಉತ್ತರಿಸಬೇಕಾದ ದಿನಾಂಕ :	14.02.2019
ಉತ್ತರಿಸುವ ಸಚಿವರು :	ಜಲಸಂಪನ್ಮೂಲ ಸಚಿವರು (ಭಾರಿ ಮತ್ತು ಮಧ್ಯಮ ನೀರಾವರಿ)

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ.	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಜಲಸಂಪನ್ಮೂಲ ಇಲಾಖೆಯ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಅನುದಾನ ಮಂಜೂರು ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.	ಬಂದಿದೆ.
ಆ.	ಹಾಗಿದ್ದಲ್ಲಿ, ಯಾವಾಗ ಅನುದಾನ ಮಂಜೂರು ಮಾಡಲಾಗುವುದು. (ಸಂಪೂರ್ಣ ವಿವರ ನೀಡುವುದು.)	ಮಾನ್ಯ ಶಾಸಕರ ಕೋರಿಕೆಯಂತೆ, ಹಗರಿಬೊಮ್ಮನಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ 2018-19ನೇ ಸಾಲಿಗಾಗಿ ಹಾಲಿ ಬಿಡುಗಡೆಯಾಗಿರುವ ವಿಶೇಷ ಘಟಕ ಯೋಜನೆ (SCP) ಯಡಿ ರೂ.125.00 ಲಕ್ಷಗಳು ಹಾಗೂ ಗಿರಿಜನ ಉಪಯೋಜನೆ (TSP) ಯಡಿ ರೂ.75.00 ಲಕ್ಷಗಳ ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕಾಗಿ ನಂ.1, ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್ ಕಛೇರಿಯಿಂದ ಈಗಾಗಲೇ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಟೆಂಡರ್ ಮೂಲಕ ಕೈಗೆತ್ತಿಕೊಳ್ಳುತ್ತಿರುವ ಕಾಮಗಾರಿಗಳ ವಿವರ: (ರೂ. ಲಕ್ಷಗಳಲ್ಲಿ)

ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ವಿಶೇಷ ಘಟಕ ಯೋಜನೆ ಕಾಮಗಾರಿಗಳು		
1	ಕೆ.ಕೆ. ತಾಂಡದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
2	ಬಾಚಿಗೊಂಡನಹಳ್ಳಿ-1 ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
3	ಬಾಚಿಗೊಂಡನಹಳ್ಳಿ-2 ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
4	ಕಿತ್ನೂರು ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
5	ನಕ್ರಾಳ ತಾಂಡದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	20.00
6	ಮಾಲವಿ ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
7	ಚಿಮ್ಮಹಳ್ಳಿ ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
8	ಅಡವಿ ಆನಂದೇವನಹಳ್ಳಿ ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
	ಒಟ್ಟು:	125.00

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
		ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಗಿರಿಜನ ಉಪ ಯೋಜನೆ ಕಾಮಗಾರಿಗಳು

1	ಉಲವತ್ತಿ ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
2	ವಟ್ಟಮ್ಮನಹಳ್ಳಿ ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
3	ಬ್ಯಾಲಾಳು ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
4	ಕ್ಯಾತಯನ ಮರಡಿ ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
5	ಚಿಲಗೋಡು ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಡ್ರೈನ್ ನಿರ್ಮಾಣ.	15.00
	ಒಟ್ಟು:	75.00
	ಒಟ್ಟು ಎಸ್‌ಸಿಪಿ & ಟಿಎಸ್‌ಪಿ	200.00

ಸಂಖ್ಯೆ: ಜಸಂಇ 05 ಎಂಎಲ್ಎ 2019

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಕಸಂವಾ 17 ಕೆಓಎಲ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.02.2019

109 ಬಿ೨
14/2/19

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನಸಭೆಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 892ಕ್ಕೆ ಉತ್ತರಿಸುವ ಬಗ್ಗೆ

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ವಿಧಾನಸಭೆಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 892ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಾನು ನಿರ್ದೇಶಿಸಲ್ಪಟ್ಟಿರುತ್ತೇನೆ.

ತಮ್ಮ ನಂಬುಗೆಯ,

(ಹೆಚ್.ಕೆ.ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	892
ಸದಸ್ಯರ ಹೆಸರು	ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	14.02.2019
ಉತ್ತರಿಸುವ ಸಚಿವರು	ಮಾನ್ಯ ಜಲಸಂಪನ್ಮೂಲ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಗ್ರಾಮೀಣ ಕ್ಷೇತ್ರದ ಮಹಾರಾಷ್ಟ್ರ ಗಡಿ ಭಾಗದಲ್ಲಿರುವ ಗ್ರಾಮಗಳಲ್ಲಿ ಕನ್ನಡ ಭಾಷೆ ಹಾಗೂ ಶೈಕ್ಷಣಿಕ ಮಟ್ಟದ ಸುಧಾರಣೆಗೆ ಇಲಾಖೆ ಕೈಗೊಂಡಿರುವ ಯೋಜನೆಗಳಾವುವು;	**<u>ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ:</u>** ಬೆಳಗಾವಿ ಜಿಲ್ಲೆಯು ಗಡಿ ಜಿಲ್ಲೆಯಾಗಿದ್ದು, ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಗಡಿ ತಾಲ್ಲೂಕುಗಳಾದ ಬೆಳಗಾವಿ, ಅಥಣಿ, ಹುಕ್ಕೇರಿ, ಚಿಕ್ಕೋಡಿ, ಖಾನಾಪುರ ತಾಲ್ಲೂಕುಗಳು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತವೆ. ಈ ತಾಲ್ಲೂಕುಗಳಲ್ಲಿನ ಗ್ರಾಮಗಳಲ್ಲಿ ಕನ್ನಡ ಭಾಷೆ ಹಾಗೂ ಶೈಕ್ಷಣಿಕ ಮಟ್ಟದ ಸುಧಾರಣೆಗಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. 1) ಶಾಲಾ ಕೊಠಡಿ ನಿರ್ಮಾಣ 2) ಗ್ರಂಥಾಲಯ ನಿರ್ಮಾಣ 3) ಸರ್ಕಾರಿ ಶಾಲಾ ಕಾಲೇಜುಗಳ ಆವರಣ ಗೋಡೆ ನಿರ್ಮಾಣ 4) ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಶೌಚಾಲಯ ನಿರ್ಮಾಣ 5) ಶಾಲೆಗಳಿಗೆ ಸಾಂಸ್ಕೃತಿಕ ಭವನ ನಿರ್ಮಾಣ 6) ಶಾಲೆಗಳಿಗೆ ರಸ್ತೆ ಅಭಿವೃದ್ಧಿ 7) ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ 8) ಗಣಕಯಂತ್ರ ಕೊಠಡಿ ನಿರ್ಮಾಣ ಹಾಗೂ ಗಣಕಯಂತ್ರ ಖರೀದಿ 9) ಶಾಲೆಗಳಲ್ಲಿ ಆಟದ ಮೈದಾನ. **<u>ಕನ್ನಡ ಅಭಿವೃದ್ಧಿ ಪ್ರಾಧಿಕಾರ:</u>** ಆಡಳಿತ ವ್ಯವಸ್ಥೆಯಲ್ಲಿ ಕನ್ನಡ ಅನುಷ್ಠಾನ ಪರಾಮರ್ಶೆಯನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಹಾಗೂ ಆಡಳಿತದಲ್ಲಿ ಕನ್ನಡದ ಅನುಷ್ಠಾನದ ಕುರಿತಂತೆ ಜಿಲ್ಲಾಡಳಿತದ ಆಡಳಿತ ವ್ಯವಸ್ಥೆಯನ್ನು ಕಾಲಕಾಲಕ್ಕೆ ಪರಿಶೀಲನೆ ಮಾಡುವ ನಿರಂತರ ಜವಾಬ್ದಾರಿಯನ್ನು ನಿರ್ವಹಿಸುತ್ತಿರುತ್ತದೆ.

ಆ)	ಗಡಿ ಭಾಗದ ಕನ್ನಡ ಶಾಲೆಗಳ ಪರಿಸ್ಥಿತಿ ಸುಧಾರಣೆಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು?	**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ:** ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ರಾಜ್ಯದ 19 ಗಡಿ ಜಿಲ್ಲೆಗಳ 52 ಗಡಿ ತಾಲ್ಲೂಕುಗಳಿಗೆ ಪ್ರತಿವರ್ಷವೂ ಗಡಿ ಭಾಗದ ಕನ್ನಡ ಶಾಲೆಗಳ ಪರಿಸ್ಥಿತಿ ಸುಧಾರಣೆಗೆ ಧನಸಹಾಯವನ್ನು ಬಿಡುಗಡೆ ಮಾಡುತ್ತಾ ಬಂದಿದೆ.

ಸಂಖ್ಯೆ: ಕಸಂವಾ 17 ಕೆಎಲ್ 2019.

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಕಸಂವಾ 18 ಕೆಎಲ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.02.2019

221 U/S
14/2/19

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನಸಭೆಯ ಸದಸ್ಯರಾದ ಶ್ರೀ ವೇದವ್ಯಾಸ ಕಾಮತ್. ಡಿ (ಮಂಗಳೂರು ನಗರ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 681ಕ್ಕೆ ಉತ್ತರಿಸುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ವಿಧಾನಸಭೆಯ ಸದಸ್ಯರಾದ ಶ್ರೀ ವೇದವ್ಯಾಸ ಕಾಮತ್. ಡಿ (ಮಂಗಳೂರು ನಗರ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 681ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಾನು ನಿರ್ದೇಶಿಸಲ್ಪಟ್ಟಿರುತ್ತೇನೆ.

ತಮ್ಮ ನಂಬುಗೆಯ,

(ಹೆಚ್.ಕೆ.ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	681
ಸದಸ್ಯರ ಹೆಸರು	ಶ್ರೀ ವೇದವ್ಯಾಸ ಕಾಮತ್. ಡಿ (ಮಂಗಳೂರು ನಗರ ದಕ್ಷಿಣ)
ಉತ್ತರಿಸಬೇಕಾದ ದಿನಾಂಕ	14.02.2019
ಉತ್ತರಿಸುವ ಸಚಿವರು	ಮಾನ್ಯ ಜಲಸಂಪನ್ಮೂಲ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
ಅ)	ಕರಾವಳಿ ಪ್ರದೇಶದಲ್ಲಿ ಅತಿ ಹೆಚ್ಚು ಮಾತನಾಡುವ ತುಳು ಭಾಷೆಯನ್ನು ಅನುಚ್ಛೇದ 8ರಲ್ಲಿ ಸೇರಿಸಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ತುಳು ಭಾಷೆಯನ್ನು ಅನುಚ್ಛೇದ 8ರಲ್ಲಿ ಸೇರಿಸಿ, ಒಂದು ಭಾಷೆ ಎಂದು ಘೋಷಣೆ ಮಾಡಲು ಸರ್ಕಾರ ಕ್ರಮಕೈಗೊಂಡಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ತುಳು ಭಾಷೆಯನ್ನು ಭಾರದ ಸಂವಿಧಾನದ ಅನುಚ್ಛೇದ 8ರಲ್ಲಿ ಸೇರಿಸಲು ದಿನಾಂಕ: 02.12.2013 ರಂದು ಮಾನ್ಯ ಮುಖ್ಯಮಂತ್ರಿಯವರು ಹಾಗೂ ದಿನಾಂಕ: 28.08.2014 ರಂದು ಮಾನ್ಯ ಇಲಾಖಾ ಸಚಿವರು ಮತ್ತು ದಿನಾಂಕ: 29.10.2014 ರಂದು ಇಲಾಖಾ ಕಾರ್ಯದರ್ಶಿಯವರು ಕೇಂದ್ರ ಸರ್ಕಾರಕ್ಕೆ ಪತ್ರ ಮುಖೇನ ಕೋರಿರುತ್ತಾರೆ. ಪ್ರಸ್ತುತ ಸದರಿ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.
ಇ)	ಇಲ್ಲವಾದಲ್ಲಿ ಸರ್ಕಾರಕ್ಕೆ ಇರುವ ಅಡೆತಡೆಗಳೇನು? (ಸಂಪೂರ್ಣ ವಿವರ ನೀಡುವುದು)	ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಕಸಂವಾ 18 ಕೆಬಿಎಲ್ 2019.

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 15 ಡಬ್ಲ್ಯೂಎಲ್ಎ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.02.2019.

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560001.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು-560001.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 185ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/3ಅ/ಪ್ರ.ಸಂ.185/2019, ದಿ:06.02.2019.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 185ಕ್ಕೆ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಎನ್.ಕೇಶವಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-4)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 185
2. ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
3. ಉತ್ತರಿಸಬೇಕಾದ ದಿನಾಂಕ : 14.02.2019
4. ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ನನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ಕೆರೆ ತುಂಬಿಸುವ ಯೋಜನೆಯ ಟೆಂಡರ್ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ; ಟೆಂಡರ್ ಪ್ರಕ್ರಿಯೆ ಮುಗಿದಿದ್ದಲ್ಲಿ, ಕೆಲಸವನ್ನು ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲಾಗುವುದು;	ಬೆಳಗಾವಿ ಜಿಲ್ಲೆಯ ಕಿತ್ತೂರು ಮತ್ತು ಬೈಲಹೊಂಗಲ ಮತಕ್ಷೇತ್ರದ 64 ಕೆರೆಗಳನ್ನು ಮಲಪ್ರಭಾ ನದಿಯಿಂದ ತುಂಬಿಸುವ ಯೋಜನೆಯ ಟೆಂಡರ್‌ನ್ನು ದಿನಾಂಕ: 01.02.2019ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿದ್ದು, ಮಂಡಳಿಯ ನಿರ್ದೇಶನದಂತೆ ಕ್ರಮ ಜರುಗಿಸಲಾಗುವುದು. ಸದರಿ ಕಾಮಗಾರಿಯ ಕಾಲಾವಧಿಯು 24 (ಮಳೆಗಾಲ ಸೇರಿ) ತಿಂಗಳುಗಳಾಗಿರುತ್ತದೆ.
ಆ)	ಈ ಟೆಂಡರ್‌ನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ;	ಸದರಿ ಕಾಮಗಾರಿಯಲ್ಲಿ ಮೆ॥ ಮೇಘ ಇಂಜಿನಿಯರಿಂಗ್ & ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂ.ಇ.ಐ.ಎಲ್) ಹೈದರಾಬಾದ್ ಇವರು ಎಲ್–1 ಬಿಡ್ಡುದಾರರಾಗಿರುತ್ತಾರೆ. ಮಂಡಳಿಯ ನಿರ್ದೇಶನದಂತೆ ಮುಂದಿನ ಅಗತ್ಯ ಕ್ರಮಕೈಗೊಳ್ಳಲಾಗುವುದು.
ಇ)	ಮುಂಬರುವ ಸಾರ್ವತ್ರಿಕ ಚುನಾವಣೆಗೆ ನೀತಿ ಸಂಹಿತೆ ಜಾರಿಯಾಗುವುದರೊಳಗೆ ಕೆಲಸ ಪ್ರಾರಂಭಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?	ಸದರಿ ಕಾಮಗಾರಿಯ ಟೆಂಡರ್‌ಗೆ ನಿಗಮದ ಮಂಡಳಿಯ ಅನುಮೋದನೆ ದೊರೆತ ನಂತರ ಕೂಡಲೇ ನಿಯಮಾನುಸಾರ ಟೆಂಡರ್‌ನ್ನು ಗುತ್ತಿಗೆದಾರರಿಗೆ ವಹಿಸಿ, ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಜಸಂಇ 15 ಡಬ್ಲ್ಯೂಎಲ್ಎ 2019

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 14 ಡಬ್ಲ್ಯೂಬಿಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.02.2019

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 905ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 905ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಡನೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಐ.ಎಸ್.ರುದ್ರಯ್ಯ)
ಶಾಖಾಧಿಕಾರಿ
ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ-5)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 905
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸುವ ದಿನಾಂಕ : 14.02.2019
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಇಂಡಿ ತಾಲ್ಲೂಕಿನ ನೀರಾವರಿ ವಂಚಿತ ಪ್ರದೇಶಗಳಿಗೆ ಆಲಮಟ್ಟಿ ಜಲಾಶಯ ಗಳಿಂದ ಪೈಪ್ ಲೈನ್ ಮೂಲಕ ಏತ ನೀರಾವರಿ (ತಿಡಗುಂದಿ ವಿಸ್ತರಣೆ ಕಾಲುವೆ) ಸೌಲಭ್ಯವನ್ನು ಒದಗಿಸುವ ಕುರಿತ ಪ್ರಸ್ತಾವನೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಬಂದಿರುವುದು ನಿಜವೇ;	ಬಂದಿದೆ.
ಆ)	ಬಂದಿದ್ದಲ್ಲಿ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಆಸಕ್ತಿ ಹೊಂದಿದೆಯೇ;	ಹೌದು.
ಇ)	ಹಾಗಿದ್ದಲ್ಲಿ, ಸದರಿ ಯೋಜನೆಯ ರೂಪರೇಷೆಗಳೇನು; ಪ್ರಸ್ತುತ ಯಾವ ಹಂತದಲ್ಲಿದೆ (ವಿವರ ನೀಡುವುದು)	ಇಂಡಿ ತಾಲ್ಲೂಕಿನ ನೀರಾವರಿ ವಂಚಿತ ಪ್ರದೇಶಗಳಿಗೆ ಆಲಮಟ್ಟಿ ಜಲಾಶಯದಿಂದ ಪೈಪ್ ಲೈನ್ ಮೂಲಕ ಏತ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವ ಕುರಿತಾಗಿ ನೀರಿನ ಲಭ್ಯತೆ, ತಾಂತ್ರಿಕ ಸಾಧ್ಯ ಸಾಧ್ಯತೆಯ ಪರ್ಯಾಯ ಪ್ರಸ್ತಾವನೆಗಳನ್ನು ದಿನಾಂಕ:05.11.2018 ಮತ್ತು 05.12.2018ರಂದು ಜರುಗಿದ ಕೃಷ್ಣಾ ಭಾಗ್ಯ ಜಲ ನಿಗಮದ 11ನೇ ತಾಂತ್ರಿಕ ಉಪ ಸಮಿತಿಯಲ್ಲಿ ಮಂಡಿಸಲಾಗಿದ್ದು, ಸಮಿತಿಯು ಪರ್ಯಾಯ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯ ಸಾಧ್ಯತೆ ಕುರಿತಂತೆ ಪರಿಶೀಲಿಸಲು ಸೂಚಿಸಿದ್ದು ಅದರಂತೆ ಕ್ರಮ ಜರುಗಿಸಲಾಗುತ್ತಿದೆ. 11ನೇ ತಾಂತ್ರಿಕ ಉಪ ಸಮಿತಿಯ ನಡವಳಿಯ ಉದ್ಧೃತ ಭಾಗವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.
ಈ)	ಈ ವಿಷಯದ ಬಗ್ಗೆ ನಿಗಮದ ತಾಂತ್ರಿಕ ಉಪ ಸಮಿತಿಯ ಸಭೆಯಲ್ಲಿ (ಟಿ.ಎಸ್.ಸಿ) ಚರ್ಚಿಸಲಾಗಿದೆಯೇ; ಚರ್ಚಿಸಿದ್ದಲ್ಲಿ ಕೈಗೊಂಡಿರುವ ನಿರ್ಣಯವೇನು; (ಸಭಾ ನಡವಳಿಯ ಪ್ರತಿಯೊಂದಿಗೆ ವಿವರ ನೀಡುವುದು)	
ಉ)	ಪ್ರತ್ಯೇಕ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳುವುದರಿಂದ ಎಷ್ಟು ಹೆಕ್ಟೇರ್ ಪ್ರದೇಶವು ನೀರಾವರಿ ಸೌಲಭ್ಯವನ್ನು ಹೊಂದಲಿದೆ; ಈ ಯೋಜನೆಗೆ ಬೇಕಾಗುವ ನೀರಿನ ಪ್ರಮಾಣ ಎಷ್ಟು ಮತ್ತು ಯೋಜನಾ ವೆಚ್ಚ ಎಷ್ಟು; (ವಿವರ ನೀಡುವುದು)	ಪ್ರತ್ಯೇಕ ಏತ ನೀರಾವರಿ ಯೋಜನೆ ಕೈಗೊಳ್ಳುವ ಕುರಿತು 11ನೇ ನಿಗಮದ ತಾಂತ್ರಿಕ ಉಪ ಸಮಿತಿಯು ನೀರಿನ ಲಭ್ಯತೆ, ತಾಂತ್ರಿಕ ಮತ್ತು ಆರ್ಥಿಕ ಸಾಧ್ಯ ಸಾಧ್ಯತೆಯ ಪರ್ಯಾಯ ಪ್ರಸ್ತಾವನೆಗಳನ್ನು ಪರಿಶೀಲಿಸಲು ಸೂಚಿಸಿದ್ದು ಅದರಂತೆ ಕ್ರಮ ಜರುಗಿಸಲಾಗುತ್ತಿದೆ. ತಾಂತ್ರಿಕ ಉಪ ಸಮಿತಿಯಿಂದ ತಿರುವಳಿ ಪಡೆದು ಯೋಜನಾ ವರದಿಯನ್ನು ತಯಾರಿಸಿದ ನಂತರ ಸದರಿ ಯೋಜನೆಗೆ ಬೇಕಾಗುವ ನೀರಿನ ಪ್ರಮಾಣ ಮತ್ತು ವೆಚ್ಚದ ವಿವರಗಳು ನಿಖರವಾಗಿ ತಿಳಿಯುವುದು.

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಊ)	ಈ ಯೋಜನೆಗೆ ಯಾವಾಗ ಮಂಜೂರಾತಿ ನೀಡಲಾಗುವುದು ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು; (ವಿವರ ನೀಡುವುದು)	• ಇಂಡಿ ತಾಲ್ಲೂಕಿನ ನೀರಾವರಿ ವಂಚಿತ ಪ್ರದೇಶಗಳಿಗೆ ಆಲಮಟ್ಟಿ ಜಲಾಶಯದಿಂದ ಪೈಪ್ ಲೈನ್ ಮೂಲಕ ಏತ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವ ಕುರಿತಾಗಿ ನೀರಿನ ಲಭ್ಯತೆ, ತಾಂತ್ರಿಕ ಸಾಧ್ಯ ಸಾಧ್ಯತೆಯ ಪರ್ಯಾಯ ಪ್ರಸ್ತಾವನೆಗಳನ್ನು ದಿನಾಂಕ:05.11.2018 ಮತ್ತು 05.12.2018ರಂದು ಜರುಗಿದ ಕೃಷ್ಣಾ ಭಾಗ್ಯ ಜಲ ನಿಗಮದ 11ನೇ ತಾಂತ್ರಿಕ ಉಪ ಸಮಿತಿಯಲ್ಲಿ ಮಂಡಿಸಲಾಗಿರುತ್ತದೆ. • ಸಮಿತಿಯು ಪರ್ಯಾಯ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯ ಸಾಧ್ಯತೆ ಕುರಿತಂತೆ ಪರಿಶೀಲಿಸಲು ಸೂಚಿಸಿದ್ದು, ಅದರಂತೆ ಸೂಕ್ತ ಕ್ರಮ ಜರುಗಿಸಲಾಗುವುದು.
ಋ)	2019-20ನೇ ಸಾಲಿನಲ್ಲಿ ಸದರಿ ಯೋಜನೆಗೆ ಆಯವ್ಯಯದಲ್ಲಿ ಕಾಯ್ದಿರಿಸಿದ/ ನಿಗದಿಪಡಿಸಿದ ಅನುದಾನ ಎಷ್ಟು?	ಸರ್ಕಾರವು 2019-20ರ ಆಯವ್ಯಯ ಭಾಷಣದಲ್ಲಿ ರೂ.250.00 ಕೋಟಿ ವೆಚ್ಚದಲ್ಲಿ ಇಂಡಿ ಹಾಗೂ ನಾಗಠಾಣ ವ್ಯಾಪ್ತಿಯ 28,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಹೊರ್ತಿ - ರೇವಣಸಿದ್ಧೇಶ್ವರ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಘೋಷಿಸಿದೆ.

ಸಂಖ್ಯೆ: ಜಸಂಇ 14 ಕೆಬಿಜೆಎನ್ಎಲ್ 2019

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.905 ಕ್ಕೆ ಅನುಬಂಧ-1

PROCEEDINGS OF THE 11th MEETING OF TECHNICAL SUB COMMITTEE OF KRISHNA BHAGYA JALA NIGAM LIMITED HELD ON 5th NOVEMBER 2018 AND CONTINUED MEETINGS HELD ON 15TH NOVEMBER 2018 AND 5TH DECEMBER 2018 IN THE MEETING HALL, KBJNL REGD.OFFICE, BANGALORE.

Sub No.6: Report on Additional area (Beyond Contemplated) of Tidagundi Branch Canal under Mulwad LIS Stage –III.

Mulwad Lift Irrigation Scheme is taken on foreshore of Almatti reservoir. The Mulwad LIS is contemplated to be executed under Scheme A (Stage - I and II) and Stage-III of Upper Krishna Project. Under Scheme - A of MLIS it is contemplated to irrigate 30850 Ha. (ICA) of lands up to contour RL.560.00 M and these works are already completed. Stage-III of MLIS is contemplated to irrigate 2, 27,966 Ha (ICA) of lands up to contour RL.640.00 M.Bijapur main Canal is proposed to irrigate an area of 166387.88 Ha with required discharge at head of 92.428 Cumecs with 115% cropping intensity. The I.C.A. of Bijapur Main Canal comprises of I.C.A. of Huvina Hipparagi Branch Canal (I.C.A. 23676 Ha), Basavana Bagewadi Branch Canal (I.C.A. 22648 Ha), Tidagundi Branch Canal (I.C.A. 25572 Ha) between RL 580.00 to 560.00 m and 4th - B lift Canals between RL 640.00 to 590.00 m viz., Sankanal Branch Canal (I.C.A. 12471 Ha), Salwadagi Branch Canal (I.C.A. 10868), Dindwar Branch Canal (I.C.A. 2866 Ha) and Takkalaki Branch Canal (I.C.A. 9559 Ha).

Tidagundi Branch Canal:

6.2. Tidagundi Branch Canal runs in two taluks of Bijapur district namely, Bijapur taluk and Indi taluk. It commands the area between the RL 580.000 m to 560.000 m. It takes off from the Bijapur Main Canal at Ch: 70.05 Km and runs for a length of 62.00 Kms to irrigate 25572 Ha with required discharge of 14.205 Cumec at head. Designed Discharge is 14.259 Cumecs. The proposed section at Km 0.00 is 3.25 m (Bed Width) × 2.50 m (FSD) with side slope of 1.5:1, free board of 0.6 m and the bed fall proposed for the Canal at the off take is 1 in 7500.CBL considered is 579.937 m. The Canal is designed as a lined Canal with B.D.C as 0.0005555 Cumec/Ha.

Details of Tidagundi Branch Canal Command Area:

6.3. As per DPR of UKP MLI Stage-III contemplated ICA for Tidagundi Branch Canal was 25572 Ha and allotted water is 5.65 TMC with 115% irrigation intensity. Due to shifting of Tidagundi Branch Canal on lower contour because of built up area and historical monuments on the outskirts of Bijapur city, loss in ICA is 2873 Ha. Further, certain area of Tidagundi Branch Canal is overlapped by the command area of Nagthan Branch Canal under Chimmalagi LIS. This is approximately 4372.50 Ha. The total reduction in contemplated ICA is 7246.50 Ha. The balance command area 18325.5 Ha.

6.4 As per the deliberations held in the 4th Meeting of the Reconstituted Committee for preparation of Comprehensive Master Plan for Krishna Basin held on 30-3-2016, wherein it is assessed that the savings in UKP Stages I, II, III consequent to adoption of 100% cropping intensity and, ***it was recommended and proposed by the Master Plan Committee to provide micro irrigation system for 35494.00 Ha command area under Tidagundi Branch Canal.***

About the Proposal:

6.5. The Honorable MLA, Indi Constituency has requested vide letter dated 27.06.2018 to the Honorable Minister for Water Resources, GOK, to provide Irrigation to deprived area of Indi taluk by extending Tidagundi Branch Canal after 56th Km. Tidagundi Branch Canal is taken up as per DPR only. Tidagundi Branch Canal is awarded up to 40.00 Km. To cover the deprived area beyond 56.00Km the following alternatives are worked out by CE KBJNL, Dam Zone Almatti. Details are as under below:

a) As per approved DPR of UKP Stage-III the contemplated ICA under Tidagundi Branch Canal is 25572 Ha with 115% irrigation intensity. The length of canal as per DPR was 64.00 Km. the water allocation is 5.65 TMC. The hydraulic particulars of Canal at Ch 0.00 Km is as follows.

Bed Width	3.25m
FSD	2.50m
Free Board	0.60m
Qr	14.205 Cumec
Side Slope	1.5:1

b) The details of reach wise ICA are as under

Alternate	Description	Irrigation Intensity	GCA in Ha	ICA in Ha	Water requirement in TMC	Allocation of water by master plan committee is 6.64 TMC out of which additional water utilisation in TMC	Additional ICA area can be covered beyond 56th of T B C in Ha	Approximate Estimated Cost (Rs. in Crore)
1	The Tidagundi Branch canal is converting to 100% irrigation intensity	100% flow irrigation	39345.80	30266.00	5.65	Water allocation not required.	(30226-21349) =8877	277.85

(B) **Alternate-2:**

Command Area Details:

a) By encroachment of Free Board by 0.20 M i,e., considering FSD of 2.7M at Ch 0.0 m, the required discharge that can be passed will be 16.70 Cumecs (6.79 TMC). As per demand table with 100 % cropping intensity with flow irrigation, the ICA for Tidagundi Branch canal will be **36,300 Ha** (Demand table enclosed). The ICA for flow irrigation will (up to 56th KM of TBC) be 22,734 Ha (4.25 TMC).

b) Further, an ICA of 13,566 Ha (36,300-22,734) can be covered by flow irrigation. For ICA of 13565 Ha required discharge is 6.24 Cumec (2.54 TMC). With this discharge of 6.24 Cumec, as per demand table by converting to drip irrigation with 100 % cropping intensity, an ICA of **24,500 Ha** (2.54 TMC) can be covered (Demand table enclosed).

c) Hence, the total area that can be covered under Tidagundi Branch Canal will be **47,254 Ha.(22,734+24500)**

Afflux details of TBC:

d) The construction of Tidagundi Branch Canal up to 40th Km is under progress. From this alternative-2, it is observed that the minimum afflux is 0.11M from Ch Km 18.17 to 18.69 and maximum afflux is 0.42M from Ch Km 4.05 to 4.38 in the free board above FSD as constructed for 115 % cropping intensity.

(i) Due to shifting of Tidagundi Branch Canal on lower contour because of built up area and historical monuments on the outskirts of Bijapur city, the loss in ICA is 2873 Ha.

(ii) The area of Tidagundi Branch Canal is overlapped by the command area of Nagthan Branch Canal under ChimmalagiLIS, the loss in ICA is approximately 4372.5 Ha.

(iii) The total reduction in contemplated ICA is 7246.50 Ha (GCA-10352.14Ha).

(iv) The ICA up to 40th Km is 11,112 Ha.

(v) From 40th Km to 56th Km, the balance ICA is 4,137 Ha.

(vi) An ICA of 6,100 Ha is proposed for Arakeri LIS off taking at Ch 18.03 Km of Tidagundi Branch Canal.

(vii) The Total ICA up to 56th Km is 21,349 Ha (including Arakeri LIS).

c) The canal particulars approved initially (Excluding Arakeri LIS) are listed below.

Canal Particulars	At Ch 40.00 KM	At Ch 56.00 KM
Bed width (m)	2.25	2.00
FSD (m)	2.30	2.10
Free Board (m)	0.60	0.60
Qr (cumec)	7.507	5.734
Side Slope	1:1	1:1

Alternative Proposal:

6.6. CE has studied Alternative Proposals of Indi taluk keeping in view the representation of MLA & details are tabulated as under:

(A) Alternate-1:

a) Considering 100 % cropping intensity with flow irrigation and available allocation of 5.65 TMC, total ICA of 30,226 Ha. can be covered under Tidagundi Branch Canal (Demand table enclosed).

b) Therefore, an additional ICA of 8877 Ha (30226 - 21349) can be covered beyond 56th Km under Block 5. The villages (5 Nos) that can be covered under Indi Taluk are Kytanakere, Lingadohalli, Tadavalaga, Ganawalaga and Bolegaon.

c) The details are tabulated as under

e) Therefore, to maintain Free board as per norms, the top of Canal (TBL) is to be raised from CH 0.00 to 4.65km, km 17.435 to 56.00 excluding Aqueducts between km 37.00 to 38.00 and in Km 43.00 to the extent of afflux in the respective chainages (Afflux Statement enclosed).

f) However, the afflux in the Viaduct reach from Ch 4.65 to 17.43 Km is 0.37m which can be accommodated in the available clearance of 0.80m. The Aqueduct reaches fromKm 37.620 to 38.64 and from Km 42.490 to 42.93, the afflux is 0.18m & 0.22mwhich can be accommodated in the free board portion of Aqueduct.

Water allocation:

g) Additional requirement of water for this modification will be 1.14 TMC (6.79-5.65). The total ICA of 47254 Ha can be covered under Tidagundi Branch Canal i.e., ICA of 22734 Ha by flow irrigation (100 %) and 24500 Ha beyond 56th km by drip irrigation.

h) The area available for flow irrigation upto 56th Km is 21349 Ha and 1385 Ha upto start of drip irrigation, totalling an ICA of 22734 Ha under flow irrigation. The approximate area beyond 56th Km and upto RL 548.00m contour is 1385Ha for flow irrigation which can be covered by providing a separate outlet.

i) The terrain beyond 56th Km is falling ranging from RL 567.044 m to RL 450.00 m. The approximate minimum head required for drip irrigation system is 20m (including friction losses & residual head) at the beginning of the RL 548.00m.

j) Hence, the area below RL 548.00 contour can be irrigated with drip system by making use of the available gravity head by constructing a sump with sufficient retention period to compensate varying discharge on U/S. As we move to lower contour, the available gravity head goes on increasing which will be more than the head required for operating the drip network. This increase in head will be resulting in going for pipe network of higher pressure rating capacity. This can be avoided by constructing sump at different lower locations as required.

k) Drip irrigation can be done by constructing a sump at Km 56.00 (CBL at 56.00 Km is 567.044 m). From sump by providing pipe network an ICA of **24500** Ha can be irrigated by gravity between RL 560.00m and Indi Branch Canal (Block-1, 2, & 5). The villages that can be covered are:

1	Kytanakere	9	Rampura	17	Choragi
2	Lingadohalli	10	Bhairungi	18	Anjutagi
3	Tadavalaga	11	Ahirsang	19	Mylar
4	Ganawalaga	12	Deginal	20	Bhatagunaki

5	Bolegaon	13	Horti	21	Bhudhihal
6	HosurHalla	14	Halagunaki	22	Koluragi
7	Nimbal	15	Babalada		
8	Kapanimbaragi	16	Kudagi		

l) A detailed investigation is to be carried out to ascertain the actual area to be covered and distribution pipe network required for drip irrigation system above alternate.

m) The details are tabulated as under

Alternate	Description	Irrigation Intensity	GCA in Ha	ICA in Ha	Water requirement in TMC	Allocation of water by master plan committee is 6.64 TMC out of which additional water utilisation in TMC	Additional ICA area can be covered beyond 56th of T B C in Ha	Approximate Estimated Cost (Rs. in Crore)
2	By encroachment of Free Board by 0.20 m in TBC	100% flow irrigation	47190.00	36300	6.79	(6.79-5.65) =1.14TMC	(36300-22734) =13,566	424.61
	By encroachment of Free Board by 0.20 m in TBC	100% flow irrigation up to 56th km. Beyond 56th KM is converting to 100% drip irrigation System	26950.00	24500	2.54	1.14 TMC	24,500	1193.15

Alternative – 3 (Representation by MLA, Indi Constituency)

a) It is proposed to utilise the allocated water of 6.64 TMC and increase the efficiency of system by converting conventional open canal type flow irrigation system to piped irrigation method. By converting from open canal system to piped system the efficiency can be increased from 50% to 75%. By doing this the Irrigable command area can be increased from 35,494.0 Ha to 55,300 Ha.

b) It is proposed to lift the water from Almatti reservoir i.e. about 1.0 Km u/s of Mulwad LIS head works. The alignment of raising main passes through command of Mulwad LIS. The alignment passes towards west of Bijapur town. It is proposed to provide one outlet for covering the left out area of Bijapur taluk as shown in the map.

c) The area details are as under, Based on the topo sheet study and preliminary planning study following details are arrived:

Sl. No.	Particulars	GCA (Ha)	ICA Ha	Water requirement (TMC)	Discharge requirement (Cumecs)
1	Block-1 – Bijapur taluk	16742.0	11720.0	1.46	2.77
2	Block-2 Indi taluk	59400.0	41580.0	5.18	12.75
		76142.0	**53300.0**	**6.64**	**15.52**

d) Total length of raising main works out to 72.0 Km.Intake level proposed is 504.75 m (Same as considered for Mulwad LIS) and delivery level is 585.0 m. Static head works works out to 135.25 m and pump head works out to 192.0 m. It is proposed to install 4 No's of Metallic volute pumps of capacity 13780 HP each. Diameter of the rising main is as under:

Sl No.	Details	Reach-1	Reach-2
1	Length	40.50 Km	31.50 Km
2	Inner diameter	3230 mm	2850 mm
3	Type of pipe	MS	MS
4	Plate thickness	16.50 mm	16.0 mm
5	Inside protection	Epoxy coating	Epoxy coating
6	Outside protection	Guniting	Guniting

e) Providing Irrigation facility to additional command area of 55,300.00 Ha in Indi taluk, Vijayapura district works out to Rs. **2893.30 Crores.**

Comparison for Alternatives:

6.7. Due to constraint of water availability following Alternatives are studied to utilize the available water effectively considering only 100% Irrigation Intensity, By encroachment of Free Board by 0.20 m in TBC & By Lift irrigation Scheme from Almatti Reservoir (As per Indi MLA Representation). Comparison for Alternatives details are as under:

Alternate	Description	Irrigation Intensity	GCA in Ha	ICA in Ha	Water requirement in TMC	Allocation of water by master plan committee is 6.64 TMC out of which additional water utilisation in TMC	Additional ICA area can be covered beyond 56th of T B C in Ha	Approximate Estimated Cost (Rs. in Crore)
1	The Tidagundi Branch canal is converting to 100% irrigation intensity	100% flow irrigation	39345.80	30266.00	5.65	Water allocation not required.	(30226 - 21349) =8877	277.85

2	By encroachment of Free Board by 0.20 m in TBC	100% flow irrigation	47190.00	36300.00	6.79	(6.79-5.65)=1.14	(36300 - 22734) =13566	424.61
	By encroachment of Free Board by 0.20 m in TBC	100% flow irrigation up to 56th km. Beyond 56th KM is converting to 100% drip irrigation System	26950.00	24500.00	2.54	1.14 TMC	24500	1193.15
3	By Lift irrigation scheme from Almatti Reservoir(As per Indi MLA Representation)	Piped Irrigation System	76142.00	53300.00	6.64	6.64	53300	2893.3

Conclusion:

6.8. Providing sustainable and dependable irrigation facility to the draught affected area of Indi taluk, Vijayapura district is utmost priority for sustainability and economic growth of region.

The proposal is placed before Technical Sub Committee for any suggestion for taking up of techno economical above alternatives for implementation of Scheme.

6.9 After detailed deliberation, TSC has suggested to complete the Tidagunadi Branch Canal as per approved DPR of UKP Stage-III and insisted to submit the proposal for Additional Area under Tidagundi Branch Canal of Mulwad LIS Stage-III with proper recommendations with Technical and Financial feasibilities by considering the alternative proposal from off-take of Tidagundi Branch Canal.

****

ಕರ್ನಾಟಕ ಸರ್ಕಾರ

ಸಂಖ್ಯೆ: ಸನೀಇ 27 ವಿಸವಿ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ, 2ನೇ ಮಹಡಿ
ಬೆಂಗಳೂರು, ದಿನಾಂಕ: 13-02-2019

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ ಸಚಿವಾಲಯ,
ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀ ಬಸವರಾಜ್ ಬಿ ಮತ್ತಿಮುಡ, ಮಾನ್ಯ ವಿಧಾನ ಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1127ಕ್ಕೆ ಉತ್ತರ ಸಲ್ಲಿಸುವ ಕುರಿತು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಬಸವರಾಜ್ ಬಿ ಮತ್ತಿಮುಡ, ಮಾನ್ಯ ವಿಧಾನ ಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1127ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ನಾಗರಾಜ್. ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1127
2. ಸದಸ್ಯರ ಹೆಸರು : ಶ್ರೀ ಬಸವರಾಜ ಬಿ. ಮತ್ತಿಮುಡ
3. ಉತ್ತರಿಸಬೇಕಾದ ದಿನಾಂಕ : 14.02.2019
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು.

ಕ್ರ.ಸಂ	ಪ್ರಶ್ನೆಗಳು:	ಉತ್ತರಗಳು:
ಅ	ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಗ್ರಾಮೀಣ ವಿಧಾನ ಸಭೆಯ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖಾವತಿಯಿಂದ ಮಂಜೂರಾದ ಅನುದಾನವೆಷ್ಟು;	ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ವಿವಿಧ ಲೆಕ್ಕ ಶೀರ್ಷಿಕೆಗಳಡಿ ರೂ.1950.75 ಲಕ್ಷ ಅಂದಾಜು ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಕಾಮಗಾರಿಗಳಿಗೆ ಇದುವರೆಗೆ ರೂ.841.84 ಲಕ್ಷ ವೆಚ್ಚ ಮಾಡಲಾಗಿದೆ.
ಆ	ಬಿಡುಗಡೆಯಾದ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು; (ವರ್ಷವಾರು ವಿವರ ನೀಡುವುದು)	ವರ್ಷವಾರು ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ	ಹಾಗಿದ್ದಲ್ಲಿ, ಕಾಮಗಾರಿಗಳು ಯಾವ ಹಂತದಲ್ಲಿವೆ? (ವರ್ಷವಾರು ವಿವರ ನೀಡುವುದು)	

ಕಡತ ಸಂಖ್ಯೆ: ಸನೀಇ 27 ವಿಸವಿ 2019

(ಸಿ.ಎಸ್. ಪುಟ್ಟರಾಜು)
ಸಣ್ಣ ನೀರಾವರಿ ಸಚಿವರು.

ಶ್ರೀ ಬಸವರಾಜ ಬಿ. ಮತ್ತಿಮುಡ (ಗುಲ್ಬರ್ಗಾ ಗ್ರಾಮಾಂತರ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1127 ಕ್ಕೆ ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರ.

ರೂ.ಲಕ್ಷಗಳಲ್ಲಿ

ಕ್ರ.ಸಂ.	ತಾಲ್ಲೂಕು	ಕಾಮಗಾರಿ ಕೈಗೆತ್ತಿಕೊಂಡ ವರ್ಷ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವೆಚ್ಚ (ರೂ.ಲಕ್ಷಗಳಲ್ಲಿ)				ಒಟ್ಟು ವೆಚ್ಚ	ಪ್ರಗತಿಯ ಹಂತ		ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ)		ಷರಾ
						2015-16	2016-17	2017-18	2018-19		ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	ಸೃಜಿಸಿದ	ಸ್ಥಿರೀಕರಿಸಿದ	
1	2	3	4	5	6	7	8	9	10	11	12	13	14	15	16
1	ಕಲಬುರಗಿ	2015-16	4702-00-101-1-07-139-ಕೆರೆಗಳ ಆಧುನೀಕರಣ	ಯಳವಂತಿಗಿ ಸಣ್ಣ ನೀರಾವರಿ ಕೆರೆ ಸುಧಾರಣೆ	50.00	0.00	24.00	7.00	0.00	31.00	ಪೂರ್ಣಗೊಂಡಿದೆ	-	0.00	113.00	
2	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಗೋಳಾ-ಬಿ ಜಿನಗು ಕೆರೆ	1.15	0.00	0.47	0.00	0.62	1.09	ಪೂರ್ಣಗೊಂಡಿದೆ	-	0.00	0.00	
3	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ನರೋಣಾ ಕೆರೆ	3.85	0.00	3.17	0.00	0.62	3.79	ಪೂರ್ಣಗೊಂಡಿದೆ	-	0.00	0.00	
4	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಕರಹರಿ ಕೆರೆ	3.05	0.00	0.87	0.00	1.84	2.71	ಪೂರ್ಣಗೊಂಡಿದೆ	-	0.00	0.00	
5	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಬೆಳಮಗಿ ಕೆರೆ	5.00	0.00	0.00	0.00	0.00	0.00	ಪೂರ್ಣಗೊಂಡಿದೆ	-	0.00	0.00	
6	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಭೂಂಯಾರ ಕೆರೆ	5.00	0.00	3.21	0.00	0.00	3.21	ಪೂರ್ಣಗೊಂಡಿದೆ	-	0.00	0.00	
7	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಕಲಮೂಡ ಕೆರೆ	5.00	0.00	1.47	0.00	0.00	1.47	ಪೂರ್ಣಗೊಂಡಿದೆ	-	0.00	0.00	
8	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಓಕಳಿ ಕೆರೆ	5.00	0.00	3.29	0.00	0.00	3.29	ಪೂರ್ಣಗೊಂಡಿದೆ	-	0.00	0.00	
9	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ವರನಾಳ ಕೆರೆ	4.70	0.00	1.34	0.00	0.00	1.34	ಪೂರ್ಣಗೊಂಡಿದೆ	-	0.00	0.00	
10	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಕಿಣ್ಣಿ ಸಡಕ ಜಿನಗು ಕೆರೆ	3.00	0.00	0.00	0.00	0.00	0.00	ಪೂರ್ಣಗೊಂಡಿದೆ	-	0.00	0.00	
11	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಬಬಲಾದ ಐ.ಕೆ ಜಿನಗು ಕೆರೆ	3.00	0.00	0.00	0.00	0.00	0.00	ಪೂರ್ಣಗೊಂಡಿದೆ	-	0.00	0.00	
12	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಕಮಲಾಪೂರ - ಚವ್ವಾಣ ತಾಂಡಾ ಜಿನಗು ಕೆರೆ	3.00	0.00	1.40	1.04	0.00	2.44	ಪೂರ್ಣಗೊಂಡಿದೆ	-	0.00	0.00	
13	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಕಾಳಮಂದರಗಿ ಜಿನಗು ಕೆರೆ	3.00	0.00	2.01	0.37	0.00	2.38	ಪೂರ್ಣಗೊಂಡಿದೆ	-	0.00	0.00	
14	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಕಮಲಾಪೂರ ರಾಜನಾಳ ಜಿನಗು ಕೆರೆ	3.00	0.00	0.00	0.00	0.00	0.00	ಪೂರ್ಣಗೊಂಡಿದೆ	-	0.00	0.00	
15	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಭಗವಾನ ತಾಂಡಾ ಜಿನಗು ಕೆರೆ	3.00	0.00	0.00	0.00	0.00	0.00	ಪೂರ್ಣಗೊಂಡಿದೆ	-	0.00	0.00	
16	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ನವನಿಹಾಳ ಜಿನಗು ಕೆರೆ	3.00	0.00	0.00	0.00	0.00	0.00	ಪೂರ್ಣಗೊಂಡಿದೆ	-	0.00	0.00	
17	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಗೋಗಿ ತಾಂಡಾ ಜಿನಗು ಕೆರೆ	3.00	0.00	1.42	0.92	0.00	2.34	ಪೂರ್ಣಗೊಂಡಿದೆ	-	0.00	0.00	
18	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಡೊಂಗರಗಾಂವ ಜಿನಗು ಕೆರೆ	3.00	0.00	1.36	0.90	0.00	2.26	ಪೂರ್ಣಗೊಂಡಿದೆ	-	0.00	0.00	
19	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಕಾಳಮಂದರಗಿ ತಾಂಡಾ ಜಿನಗು ಕೆರೆ	3.00	0.00	1.34	0.93	0.00	2.27	ಪೂರ್ಣಗೊಂಡಿದೆ	-	0.00	0.00	
20	ಕಲಬುರಗಿ	2015-16	ಬೌಂಡ್ರಿ ಟ್ರೆಂಚ	ಕಲಮೂಡ ತಾಂಡಾ ಜಿನಗು ಕೆರೆ	3.00	0.00	0.48	0.00	0.00	0.48	ಪೂರ್ಣಗೊಂಡಿದೆ	-	0.00	0.00	
20				**ಒಟ್ಟು :**	**115.75**	**0.00**	**45.83**	**11.16**	**3.08**	**60.07**		**-**	**0.00**	**113.00**	

ಕ್ರ.ಸಂ.	ತಾಲ್ಲೂಕು	ಕಾಮಗಾರಿ ಕೈಗೆತ್ತಿಕೊಂಡ ವರ್ಷ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವೆಚ್ಚ (ರೂ.ಲಕ್ಷಗಳಲ್ಲಿ)				ಒಟ್ಟು ವೆಚ್ಚ	ಪ್ರಗತಿಯ ಹಂತ		ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ)		ಷರಾ
						2015-16	2016-17	2017-18	2018-19		ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	ಸೃಜಿಸಿದ	ಸ್ಥಿರೀಕರಿಸಿದ	
1	2	3	4	5	6	7	8	9	10	11	12	13	14	15	16
	2016-17														
1	ಕಲಬುರಗಿ	2016-17	4702-00-101-05-01-436 ಆಣೆಕಟ್ಟುಗಳ ನಿರ್ಮಾಣ	ನಾವದಗಿ ಗ್ರಾಮದ ಹತ್ತಿರ ಬಿಸಿಬಿ ನಿರ್ಮಾಣ	100.00	0.00	81.43	0.83	0.00	82.26	ಪೂರ್ಣಗೊಂಡಿದೆ	-	50.00	0.00	
2	ಕಲಬುರಗಿ	2016-17	4702-00-101-5-01-139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ	ಮಹಾಗಾಂವ-ದಸ್ತಾಪೂರ ಗ್ರಾಮಗಳ ಮಧ್ಯೆ ಗಂಡೋರಿ ನಾಲಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ	200.00	0.00	192.97	0.00	0.00	192.97	ಪೂರ್ಣಗೊಂಡಿದೆ	-	110.00	0.00	
3	ಕಲಬುರಗಿ	2016-17	4702-00-101-5-01-139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ	ಸೊಂತ ಗ್ರಾಮದ ಹತ್ತಿರ ನವಿಲಕೊಳ್ಳಕ್ಕೆ ಆಣೆಕಟ್ಟು ನಿರ್ಮಾಣ	120.00	0.00	0.00	50.00	31.40	81.40	ಪೂರ್ಣಗೊಂಡಿದೆ	-	50.00	0.00	
4	ಕಲಬುರಗಿ	2016-17	4702-00-101-5-01-139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ	ಕಲಮೂಡ ಗ್ರಾಮದ ಹತ್ತಿರ ಆಣೆಕಟ್ಟು ನಿರ್ಮಾಣ	150.00	0.00	0.00	50.00	16.62	66.62	ಪೂರ್ಣಗೊಂಡಿದೆ	-	50.00	0.00	
5	ಕಲಬುರಗಿ	2016-17	4702-00-101-5-01-139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ	ಫ್ತಿ.ಕೆ. ಸಲಗರ ಗ್ರಾಮದ ಹತ್ತಿರ ಬಿ.ಸಿ.ಬಿ. ನಿರ್ಮಾಣ	130.00	0.00	0.00	48.00	0.00	48.00	ಪೂರ್ಣಗೊಂಡಿದೆ	-	100.00	0.00	
6	ಆಳಂದ	2016-17	ವಿಶೇಷ ಘಟಕ ಯೋಜನೆ	ಚಿಂಚನಸೂರು ಗ್ರಾಮದ ಶ್ರೀ. ತೀರ್ಥಪ್ಪ ತಂದೆ ತಿಪ್ಪಣ್ಣ ಹಾಗೂ ಇತರರ ಜಮೀನಿಗೆ ಪೈಪಲೈನ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವುದು.	8.00	0.00	0.00	0.57	0.00	0.57	-	ಪ್ರಗತಿಯಲ್ಲಿದೆ	0.00	0.00	ಪೈಪಲೈನ ಕಾಮಗಾರಿ ಮುಗಿದಿದ್ದು, ವಿದ್ಯುತ್ ಕಾಮಗಾರಿ ಪ್ರಗತಿಯಲ್ಲಿದೆ
7	ಆಳಂದ	2016-17	ವಿಶೇಷ ಘಟಕ ಯೋಜನೆ	ಲಿಂಗ್ಯಯನವಾಡಿ ಗ್ರಾಮದ ಶ್ರೀ.ದಶರಥ ತಂದೆ ಗುಂಡಪ್ಪ ಹಾಗೂ ಇತರರ ಜಮೀನಿಗೆ ಮುಲ್ಲಾಮಾರಿ ನದಿಯಿಂದ ಪೈಪಲೈನ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವುದು.	8.00	0.00	0.00	0.00	0.00	0.00	-	ಪ್ರಗತಿಯಲ್ಲಿದೆ	0.00	0.00	ಪೈಪಲೈನ ಕಾಮಗಾರಿ ಮುಗಿದಿದ್ದು, ವಿದ್ಯುತ್ ಕಾಮಗಾರಿ ಪ್ರಗತಿಯಲ್ಲಿದೆ
8	ಆಳಂದ	2016-17	ವಿಶೇಷ ಘಟಕ ಯೋಜನೆ	ಅಪಚಂದ ಗ್ರಾಮದ ಶ್ರೀ.ಹಣಮಂತ ತಂದೆ ಕಾಶಪ್ಪಾ ಕಾಂಬಳೆ ಹಾಗೂ ಇತರರ ಜಮೀನಿಗೆ ಬೆಣ್ಣೆತೋರಿ ನದಿಯಿಂದ ಪೈಪಲೈನ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವುದು.	8.00	0.00	0.00	0.00	0.00	0.00	-	ಪ್ರಗತಿಯಲ್ಲಿದೆ	0.00	0.00	ಪೈಪಲೈನ ಕಾಮಗಾರಿ ಮುಗಿದಿದ್ದು, ವಿದ್ಯುತ್ ಕಾಮಗಾರಿ ಪ್ರಗತಿಯಲ್ಲಿದೆ

ಕ್ರ.ಸಂ.	ತಾಲ್ಲೂಕು	ಕಾಮಗಾರಿ ಕೈಗೆತ್ತಿಕೊಂಡ ವರ್ಷ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವೆಚ್ಚ (ರೂ.ಲಕ್ಷಗಳಲ್ಲಿ)				ಒಟ್ಟು ವೆಚ್ಚ	ಪ್ರಗತಿಯ ಹಂತ		ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ)		ಷರಾ
						2015-16	2016-17	2017-18	2018-19		ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	ಸೃಜಿಸಿದ	ಸ್ಥಿರೀಕರಿಸಿದ	
1	2	3	4	5	6	7	8	9	10	11	12	13	14	15	16
9	ಕಲಬುರಗಿ	2016-17	ವಿಶೇಷ ಘಟಕ ಯೋಜನೆ	ಕುರಿಕೋಟಾ ಗ್ರಾಮದ ಶ್ರೀ.ಸಿದ್ರಾಮ ತಂದೆ ಶಿವಲಿಂಗಪ್ಪ ಹಾಗೂ ಇತರರ ಜಮೀನಿಗೆ ಬೆಣ್ಣೆತೋರಾ ಹಿನ್ನೀರಿನಿಂದ ಪೈಪಲೈನ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವುದು.	10.00	0.00	0.00	2.95	0.00	2.95	ಪೂರ್ಣಗೊಂಡಿದೆ	-	3.50		
10	ಕಲಬುರಗಿ	2016-17	ವಿಶೇಷ ಘಟಕ ಯೋಜನೆ	ಸೂಂತ ಗ್ರಾಮದ ಶ್ರೀ.ಪ್ರಕಾಶ ತಂದೆ ಗುಂಡಪ್ಪ ಹಾಗೂ ಇತರರ ಜಮೀನಿಗೆ ಮುಲ್ಲಾಮಾರಿ ನದಿಯಿಂದ ಪೈಪಲೈನ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವುದು.	10.00	0.00	0.00	6.50	0.00	6.50	ಪೂರ್ಣಗೊಂಡಿದೆ	-	3.50		
11	ಕಲಬುರಗಿ	2016-17	ವಿಶೇಷ ಘಟಕ ಯೋಜನೆ	ಘಯಾಂರ ಗ್ರಾಮದ ಶ್ರೀಮತಿ. ಖಿತಲಮ್ಮ ಗಂಡ ಶರಣಪ್ಪ ಹಾಗೂ ಇತರರ ಜಮೀನಿಗೆ ಘಯಾಂರ ಕೆರೆಯಿಂದ ಪೈಪಲೈನ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವುದು.	6.00	0.00	0.00	4.46	0.00	4.46	ಪೂರ್ಣಗೊಂಡಿದೆ	-	2.75		
SL. No.	District code	District name	Taluk code	Taluk Name	GP Code	Gram Panchayat Name	Funds allocation for GPs 2018-19 (in Lakhs)	1st quter	2st quter	3st quter	4st quter
281	1522	MYSURU	1522004	MYSURU	1522004023	JAYAPURA	27.40	6.85	6.85	6.85	6.85
282	1522	MYSURU	1522004	MYSURU	1522004013	KEELANAPURA	13.70	3.43	3.43	3.43	3.43
283	1522	MYSURU	1522004	MYSURU	1522004015	VARUNA	13.70	3.43	3.43	3.43	3.43
284	1522	MYSURU	1522005	NANJANGUD	1522005024	BADANAVALU	22.84	5.71	5.71	5.71	5.71
285	1522	MYSURU	1522005	NANJANGUD	1522005016	DASANURU	13.70	3.43	3.43	3.43	3.43
286	1522	MYSURU	1522005	NANJANGUD	1522005029	KASUVINAHALLI	22.83	5.71	5.71	5.71	5.71
287	1522	MYSURU	1522005	NANJANGUD	1522005013	MALLUPURA	27.40	6.85	6.85	6.85	6.85
288	1522	MYSURU	1522005	NANJANGUD	1522005038	NALLITHALAPURA	22.83	5.71	5.71	5.71	5.71
289	1522	MYSURU	1522006	PIRIYAPATNA	1522006026	DODDAKAMARAVALLI	4.62	1.16	1.16	1.16	1.16
290	1522	MYSURU	1522006	PIRIYAPATNA	1522006011	HITNEHEBBAGILU	15.97	3.99	3.99	3.99	3.99
291	1522	MYSURU	1522006	PIRIYAPATNA	1522006014	MAKODU	15.97	3.99	3.99	3.99	3.99
292	1522	MYSURU	1522006	PIRIYAPATNA	1522006032	N.SHETTIHALLI	15.97	3.99	3.99	3.99	3.99
293	1522	MYSURU	1522006	PIRIYAPATNA	1522006012	RAMANATHATHUNGA	15.97	3.99	3.99	3.99	3.99
294	1522	MYSURU	1522007	NARSIPUR	1522007015	DODDEBAGILU	13.70	3.43	3.43	3.43	3.43
295	1522	MYSURU	1522007	NARSIPUR	1522007004	HEGGURU	13.70	3.43	3.43	3.43	3.43
296	1522	MYSURU	1522007	NARSIPUR	1522007021	HOLESALU	13.70	3.43	3.43	3.43	3.43
297	1522	MYSURU	1522007	NARSIPUR	1522007029	KAROHATTI	13.70	3.43	3.43	3.43	3.43
298	1522	MYSURU	1522007	NARSIPUR	1522007023	T.DODDAPURA	13.70	3.43	3.43	3.43	3.43
299	1523	RAICHUR	1523001	DEVADURGA	1523001001	ALKOD	22.5	5.63	5.63	5.63	5.63
300	1523	RAICHUR	1523001	DEVADURGA	1523001018	GANADHAL	22.51	5.63	5.63	5.63	5.63
301	1523	RAICHUR	1523001	DEVADURGA	1523001014	NAGADADINNI	22.5	5.63	5.63	5.63	5.63
302	1523	RAICHUR	1523002	LINGSUGUR	1523002013	ANKUSHADODDI	20.93	5.23	5.23	5.23	5.23
303	1523	RAICHUR	1523002	LINGSUGUR	1523002034	UPPARNANDIHAL	44.36	11.09	11.09	11.09	11.09
304	1523	RAICHUR	1523003	MANVI	1523003038	CHINCHARAKI	13.37	3.34	3.34	3.34	3.34
305	1523	RAICHUR	1523003	MANVI	1523003010	GANA DINNY	13.38	3.35	3.35	3.35	3.35
306	1523	RAICHUR	1523003	MANVI	1523003011	GORKAL	33.44	8.36	8.36	8.36	8.36
307	1523	RAICHUR	1523003	MANVI	1523003012	HALAPURA	6.31	1.58	1.58	1.58	1.58
308	1523	RAICHUR	1523003	MANVI	1523003014	HEERA	13.38	3.35	3.35	3.35	3.35
309	1523	RAICHUR	1523003	MANVI	1523003027	NAVALKAL	26.76	6.69	6.69	6.69	6.69
310	1523	RAICHUR	1523003	MANVI	1523003041	VATAGAL	9.75	2.44	2.44	2.44	2.44
311	1523	RAICHUR	1523004	RAICHUR	1523004005	JAMBALDINNI	33.45	8.36	8.36	8.36	8.36
312	1523	RAICHUR	1523005	SINDHNUR	1523005019	BADARLI	22.3	5.58	5.58	5.58	5.58
313	1523	RAICHUR	1523005	SINDHNUR	1523005031	R.H. CAMP	44.59	11.15	11.15	11.15	11.15
314	1523	RAICHUR	1523005	SINDHNUR	1523005002	TIDIGOL	29.86	7.47	7.47	7.47	7.47
315	1529	RAMANAGARA	1529003	MAGADI	1529003029	SOLUR	14.97	3.74	3.74	3.74	3.74
316	1524	SHIVAMOGGA	1524001	BHADRAVATI	1524001038	ARALIKOPPA	24.15	6.04	6.04	6.04	6.04
317	1524	SHIVAMOGGA	1524001	BHADRAVATI	1524001033	ARAKERE	12.10	3.03	3.03	3.03	3.03
318	1524	SHIVAMOGGA	1524001	BHADRAVATI	1524001030	EMMEHATTI	12.09	3.02	3.02	3.02	3.02
319	1524	SHIVAMOGGA	1524001	BHADRAVATI	1524001018	KAMBADAL HOSURU	24.15	6.04	6.04	6.04	6.04
320	1524	SHIVAMOGGA	1524002	HOSANAGARA	1524002012	MARUTHIPURA	16.11	4.03	4.03	4.03	4.03
321	1524	SHIVAMOGGA	1524003	SAGAR	1524003008	ANANDAPURA	16.10	4.03	4.03	4.03	4.03
322	1524	SHIVAMOGGA	1524003	SAGAR	1524003026	MASURU	16.10	4.03	4.03	4.03	4.03

SL. No.	District code	District name	Taluk code	Taluk Name	GP Code	Gram Panchayat Name	Funds allocation for GPs 2018-19 (in Lakhs)	1st quter	2st quter	3st quter	4st quter
323	1524	SHIVAMOGGA	1524004	SHIKARIPUR	1524004026	THUMMINAKATTE	12.09	3.02	3.02	3.02	3.02
324	1524	SHIVAMOGGA	1524004	SHIKARIPUR	1524004008	MUDDANAHALLI	12.08	3.02	3.02	3.02	3.02
325	1524	SHIVAMOGGA	1524004	SHIKARIPUR	1524004012	MUDUBASIDDAPURA	12.09	3.02	3.02	3.02	3.02
326	1524	SHIVAMOGGA	1524004	SHIKARIPUR	1524004035	THALAGUNDA	12.09	3.02	3.02	3.02	3.02
327	1524	SHIVAMOGGA	1524005	SHIVAMOGGA	1524005013	GHAJANURU	27.05	6.76	6.76	6.76	6.76
328	1524	SHIVAMOGGA	1524005	SHIVAMOGGA	1524005017	MALLAPURA	12.08	3.02	3.02	3.02	3.02
329	1524	SHIVAMOGGA	1524005	SHIVAMOGGA	1524005036	PURUDALU	12.07	3.02	3.02	3.02	3.02
330	1524	SHIVAMOGGA	1524006	SORABA	1524006007	KUBTURU	45.18	11.30	11.30	11.30	11.30
331	1524	SHIVAMOGGA	1524006	SORABA	1524006023	GUDAVI	25.09	6.27	6.27	6.27	6.27
332	1524	SHIVAMOGGA	1524006	SORABA	1524006014	KATUVALLI	25.09	6.27	6.27	6.27	6.27
333	1524	SHIVAMOGGA	1524006	SORABA	1524006036	NISARANI	2.89	0.72	0.72	0.72	0.72
334	1524	SHIVAMOGGA	1524006	SORABA	1524006005	THELAGUNDA	25.10	6.28	6.28	6.28	6.28
335	1524	SHIVAMOGGA	1524007	TIRTHAHALLI	1524007019	ARALASURALI	2.21	0.55	0.55	0.55	0.55
336	1524	SHIVAMOGGA	1524007	TIRTHAHALLI	1524007020	HADIGALLU	27.05	6.76	6.76	6.76	6.76
337	1524	SHIVAMOGGA	1524007	TIRTHAHALLI	1524007035	MEGARAVALLI	27.05	6.76	6.76	6.76	6.76
338	1525	TUMAKURU	1525001	CHIKNAYAKANHALLI	1525001017	BELAGULI	11.32	2.83	2.83	2.83	2.83
339	1525	TUMAKURU	1525001	CHIKNAYAKANHALLI	1525001010	CHOWLAKATTE	11.32	2.83	2.83	2.83	2.83
340	1525	TUMAKURU	1525001	CHIKNAYAKANHALLI	1525001023	DUGUDIHALLI	2.51	0.63	0.63	0.63	0.63
341	1525	TUMAKURU	1525001	CHIKNAYAKANHALLI	1525001011	THIMMALAPURA	11.32	2.83	2.83	2.83	2.83
342	1525	TUMAKURU	1525002	GUBBI	1525002003	ANKASANDRA	13.84	3.46	3.46	3.46	3.46
343	1525	TUMAKURU	1525002	GUBBI	1525002034	BYADIGERE	6.27	1.57	1.57	1.57	1.57
344	1525	TUMAKURU	1525002	GUBBI	1525002020	HERUR	13.84	3.46	3.46	3.46	3.46
345	1525	TUMAKURU	1525002	GUBBI	1525002025	S.KODAGIHALLY	13.84	3.46	3.46	3.46	3.46
346	1525	TUMAKURU	1525002	GUBBI	1525002032	EDAGUR	15.93	3.98	3.98	3.98	3.98
347	1525	TUMAKURU	1525003	KORATAGERE	1525003016	THEETHA	9.56	2.39	2.39	2.39	2.39
348	1525	TUMAKURU	1525003	KORATAGERE	1525003007	VADDAGERE	9.55	2.39	2.39	2.39	2.39
349	1525	TUMAKURU	1525004	KUNIGAL	1525004005	BAGENAHALLI	18.54	4.64	4.64	4.64	4.64
350	1525	TUMAKURU	1525004	KUNIGAL	1525004008	BILIDEVALAYA	18.53	4.63	4.63	4.63	4.63
351	1525	TUMAKURU	1525004	KUNIGAL	1525004027	K.HONNAMACHANAHALLI	18.54	4.64	4.64	4.64	4.64
352	1525	TUMAKURU	1525004	KUNIGAL	1525004007	MADIKEHALLI	8.61	2.15	2.15	2.15	2.15
353	1525	TUMAKURU	1525004	KUNIGAL	1525004019	THAVAREKERE	18.54	4.64	4.64	4.64	4.64
354	1525	TUMAKURU	1525005	MADHUGIRI	1525005024	CHIKKAMALUR	14.82	3.71	3.71	3.71	3.71
355	1525	TUMAKURU	1525005	MADHUGIRI	1525005029	GONDIHALLI	9.55	2.39	2.39	2.39	2.39
356	1525	TUMAKURU	1525005	MADHUGIRI	1525005015	HOSAKERE	14.81	3.70	3.70	3.70	3.70
357	1525	TUMAKURU	1525005	MADHUGIRI	1525005030	RANGAPURA	2.43	0.61	0.61	0.61	0.61
358	1525	TUMAKURU	1525005	MADHUGIRI	1525005020	SINGANAHALLI	14.82	3.71	3.71	3.71	3.71
359	1525	TUMAKURU	1525005	MADHUGIRI	1525005007	DODDAYALKUR	0.87	0.22	0.22	0.22	0.22
360	1525	TUMAKURU	1525006	PAVAGADA	1525006029	GUJJANADU	9.55	2.39	2.39	2.39	2.39
361	1525	TUMAKURU	1525006	PAVAGADA	1525006009	NAGALAMADIKE	9.56	2.39	2.39	2.39	2.39
362	1525	TUMAKURU	1525006	PAVAGADA	1525006005	RAJAVANTHI	9.55	2.39	2.39	2.39	2.39
363	1525	TUMAKURU	1525006	PAVAGADA	1525006001	VIRUPASAMUDRA	9.54	2.39	2.39	2.39	2.39

SL. No.	District code	District name	Taluk code	Taluk Name	GP Code	Gram Panchayat Name	Funds allocation for GPs 2018-19 (in Lakhs)	1st quter	2st quter	3st quter	4st quter
364	1525	TUMAKURU	1525006	PAVAGADA	1525006033	Y.N.HOSAKOTE	9.55	2.39	2.39	2.39	2.39
365	1525	TUMAKURU	1525007	SIRA	1525007024	BHUPASANDRA	14.83	3.71	3.71	3.71	3.71
366	1525	TUMAKURU	1525007	SIRA	1525007026	CHINNENAHALLI	14.83	3.71	3.71	3.71	3.71
367	1525	TUMAKURU	1525007	SIRA	1525007014	GOWDAGERE	24.46	6.12	6.12	6.12	6.12
368	1525	TUMAKURU	1525007	SIRA	1525007008	HANDIKUNTE	14.83	3.71	3.71	3.71	3.71
369	1525	TUMAKURU	1525007	SIRA	1525007040	KURUBARAHALLI	11.32	2.83	2.83	2.83	2.83
370	1525	TUMAKURU	1525007	SIRA	1525007016	LAKSHMISAGARA	14.84	3.71	3.71	3.71	3.71
371	1525	TUMAKURU	1525008	TIPTUR	1525008001	BALUVANERALU	9.56	2.39	2.39	2.39	2.39
372	1525	TUMAKURU	1525008	TIPTUR	1525008004	HONNAVALLI	9.55	2.39	2.39	2.39	2.39
373	1525	TUMAKURU	1525008	TIPTUR	1525008026	HUNSEGHATTA	9.56	2.39	2.39	2.39	2.39
374	1525	TUMAKURU	1525008	TIPTUR	1525008014	MATHIHALLI	9.56	2.39	2.39	2.39	2.39
375	1525	TUMAKURU	1525008	TIPTUR	1525008018	NONAVINAKERE	9.56	2.39	2.39	2.39	2.39
376	1525	TUMAKURU	1525009	TUMAKURU	1525009004	KESTHUR	9.57	2.39	2.39	2.39	2.39
377	1525	TUMAKURU	1525009	TUMAKURU	1525009011	OBALAPURA	9.56	2.39	2.39	2.39	2.39
378	1525	TUMAKURU	1525010	TURUVEKERE	1525010025	LOKAMMANAHALLI	15.93	3.98	3.98	3.98	3.98
379	1525	TUMAKURU	1525010	TURUVEKERE	1525010016	MUTHUGADAHALLI	15.93	3.98	3.98	3.98	3.98
380	1527	UTTARA KANNADA	1527001	ANKOLA	1527001013	ACHAVE	28.33	7.08	7.08	7.08	7.08
381	1527	UTTARA KANNADA	1527001	ANKOLA	1527001006	BELASE	17.93	4.48	4.48	4.48	4.48
382	1527	UTTARA KANNADA	1527003	HALIYAL	1527003001	JANAGA	55.95	13.99	13.99	13.99	13.99
383	1527	UTTARA KANNADA	1527003	HALIYAL	1527003010	TATWANAGI	54.27	13.57	13.57	13.57	13.57
384	1527	UTTARA KANNADA	1527005	KARWAR	1527005012	SHIRAVAD	29.31	7.33	7.33	7.33	7.33
385	1527	UTTARA KANNADA	1527005	KARWAR	1527005011	VAILAVADA	26.99	6.75	6.75	6.75	6.75
386	1527	UTTARA KANNADA	1527007	MUNDGOD	1527007006	BACHANAKI	75.87	18.97	18.97	18.97	18.97
387	1527	UTTARA KANNADA	1527009	SIRSI	1527009012	BANKANAL	7.16	1.79	1.79	1.79	1.79
388	1527	UTTARA KANNADA	1527009	SIRSI	1527009021	GUDDAPUR	7.24	1.81	1.81	1.81	1.81
389	1527	UTTARA KANNADA	1527010	SUPA	1527010006	JOIDA	55.15	13.79	13.79	13.79	13.79
390	1527	UTTARA KANNADA	1527001	ANKOLA	1527001011	SAGADAGERI	28.31	7.08	7.08	7.08	7.08
391	1527	UTTARA KANNADA	1527001	ANKOLA	1527001008	VANDIGE	28.31	7.08	7.08	7.08	7.08
392	1527	UTTARA KANNADA	1527011	YELLAPUR	1527011003	KIRAVATTI	75.88	18.97	18.97	18.97	18.97
393	1507	VIJAYAPURA	1507001	BASAVANA BAGEVADI	1507001041	BENALA R.C	14.13	3.53	3.53	3.53	3.53
394	1507	VIJAYAPURA	1507001	BASAVANA BAGEVADI	1507001037	HEBBAL	14.12	3.53	3.53	3.53	3.53
395	1507	VIJAYAPURA	1507001	BASAVANA BAGEVADI	1507001019	MARKABBINALLI	37.67	9.42	9.42	9.42	9.42
396	1507	VIJAYAPURA	1507001	BASAVANA BAGEVADI	1507001026	MASABINAL	14.13	3.53	3.53	3.53	3.53
397	1507	VIJAYAPURA	1507001	BASAVANA BAGEVADI	1507001010	RONIHAL	14.13	3.53	3.53	3.53	3.53
398	1507	VIJAYAPURA	1507001	BASAVANA BAGEVADI	1507001031	SASANUR	23.52	5.88	5.88	5.88	5.88
399	1507	VIJAYAPURA	1507003	INDI	1507003058	GUBBEWADA	34.79	8.70	8.70	8.70	8.70
400	1507	VIJAYAPURA	1507003	INDI	1507003009	KOLURAGI	35.84	8.96	8.96	8.96	8.96
401	1507	VIJAYAPURA	1507003	INDI	1507003004	UMARANI	40.28	10.07	10.07	10.07	10.07
402	1507	VIJAYAPURA	1507004	MUDDEBIHAL	1507004012	ALUR	23.54	5.89	5.89	5.89	5.89
403	1507	VIJAYAPURA	1507004	MUDDEBIHAL	1507004016	INGALAGERI	23.54	5.89	5.89	5.89	5.89
404	1507	VIJAYAPURA	1507004	MUDDEBIHAL	1507004006	KAVADIMATTI	23.55	5.89	5.89	5.89	5.89
405	1507	VIJAYAPURA	1507005	SINDGI	1507005003	BAGALUR	22.06	5.52	5.52	5.52	5.52

SL. No.	District code	District name	Taluk code	Taluk Name	GP Code	Gram Panchayat Name	Funds allocation for GPs 2018-19 (in Lakhs)	1st quter	2st quter	3st quter	4st quter
406	1507	VIJAYAPURA	1507005	SINDGI	1507005005	BYKOD	22.07	5.52	5.52	5.52	5.52
407	1507	VIJAYAPURA	1507005	SINDGI	1507005042	DEVAR NAVADGI	17.36	4.34	4.34	4.34	4.34
408	1507	VIJAYAPURA	1507005	SINDGI	1507005040	GUBBEWAD	22.07	5.52	5.52	5.52	5.52
409	1507	VIJAYAPURA	1507005	SINDGI	1507005025	SUNGATHAN	22.07	5.52	5.52	5.52	5.52
410	1507	VIJAYAPURA	1507002	VIJAYAPURA	1507002026	HITNALLI	23.52	5.88	5.88	5.88	5.88
411	1507	VIJAYAPURA	1507002	VIJAYAPURA	1507002048	KUMATAGI	30.35	7.59	7.59	7.59	7.59
412	1507	VIJAYAPURA	1507002	VIJAYAPURA	1507002036	NIDONI	70.63	17.66	17.66	17.66	17.66
413	1507	VIJAYAPURA	1507002	VIJAYAPURA	1507002037	TORAVI	70.63	17.66	17.66	17.66	17.66
414	1530	YADGIR	1530008	SHAHPUR	1530008024	MADRAKI	20.89	5.22	5.22	5.22	5.22
415	1530	YADGIR	1530008	SHAHPUR	1530008015	CHAMANAL	54.68	13.67	13.67	13.67	13.67
416	1530	YADGIR	1530008	SHAHPUR	1530008027	GINAL	25.56	6.39	6.39	6.39	6.39
417	1530	YADGIR	1530008	SHAHPUR	1530008017	HOTPET	41.78	10.45	10.45	10.45	10.45
418	1530	YADGIR	1530008	SHAHPUR	1530008016	T. WADGERA	84.17	21.04	21.04	21.04	21.04
419	1530	YADGIR	1530008	SHAHPUR	1530008010	VANADURGA	20.89	5.22	5.22	5.22	5.22
420	1530	YADGIR	1530009	SURPUR	1530009036	AGNI	16.83	4.21	4.21	4.21	4.21
421	1530	YADGIR	1530009	SURPUR	1530009008	ARKERA (J)	16.82	4.21	4.21	4.21	4.21
422	1530	YADGIR	1530009	SURPUR	1530009007	GEDDALMARI	33.64	8.41	8.41	8.41	8.41
423	1530	YADGIR	1530009	SURPUR	1530009044	HEGGANADODDI	20.89	5.22	5.22	5.22	5.22
424	1530	YADGIR	1530009	SURPUR	1530009003	TINTHNI	16.82	4.21	4.21	4.21	4.21
425	1530	YADGIR	1530010	YADGIR	1530010026	AJALAPUR	7.45	1.86	1.86	1.86	1.86
426	1530	YADGIR	1530010	YADGIR	1530010016	BALICHAKRA	25.56	6.39	6.39	6.39	6.39
427	1530	YADGIR	1530010	YADGIR	1530010006	HATTIKUNI	25.06	6.27	6.27	6.27	6.27
Total							7617.25	1904.31	1904.31	1904.31	1904.31

2018-19 Grama Vikasa Yojana annual budget allocation: Rs.76,17.025 Lakhs

2018-12 Funds required for 1st quncter of Grama Vikasa Yojana Rs.1904.31 Lakhs. This amount will be release to the selected Villages of Grama Vikasa Yojana in concered Grama Panchayath.

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 61 ಎಂಪಿಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 13.02.2019

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ),
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಸಿ ಪಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:683ಕ್ಕೆ ಉತ್ತರಿಸುವ ಕುರಿತು.

>><<

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಸಿ ಪಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:683ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತಕ್ರಮಕ್ಕಾಗಿ ಕಳುಹಿಸಲಾಗಿದೆ.

ನಿಮ್ಮ ನಂಬುಗೆಯ,

(ವೈ ಎಸ್ ದಳವಾಯಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ)

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	683
2.	ಸದಸ್ಯರ ಹೆಸರು	:	ಶ್ರೀ.ಪಾಟೀಲ್ ಸಿ.ಸಿ.
3.	ಉತ್ತರಿಸಬೇಕಾದ ದಿನಾಂಕ	:	14.02.2019
4.	ಉತ್ತರಿಸಬೇಕಾದ ಸಚಿವರು	:	ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
(ಅ)	ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಮಂಜೂರಾದ ಬೋಧಕರು ಮತ್ತು ಬೋಧಕೇತರ ಹುದ್ದೆಗಳು ಎಷ್ಟು; (ಹುದ್ದೆವಾರು ವಿವರ ನೀಡುವುದು)	ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಮಂಜೂರಾದ ಬೋಧಕರು ಮತ್ತು ಬೋಧಕೇತರ ಹುದ್ದೆಗಳ ಹಾಗೂ ಭರ್ತಿಮಾಡಿಕೊಳ್ಳಲಾದ ಹುದ್ದೆಗಳ ವಿವರ ಈ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ)
(ಆ)	ಈ ಪೈಕಿ ಎಷ್ಟು ಬೋಧಕರು ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ; (ಹುದ್ದೆವಾರು ವಿವರ ನೀಡುವುದು)	
ಇ)	ಬೋಧಕರು ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಮಾನದಂಡವನ್ನು ಅನುಸರಿಸಲಾಗಿದೆ? (ವಿವರ ನೀಡುವುದು)	1. ಬೋಧಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತಿದೆ. 2. ಬೋಧಕೇತರ ಹುದ್ದೆಗಳ ಪೈಕಿ ಗ್ರೂಪ್ "ಸಿ" ಹುದ್ದೆಗಳನ್ನು ಕೆ.ಇ.ಎ ಮುಖಾಂತರ ಭರ್ತಿ ಮಾಡಿಕೊಳ್ಳಲಾಗಿದೆ. ಗ್ರೂಪ್ "ಡಿ" ಹುದ್ದೆಗಳನ್ನು ಹೊರಗುತ್ತಿಗೆ ಮೇಲೆ ಭರ್ತಿ ಮಾಡಿಕೊಳ್ಳಲಾಗಿದೆ.

ಕ್ರ. ಸಂ.		ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಮಾಡಿಕೊಳ್ಳಲಾದ ಹುದ್ದೆಗಳು
ಬೋಧಕ ಹುದ್ದೆಗಳು			
1	ಪ್ರಾಧ್ಯಾಪಕರು	19	10
2	ಸಹ ಪ್ರಾಧ್ಯಾಪಕರು	35	20
3	ಸಹಾಯಕ ಪ್ರಾಧ್ಯಾಪಕರು	54	39
4	ಸೀನಿಯರ್ ರೆಸಿಡೆಂಟ್	32	20
5	ಜೂನೀಯರ್ ರೆಸಿಡೆಂಟ್ / ಟ್ಯೂಟರ್	86	35
ಭೋದಕೇತರ ಹುದ್ದೆಗಳು			
1	ಗ್ರೂಪ್ "ಎ"	02	-
2	ಗ್ರೂಪ್ "ಸಿ"	350	289
3	ಗ್ರೂಪ್ "ಡಿ"	111	111

ಸಂಖ್ಯೆ: ಆಕುಕ 61 ಎಂಪಿಎಸ್ 2019

(ಈ.ತುಕಾರಾಂ)
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಕಸಂವಾ 16 ಕೆಒಎಲ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.02.2019

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನಸಭೆಯ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 912ಕ್ಕೆ ಉತ್ತರಿಸುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಕರ್ನಾಟಕ ವಿಧಾನಸಭೆಯ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 912 ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಾನು ನಿರ್ದೇಶಿಸಲ್ಪಟ್ಟಿರುತ್ತೇನೆ.

ತಮ್ಮ ನಂಬುಗೆಯ,

(ಹೆಚ್.ಕೆ.ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	912
ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	14.02.2019
ಉತ್ತರಿಸುವ ಸಚಿವರು	ಮಾನ್ಯ ಜಲಸಂಪನ್ಮೂಲ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕನ್ನಡೇತರರಿಗೆ ಕನ್ನಡ ಭಾಷೆಯನ್ನು ಕಲಿಸುವ ಮತ್ತು ಸಂಸ್ಕೃತಿಯನ್ನು ಪರಿಚಯಿಸುವ ಕುರಿತಾದ ಇಲಾಖೆಯ ಕಾರ್ಯಕ್ರಮಗಳು ಯಾವುವು;	**ಕನ್ನಡ ಅಭಿವೃದ್ಧಿ ಪ್ರಾಧಿಕಾರ:** ರಾಜ್ಯದಲ್ಲಿ, ವಿಶೇಷವಾಗಿ ನಗರಪ್ರದೇಶಗಳಲ್ಲಿ ವಾಸಿಸುವ ಕನ್ನಡೇತರ ಸಮುದಾಯಗಳಿಗೆ ಕನ್ನಡ ಭಾಷೆಯನ್ನು ಕಲಿಸುವ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸಂಘ-ಸಂಸ್ಥೆಗಳು, ಕಚೇರಿಗಳ ಸಹಯೋಗದಲ್ಲಿ ಕನ್ನಡ ಕಲಿಕಾ ಶಿಬಿರಗಳನ್ನು ಆಯೋಜಿಸುವ ಪರಿಪಾಠವನ್ನು ಹೊಂದಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇಂತಹ ಕಲಿಕಾ ಕೇಂದ್ರಗಳಿಗೆ ಸಂಪನ್ಮೂಲ ಶಿಕ್ಷಕರನ್ನು ನಿಯೋಜಿಸಿ, ಪಠ್ಯವಸ್ತುಗಳನ್ನು ಪೂರೈಸಿ ಕನ್ನಡ ಕಲಿಕೆಗೆ ಉತ್ತೇಜನವನ್ನು ನೀಡುತ್ತಿದೆ. **ಕನ್ನಡ ಮತ್ತು ಸಂಸ್ಕೃತಿ ಇಲಾಖೆ** ಬೆಂಗಳೂರು ನಗರ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರ, ಕಾರ್ಖಾನೆಗಳು ಹಾಗೂ ಸಂಘ-ಸಂಸ್ಥೆಗಳಲ್ಲಿರುವ ಕನ್ನಡೇತರರು ಕನ್ನಡ ಕಲಿಯಲು ಇಚ್ಛಿಸಿದಲ್ಲಿ ಕನ್ನಡ ಕಲಿಕಾ ತರಗತಿಗೆ ಕನ್ನಡ ಬೋಧಕರನ್ನು ಇಲಾಖೆಯಿಂದ ನಿಯೋಜಿಸಲಾಗುತ್ತಿದೆ. ಪ್ರತಿ ವರ್ಷ ಕನ್ನಡೇತರರಿಗೆ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಮೂಲಕ, ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯನ್ನು ರೂಪಿಸಿ, ಕನ್ನಡ ಅನುಷ್ಠಾನಗೊಳಿಸಲಾಗುತ್ತಿದೆ.
ಆ)	ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಗೆ ಮೈಸೂರು ಭಾರತೀಯ ಸಂಸ್ಥೆಗಳ ಭಾಷೆಗಳ ಕೇಂದ್ರವೂ ಸೇರಿದಂತೆ ಯಾವ ಯಾವ ಮುಕ್ತ ವಿಶ್ವವಿದ್ಯಾನಿಲಯಗಳು ಕನ್ನಡ ಶಿಕ್ಷಣವನ್ನು ನೀಡುತ್ತಿವೆ; ವಿಶೇಷತ: ಬೆಂಗಳೂರು ಮಹಾನಗರ ಪ್ರದೇಶಗಳಲ್ಲಿರುವ ಕನ್ನಡೇತರರಿಗೆ ಕನ್ನಡ ಭಾಷಾ ಕಲಿಕೆ ಅವಕಾಶವನ್ನು ಒದಗಿಸಿಕೊಡಲಾಗಿದೆಯೇ;	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಭಾರತೀಯ ಭಾಷಾ ಸಂಸ್ಥಾನದ ಮೂಲಕ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮುಕ್ತ ವಿಶ್ವವಿದ್ಯಾನಿಲಯಗಳು ಕನ್ನಡ ಶಿಕ್ಷಣವನ್ನು ನೀಡುತ್ತಿರುವ ವಿಷಯವು ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ಮಹಾನಗರ ಪ್ರದೇಶಗಳಲ್ಲಿರುವ ಕನ್ನಡೇತರರಿಗೆ ಕನ್ನಡ ಭಾಷಾ ಕಲಿಕೆಗೆ ಅವಕಾಶವನ್ನು ನೀಡಲಾಗುತ್ತಿದೆ.

ಇ)	ವಿಶೇಷ ಘಟಕ ಯೋಜನೆಯಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಮಂಜೂರು ಮಾಡಿದ ಜಿಲ್ಲಾವಾರು ಹಂಚಿಕೆಯ ವಿವರಗಳೇನು;	ವಿಶೇಷ ಘಟಕ ಯೋಜನೆಯಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಮಂಜೂರು ಮಾಡಿದ ಜಿಲ್ಲಾವಾರು ಹಂಚಿಕೆಯ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ
ಈ)	ಗಿರಿಜನ ಉಪ ಯೋಜನೆಯ ವ್ಯಾಪ್ತಿಯಲ್ಲಿ ಬಿಡುಗಡೆ ಮಾಡಿದ ಅನುದಾನ ಮತ್ತು ವಿನಿಯೋಗ ಕುರಿತಾದ ಗತ ಆರ್ಥಿಕ ವರ್ಷದ ವಿವರಗಳೇನು;	ಗಿರಿಜನ ಉಪ ಯೋಜನೆಯ ವ್ಯಾಪ್ತಿಯಲ್ಲಿ ಬಿಡುಗಡೆ ಮಾಡಿದ ಅನುದಾನ ಮತ್ತು ವಿನಿಯೋಗದ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.
ಉ)	ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಇಲಾಖೆಯ ಮುಂದಿರುವ ಪರಿಣಾಮಕಾರಿ ಪ್ರಸ್ತಾವನೆಗಳು ಯಾವುವು?	ಸಾಹಿತ್ಯ ಪ್ರಕಟಣೆ, ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹ ಧನ ಸಹಾಯ, ಅನುದಾನಗಳು, ವಿವಿಧ ಜನಪದ ಮತ್ತು ಶಾಸ್ತ್ರೀಯ ಕಲಾ ಪ್ರಕಾರಗಳ ಕಲಾವಿದರಿಗೆ ಕಾರ್ಯಕ್ರಮ ಪ್ರಾಯೋಜನೆ, ಜಿಲ್ಲಾ ವೈಶಿಷ್ಟ್ಯಗಳನ್ನು ಸಾರುವ ಜಿಲ್ಲಾ ಉತ್ಸವಗಳು, ಕನ್ನಡ ಕಲಿಕೆಗೆ ವಿವಿಧ ಕೇಂದ್ರಗಳಲ್ಲಿ ಕನ್ನಡ ಕಲಿಕೆ ತರಗತಿಗಳು, ಅಂಚೆ ಮೂಲಕ ಕನ್ನಡ ಕಲಿಕೆ ಹಾಗೂ ಜಗತ್ತಿನ ಎಲ್ಲೆಡೆಯಿರುವ ಆಸಕ್ತರು ಮತ್ತು ಕನ್ನಡೇತರರಿಗಾಗಿ ಆನ್ ಲೈನ್ ಕನ್ನಡ ಕಲಿಕಾ ತರಗತಿಗಳು, ಜಗತ್ತಿನ ಜ್ಞಾನ ಪ್ರಕಾರಗಳನ್ನು ಕನ್ನಡ ಭಾಷೆಯಲ್ಲಿ ಒದಗಿಸುವ ಕಣಜ ಜಾಲ ತಾಣ ನಿರ್ವಹಣೆ ಸೇರಿದಂತೆ ಸಕಾಲಿಕ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಮಾಡಲಾಗುತ್ತಿದೆ.

ಸಂಖ್ಯೆ: ಕಸಂವಾ 16 ಕೆಎಎಲ್ 2019.

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಅನುಬಂಧ-1

2016-17ನೇ ಸಾಲಿನಲ್ಲಿ 30 ಜಿಲ್ಲಾ ಸಹಾಯಕ ನಿರ್ದೇಶಕರುಗಳಿಗೆ ವಿಶೇಷ ಘಟಕ ಯೋಜನೆಯಡಿ ಬಿಡುಗಡೆ ಮಾಡಿದ ಮೊತ್ತದ ವಿವರ

ಲೆಕ್ಕ ಶೀರ್ಷಿಕೆ-2205-00-102-1-44-422

ಕ್ರ.ಸಂ	ಜಿಲ್ಲೆಗಳ ಹೆಸರು	ಮೊದಲನೇ ಕಂತು	ಎರಡನೇ ಕಂತು	ಮೂರನೇ ಕಂತು	ಹೆಚ್ಚುವರಿ	ಒಟ್ಟು ಮೊತ್ತ	ಗುರುಶಿಷ್ಯ ಪರಂಪರೆ	ಜನಪರ ಉತ್ಸವ
1	ಬೆಂಗಳೂರು ನಗರ	2100000	2000000	1500000	3500000	9100000	150000	5000000
2	ಬೆಂ. ಗ್ರಾಮಾಂತರ	300000	500000	400000	0	1200000	150000	500000
3	ರಾಮನಗರ	300000	600000	500000	0	1400000	150000	500000
4	ಕೋಲಾರ	450000	650000	500000	0	1600000	150000	500000
5	ಚಿಕ್ಕಬಳ್ಳಾಪುರ	450000	650000	500000	0	1600000	150000	500000
6	ತುಮಕೂರು	900000	900000	800000	300000	2900000	150000	500000
7	ಚಾಮರಾಜನಗರ	300000	500000	400000	0	1200000	150000	500000
8	ಮೈಸೂರು	900000	900000	800000	0	2600000	150000	500000
9	ಕೊಡಗು	225000	500000	300000	0	1025000	150000	500000
10	ಹಾಸನ	525000	525000	400000	0	1450000	150000	500000
11	ಚಿತ್ರದುರ್ಗ	450000	600000	500000	500000	2050000	150000	500000
12	ಶಿವಮೊಗ್ಗ	525000	625000	600000	0	1750000	150000	500000
13	ದಾವಣಗೆರೆ	600000	600000	500000	0	1700000	150000	500000
14	ಚಿಕ್ಕಮಗಳೂರು	400000	600000	500000	200000	1700000	150000	500000
15	ದಕ್ಷಿಣ ಕನ್ನಡ ಜಿಲ್ಲೆ	600000	600000	500000	0	1700000	150000	500000
16	ಉಡುಪಿ ಜಿಲ್ಲೆ	400000	500000	300000	0	1200000	150000	500000
17	ಧಾರವಾಡ ಜಿಲ್ಲೆ	525000	625000	500000	0	1650000	150000	500000

18	ಹಾವೇರಿ ಜಿಲ್ಲೆ	450000	550000	500000	0	1500000	150000	500000
19	ಕಾರವಾರ	450000	550000	500000	0	1500000	150000	500000
20	ಬೆಳಗಾವಿ	1350000	1350000	1000000	0	3700000	150000	500000
21	ಗದಗ್	300000	400000	300000	300000	1300000	150000	500000
22	ವಿಜಯಪುರ	600000	600000	500000	0	1700000	150000	500000
23	ಬಾಗಲಕೋಟೆ	525000	600000	500000	0	1625000	150000	500000
24	ಗುಲ್ಬರ್ಗಾ	700000	700000	600000	0	2000000	150000	500000
25	ಯಾದಗಿರಿ	300000	400000	300000	0	1000000	150000	500000
26	ಬಳ್ಳಾರಿ	700000	800000	600000	200000	2300000	150000	500000
27	ಕೊಪ್ಪಳ	400000	500000	400000	0	1300000	150000	500000
28	ರಾಯಚೂರು	525000	600000	500000	0	1625000	150000	500000
29	ಬೀದರ್	450000	550000	500000	0	1500000	150000	500000
30	ಮಂಡ್ಯ	525000	625000	600000	0	1750000	150000	500000
	ಒಟ್ಟು	**17225000**	**20100000**	**16300000**	**5000000**	**58625000**	**4500000**	**19500000**

ವಿಶೇಷ ಘಟಕ ಯೋಜನೆಯಡಿ 2017-18ರಲ್ಲಿ ಜಿಲ್ಲಾವಾರು ಬಿಡುಗಡೆ ಮಾಡಿದ ಅನುದಾನದ ವಿವರ			
ಕ್ರ.ಸಂ	ಜಿಲ್ಲೆಗಳು	ಸಹಾಯಕ ನಿರ್ದೇಶಕರಿಗೆ ಬಿಡುಗಡೆ ಮಾಡಿದ ಮೊತ್ತ	ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ ಮೊತ್ತ
	ಬೆಂಗಳೂರು ನಗರ	17450000	500000
2	ಬೆಂಗಳೂರು ಗ್ರಾಮಾಂತರ	2350000	0
3	ರಾಮನಗರ	3350000	1500000
4	ಚಿಕ್ಕಬಳ್ಳಾಪುರ	2450000	0
5	ಕೋಲಾರ	2950000	0
6	ತುಮಕೂರು	4650000	5150000
7	ಮೈಸೂರು	4250000	500000
8	ಚಾಮರಾಜನಗರ	1850000	0
9	ಮಂಡ್ಯ	3119360	500000
10	ಕೊಡಗು	1550000	0
11	ಹಾಸನ	2750000	800000
12	ಶಿವಮೊಗ್ಗ	2750000	3500000
13	ದಾವಣಗೆರೆ	3550000	2000000
14	ಮಂಗಳೂರು	3050000	0
15	ಉಡುಪಿ	2250000	1000000
16	ಹಾವೇರಿ	2450000	0
17	ವಿಜಯಪುರ	3233590	4500000
18	ಬಾಗಲಕೋಟೆ	2750000	10000000
19	ಕಾರವಾರ	2650000	0
20	ಕಲಬುರಗಿ	3450000	5500000
21	ಯಾದಗಿರಿ	2350000	1500000
22	ಬಳ್ಳಾರಿ	3950000	2000000
23	ಬೀದರ್	2000000	1500000
24	ಕೊಪ್ಪಳ	2250000	1000000
25	ಚಿತ್ರದುರ್ಗ	3450000	7500000
26	ಚಿಕ್ಕಮಗಳೂರು	2250000	2500000
27	ಬೆಳಗಾವಿ	6050000	4500000
28	ಧಾರವಾಡ	2750000	3000000
29	ಗದಗ	1850000	9000000
30	ರಾಯಚೂರು	2750000	0

2016-17ನೇ ಸಾಲಿನಲ್ಲಿ 30 ಜಿಲ್ಲಾ ಸಹಾಯಕ ನಿರ್ದೇಶಕರು
ಲೆಕ್ಕ ಶೀರ್ಷಿಕೆ

ಕ್ರ.ಸಂ.	ಜಿಲ್ಲೆಗಳ ಹೆಸರು	ಮೊದಲನೇ ಕಂತು	ಎರಡನೇ ಕಂತು
1	ಬೆಂಗಳೂರು ನಗರ	7500000	-
2	ಬೆಂ. ಗ್ರಾಮಾಂತರ	125000	300000
3	ರಾಮನಗರ	125000	300000
4	ಕೋಲಾರ	175000	300000
5	ಚಿಕ್ಕಬಳ್ಳಾಪುರ	175000	300000
6	ತುಮಕೂರು	300000	500000
7	ಚಾಮರಾಜನಗರ	125000	400000
8	ಮೈಸೂರು	300000	500000
9	ಕೊಡಗು	100000	250000
10	ಹಾಸನ	200000	300000
11	ಚಿತ್ರದುರ್ಗ	175000	300000
12	ಶಿವಮೊಗ್ಗ	200000	400000
13	ದಾವಣಗೆರೆ	225000	425000
14	ಚಿಕ್ಕಮಗಳೂರು	150000	300000
15	ದಕ್ಷಿಣ ಕನ್ನಡ ಜಿಲ್ಲೆ	225000	325000
16	ಉಡುಪಿ ಜಿಲ್ಲೆ	150000	250000
17	ಧಾರವಾಡ ಜಿಲ್ಲೆ	200000	300000
18	ಹಾವೇರಿ ಜಿಲ್ಲೆ	175000	
19	ಕಾರವಾರ	100000	
20	ಬೆಳಗಾವಿ	500000	
21	ಗದಗ್	125000	
22	ವಿಜಯಪುರ	225000	
23	ಬಾಗಲಕೋಟೆ	200000	
24	ಗುಲ್ಬರ್ಗಾ	250000	
25	ಯಾದಗಿರಿ	125000	
26	ಬಳ್ಳಾರಿ	250000	
27	ಕೊಪ್ಪಳ	150000	
28	ರಾಯಚೂರು	200000	
29	ಬೀದರ್	175000	
30	ಮಂಡ್ಯ	200000	
	ಒಟ್ಟು	**13125000**	

375000	300000	0	850000	200000	600000
300000	300000	0	700000	200000	600000
600000	400000	100000	1600000	200000	600000
250000	200000	200000	775000	200000	600000
325000	300000	0	850000	200000	600000
300000	300000	0	800000	200000	600000
350000	300000	0	900000	200000	600000
250000	200000	0	575000	200000	600000
350000	300000	200000	1100000	200000	600000
250000	200000	0	600000	200000	600000
300000	200000	0	700000	200000	600000
275000	200000	0	650000	200000	600000
-	-	0	200000	200000	600000
9375000	**8100000**	**30600000**	**31700000**	**6000000**	**20000000**

ಗಿರಿಜನ ಉಪಯೋಜನೆಯಡಿ 2017-18ರಲ್ಲಿ ಜಿಲ್ಲಾವಾರು ಬಿಡುಗಡೆ ಮಾಡಿದ ಅನುದಾನದ ವಿವರ			
ಕ್ರ.ಸಂ	ಜಿಲ್ಲೆಗಳು	ಸಹಾಯಕ ನಿರ್ದೇಶಕರಿಗೆ ಬಿಡುಗಡೆ ಮಾಡಿದ ಮೊತ್ತ	ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ ಮೊತ್ತ
1	ಬೆಂಗಳೂರು ನಗರ	3500000	0
2	ಬೆಂಗಳೂರು ಗ್ರಾಮಾಂತರ	1375000	0
3	ರಾಮನಗರ	1125000	0
4	ಚಿಕ್ಕಬಳ್ಳಾಪುರ	1575000	0
5	ಕೋಲಾರ	1675000	0
6	ತುಮಕೂರು	1700000	1000000
7	ಮೈಸೂರು	170000	0
8	ಚಾಮರಾಜನಗರ	1525000	0
9	ಮಂಡ್ಯ	1[illegible]290	0
10	ಕೊಡಗು	1100000	0
11	ಹಾಸನ	1400000	0
12	ಶಿವಮೊಗ್ಗ	1400000	2000000
13	ದಾವಣಗೆರೆ	1425000	0
14	ಮಂಗಳೂರು	1425000	0
15	ಉಡುಪಿ	1250000	0
16	ಹಾವೇರಿ	1375000	0
17	ವಿಜಯಪುರ	1927090	0
18	ಬಾಗಲಕೋಟೆ	1400000	0
19	ಕಾರವಾರ	1300000	0
20	ಕಲಬುರಗಿ	1500000	1500000
21	ಯಾದಗಿರಿ	1175000	500000
22	ಬಳ್ಳಾರಿ	1550000	1850000
23	ಬೀದರ್	1325000	500000
24	ಕೊಪ್ಪಳ	1250000	1000000
25	ಚಿತ್ರದುರ್ಗ	1575000	3000000
26	ಚಿಕ್ಕಮಗಳೂರು	1250000	0
27	ಬೆಳಗಾವಿ	2300000	4000000
28	ಧಾರವಾಡ	1400000	5500000
29	ಗದಗ	1175000	7250000
30	ರಾಯಚೂರು	1400000	0

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 09 ಡಬ್ಲ್ಯೂಎಲ್ಎ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.02.2019.

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560001.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು-560001.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಬೆಳ್ಳಿಪ್ರಕಾಶ್ (ಕಡೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1030ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/3ಅ/ಪ್ರ.ಸಂ.1030/2019, ದಿ:06.02.2019.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬೆಳ್ಳಿಪ್ರಕಾಶ್ (ಕಡೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1030 ಕ್ಕೆ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಎನ್.ಕೇಶವಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-4)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1030
2. ಸದಸ್ಯರ ಹೆಸರು : ಶ್ರೀ ಬೆಳ್ಳಿಪ್ರಕಾಶ್ (ಕಡೂರು)
3. ಉತ್ತರಿಸಬೇಕಾದ ದಿನಾಂಕ : 14.02.2019
4. ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಚಿಕ್ಕಮಗಳೂರು ಜಿಲ್ಲೆ ಕಡೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಾದು ಹೋಗಿರುವ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ತುಮಕೂರು ಶಾಖಾ ಕಾಲುವೆ 10 ರಿಂದ 30ಕಿ.ಮೀ ವರೆಗಿನ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಮುಗಿದು, ಕಾಮಗಾರಿಯ ಅನುಮೋದನೆ ಪಡೆದು 2 ವರ್ಷ ಕಳೆದರೂ ಕಾಮಗಾರಿ ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಿಕ್ಕಮಗಳೂರು ಜಿಲ್ಲೆ ಕಡೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ಕಿ.ಮೀ 10 ರಿಂದ ಕಿ.ಮೀ 30 ರವರೆಗಿನ ಕಾಮಗಾರಿಯನ್ನು ಮೆ॥ ಓಷಿಯನ್ ಕನ್ಸ್ಟ್ರಕ್ಷನ್ ಪ್ರೈ. ಲಿ, ಮಂಗಳೂರು ಇವರಿಗೆ ಕರಾರು ಒಪ್ಪಂದ ಸಂಖ್ಯೆ:27/2017-18 ದಿನಾಂಕ:09.03.2018ರಲ್ಲಿ 18 ತಿಂಗಳ ಕಾಲಾವಧಿಯನ್ನು ನಿಗದಿಪಡಿಸಿ ವಹಿಸಲಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಕಾಮಗಾರಿಯ ವಿಳಂಬಕ್ಕೆ ಸರ್ಕಾರ ಕೈಗೊಂಡ ಕ್ರಮವೇನು?	ಗುತ್ತಿಗೆ ನಿಬಂಧನೆ ಪ್ರಕಾರ, ಕಾಮಗಾರಿಯ ಸ್ಥಳಕ್ಕೆ ಸಂಬಂಧಿಸಿದ ರೈತರಿಂದ ಒಪ್ಪಿಗೆಯನ್ನು ಪಡೆದು ಕಾಲುವೆ ಕಾಮಗಾರಿಯನ್ನು ಗುತ್ತಿಗೆದಾರರು ಪ್ರಾರಂಭಿಸ ಬೇಕಿರುತ್ತದೆ. ಆದರೆ, ಈ ಕಾಲುವೆಯ ಸ್ಥಳಕ್ಕೆ ಸಂಬಂಧಿಸಿದ ಕಡೂರು ತಾಲ್ಲೂಕಿನ ರೈತರು ಭೂ ಪರಿಹಾರ ನೀಡದೆ ಕಾಮಗಾರಿಯನ್ನು ಪ್ರಾರಂಭ ಮಾಡಲು ಒಪ್ಪಿಗೆ ನೀಡದೇ ತೀವ್ರ ಪ್ರತಿರೋಧ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಈ ಕಾಮಗಾರಿಗೆ ಒಟ್ಟು 296 ಎ 06.04 ಗು ಭೂಸ್ವಾಧೀನವಾಗಬೇಕಿದ್ದು, 11(1) ಅಧಿಸೂಚನೆಯನ್ನು ದಿನಾಂಕ:25.01.2018 ರಂದು ಹೊರಡಿಸಲಾಗಿದೆ. ಇತರೆ ಮುಂದುವರೆದ ಭೂಸ್ವಾಧೀನ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ. ಉಳಿಕೆ ಪ್ರಕ್ರಿಯೆಗಳನ್ನು (ಅವಾರ್ಡ್ ಅನುಮೋದನೆ ಹಂತದವರೆಗೆ) ಶೀಘ್ರವಾಗಿ ಪೂರ್ಣಗೊಳಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಮಧ್ಯೆ 11(1) ಅಧಿಸೂಚನೆ ಆಗಿರುವ ಹಿನ್ನೆಲೆಯಲ್ಲಿ ಜಮೀನಿನ ರೈತರ ಮನವೊಲಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಸಹಾ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಜಸಂಇ 09 ಡಬ್ಲ್ಯೂಎಲ್ಎ 2019

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 08 ಡಬ್ಲ್ಯೂಎಲ್ಎ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.02.2019.

99 14/2/19

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560001.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು-560001.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಜ್ಯೋತಿ ಗಣೇಶ್ ಜಿ.ಬಿ (ತುಮಕೂರು ನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 687ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/3ಅ/ಪ್ರ.ಸಂ.687/2019, ದಿ:06.02.2019.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಜ್ಯೋತಿ ಗಣೇಶ್ ಜಿ.ಬಿ (ತುಮಕೂರು ನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 687 ಕ್ಕೆ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಎನ್.ಕೇಶವಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-4)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	687
2.	ಸದಸ್ಯರ ಹೆಸರು	:	ಶ್ರೀ ಜ್ಯೋತಿ ಗಣೇಶ್ ಜಿ.ಬಿ (ತುಮಕೂರು ನಗರ)
3.	ಉತ್ತರಿಸಬೇಕಾದ ದಿನಾಂಕ	:	14.02.2019
4.	ಉತ್ತರಿಸುವ ಸಚಿವರು	:	ಜಲ ಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ತುಮಕೂರು ನಗರಕ್ಕೆ ಎತ್ತಿನಹೊಳೆ ಯೋಜನೆಯ ಎಷ್ಟು ಪ್ರಮಾಣದ ನೀರನ್ನು ಹಂಚಿಕೆ ಮಾಡಲಾಗಿದೆ;	ಎತ್ತಿನಹೊಳೆ ಯೋಜನೆಯಡಿ ತುಮಕೂರು ನಗರಕ್ಕೆ ನೀರಿನ ಹಂಚಿಕೆ ಮಾಡಿರುವುದಿಲ್ಲ. ಈ ಹಿಂದೆ ತುಮಕೂರು ನಗರಕ್ಕೆ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆ ಅಡಿಯಲ್ಲಿ ಕುಡಿಯುವ ನೀರಿಗಾಗಿ 1.135 ಟಿ.ಎಂ.ಸಿ ನೀರಿನ ಹಂಚಿಕೆ ಮಾಡಲಾಗಿದೆ.
ಆ)	ಹಂಚಿಕೆ ಮಾಡಿದ್ದಲ್ಲಿ ಅದರ ಪ್ರಮಾಣ ಎಷ್ಟು? (ವಿವರ ನೀಡುವುದು)	

ಸಂಖ್ಯೆ: ಜಸಂಇ 08 ಡಬ್ಲ್ಯೂಎಲ್ಎ 2019

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 14 ಡಬ್ಲ್ಯೂಎಲ್‌ಎ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.02.2019.

18/02 14/2/19

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560001.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು-560001.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1117ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/3ಅ/ಪ್ರ.ಸಂ.1117/2019, ದಿ:06.02.2019.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1117 ಕ್ಕೆ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಎನ್.ಕೇಶವಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-4)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1117
2. ಸದಸ್ಯರ ಹೆಸರು : ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ)
3. ಉತ್ತರಿಸಬೇಕಾದ ದಿನಾಂಕ : 14.02.2019
4. ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಹುಕ್ಕೇರಿ ತಾಲ್ಲೂಕಿನ ಕೋಚರಿ ಬ್ಯಾರೇಜ್‌ದಿಂದ ಅಡವಿಸಿದ್ದೇಶ್ವರ ಏತ ನೀರಾವರಿ ಯೋಜನೆ ಮತ್ತು ಸುಲ್ತಾನಪೂರ ಬ್ಯಾರೇಜ್‌ನಿಂದ ಶಂಕರಲಿಂಗ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ;	ಸದರಿ ಯೋಜನೆಗಳ ಯೋಜನೆ (Planning), ವಿನ್ಯಾಸ (Design) ಮತ್ತು ರೂಪುರೇಷೆಗಳು (Scope) ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಇನ್ನು ಅಂತಿಮಗೊಂಡಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಸದರಿ ಯೋಜನೆಗಳ ಅಂದಾಜು ಮೊತ್ತವೆಷ್ಟು; ಈ ಯೋಜನೆಗಳಿಂದ ಎಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ (ಎರಡೂ ಯೋಜನೆಗಳ ಸಂಪೂರ್ಣ ವಿವರಗಳನ್ನು ಒದಗಿಸುವುದು);	
ಇ)	ಈ ಯೋಜನೆಗಳ ಪ್ರಸ್ತುತ ಹಂತವೇನು; ಸರ್ಕಾರ ಯೋಜನೆಗಳಿಗೆ ಅನುಮೋದನೆ ನೀಡಿದೆಯೇ (ವಿವರ ನೀಡುವುದು);	
ಈ)	ಹಾಗಿಲ್ಲದಿದ್ದಲ್ಲಿ, ಸದರಿ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಹಾಕಿಕೊಂಡಿರುವ ಕಾಲಮಿತಿಯೇನು?	

ಸಂಖ್ಯೆ: ಜಸಂಇ 14 ಡಬ್ಲ್ಯೂಎಲ್‌ಎ 2019

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 12 ಡಬ್ಲ್ಯೂಎಲ್ಎ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.02.2019.

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560001.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು-560001.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ(ಬೀಳಗಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 783ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/3ಅ/ಪ್ರ.ಸಂ.783/2019, ದಿ:06.02.2019.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 783 ಕ್ಕೆ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಎನ್.ಕೇಶವಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-4)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	783
2.	ಸದಸ್ಯರ ಹೆಸರು	:	ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ)
3.	ಉತ್ತರಿಸಬೇಕಾದ ದಿನಾಂಕ	:	14.02.2019
4.	ಉತ್ತರಿಸುವ ಸಚಿವರು	:	ಜಲ ಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಬಾಗಲಕೋಟ ಜಿಲ್ಲೆಯ ಬೀಳಗಿ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಘಟಪ್ರಭಾ ಬಲದಂಡೆ ಕಾಲುವೆ 145 ಕಿ.ಮೀ. ರಿಂದ 185 ಕಿ.ಮೀ. ರವರೆಗಿನ ಕಾಮಗಾರಿ 2006-07ರಲ್ಲಿಯೇ ಪೂರ್ಣಗೊಂಡಿದ್ದರೂ, ಇಲ್ಲಿಯವರೆಗೂ ರೈತರ ಜಮೀನಿಗೆ ನೀರು ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಾಗಲಕೋಟ ಜಿಲ್ಲೆಯ ಬೀಳಗಿ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಘಟಪ್ರಭಾ ಬಲದಂಡೆ ಕಾಲುವೆ ಕಿಮೀ 164 ವರೆಗೆ ನೀರು ಹರಿಸಲು ಸಾಧ್ಯವಾಗುತ್ತಿದ್ದು, ಕಿಮಿ 164 ರಿಂದ ಕಿಮೀ 199ರವರೆಗೆ ಕಾಲುವೆಯ ಕೊನೆಯ ಭಾಗಕ್ಕೆ ನೀರು ಹರಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಹಾಗಿದ್ದಲ್ಲಿ, ಕೃಷ್ಣಾ ನದಿಯಿಂದ ಏತ ನೀರಾವರಿ ಮಾಡಿ ಕಾಲುವೆ ಮೂಲಕ ಜಮೀನುಗಳಿಗೆ ನೀರು ಹರಿಸುವಂತೆ ಈ ಭಾಗದ ರೈತರು ಉಗ್ರ ಹೋರಾಟ, ಧರಣಿ ಸತ್ಯಾಗ್ರಹ ಮತ್ತು ಆಮರಣಾಂತ ಉಪವಾಸ ಕೈಗೊಂಡಿದ್ದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ
ಇ)	ಹಾಗಿದ್ದಲ್ಲಿ, ರೈತರ ಜಮೀನುಗಳಿಗೆ ನೀರು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಪ್ರಸಕ್ತ ಘಟಪ್ರಭಾ ಬಲದಂಡೆ ಕಾಲುವೆಯ ಕಿ.ಮಿ 164ರ ನಂತರದ 20678.27 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಸುಮಾರು 6.00 ಟಿ.ಎಂ.ಸಿ ನೀರಿನ ಅವಶ್ಯಕತೆ ಇದ್ದು, ನೀರಿನ ಲಭ್ಯತೆ ಹಾಗೂ ಹಂಚಿಕೆಯ ಕುರಿತು ಪರಿಶೀಲಿನೆಯಲ್ಲಿದೆ.
ಈ)	ಯಾವ ಕಾಲಮಿತಿಯೊಳಗೆ ರೈತರ ಜಮೀನುಗಳಿಗೆ ನೀರನ್ನು ಒದಗಿಸಲಾಗುವುದು;	
ಉ)	ನೀರು ಒದಗಿಸಲು ಸಾಧ್ಯವಾಗದಿದ್ದಲ್ಲಿ, ಈ ವ್ಯಾಪ್ತಿಯ ಸದರಿ ಜಮೀನುಗಳನ್ನು ಇಲ್ಲಿಯವರೆಗೂ "ಡಿನೋಟಿಫಿಕೇಶನ್" ಮಾಡದಿರಲು ಕಾರಣಗಳೇನು?	ಮೇಲಿನಂತೆ ಸಾಧ್ಯಾಸಾಧ್ಯತೆಯ ಅವಲೋಕನ ಮಾಡುತ್ತಿರುವ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಜಸಂಇ 12 ಡಬ್ಲ್ಯೂಎಲ್ಎ 2019

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 15 ಡಬ್ಲ್ಯೂಬಿಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.02.2019

15 ULS
14/2/19

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1024ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1024ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಡನೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಐ.ಎಸ್.ರುದ್ರಯ್ಯ)
ಶಾಖಾಧಿಕಾರಿ
ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ-5)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1024
ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ)
ಉತ್ತರಿಸುವ ದಿನಾಂಕ : 14/02/2019
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಕೃಷ್ಣಾ ಭಾಗ್ಯ ಜಲ ನಿಗಮದಿಂದ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಕೊಪ್ಪಳ ಏತ ನೀರಾವರಿ ಯೋಜನೆಯನ್ನು ಸೇರ್ಪಡೆ ಮಾಡಲಾಗಿದೆಯೇ;	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿ ಕೊಪ್ಪಳ ಏತ ನೀರಾವರಿ ಯೋಜನೆ ಸೇರ್ಪಡೆ ಮಾಡಲಾಗಿರುತ್ತದೆ.
ಆ	ಈ ನೀರಾವರಿ ಯೋಜನೆಯನ್ನು ಸೇರ್ಪಡೆ ಮಾಡಿದ್ದಲ್ಲಿ ಯೋಜನೆಯ ಪ್ರಗತಿಯೇನು; (ವಿವರ ನೀಡುವುದು)	ಕೊಪ್ಪಳ ಏತ ನೀರಾವರಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಮತ್ತು ಪ್ರಗತಿಯ ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ಯೋಜನಾ ಕಾಮಗಾರಿ ಹೆಸರು	ಪ್ರಸ್ತುತ ಹಂತ
1	ಮೊದಲನೇ ಮುಖ್ಯ ಸ್ಥಾವರ (ಟರ್ನ ಕೀ)	ಬಹುತೇಕ ಪೂರ್ಣ ಗೊಳ್ಳುವ ಹಂತದಲ್ಲಿದೆ.
2	ಎರಡನೇ ಮುಖ್ಯ ಸ್ಥಾವರ (ಟರ್ನ ಕೀ)	ಪೂರ್ಣಗೊಂಡಿದೆ.
3	1ನೇ & 2ನೇ ಮುಖ್ಯ ಸ್ಥಾವರದ ಕಾರ್ಯಾಚರಣೆಗಾಗಿ 220 ಕೆ.ವಿ. ಪವರ್ ಲೈನ್ ಕಾಮಗಾರಿ.	ಪ್ರಗತಿಯಲ್ಲಿದೆ.
4	ಹನಿ ನೀರಾವರಿ ಪದ್ಧತಿ ಅಳವಡಿಕೆಯ ಸರ್ವೆ ತನಿಖಾ ಕಾರ್ಯ, ವಿನ್ಯಾಸ, ನಕ್ಷೆ ಹಾಗೂ ಅಂದಾಜು ಪತ್ರಿಕೆ ತಯಾರಿಕೆ ಕನ್ಸಲ್ಟನ್ಸಿ ಕಾರ್ಯ.	ಹನಿ ನೀರಾವರಿ ಪದ್ಧತಿ ಅಳವಡಿಕೆಗಾಗಿಯ ವಿವಿಧ ಬ್ರ್ಯಾಂಚ್‌ಗಳ ಅಂದಾಜು ಪತ್ರಿಕೆ ತಯಾರಿಸಲಾಗಿರುತ್ತದೆ.

ಕ್ರ ಸಂ.	ಪ್ರಶ್ನೆ	ಉತ್ತರ
ಇ	ಸದರಿ ಯೋಜನೆಯು ಎಷ್ಟು ಎಕರೆ ವ್ಯಾಪ್ತಿಗೆ ಉಪಯೋಗವಾಗುವುದು; ಅದು ಯಾವ ಯಾವ ತಾಲ್ಲೂಕಿಗೆ ಸಂಬಂಧಿಸಿರುತ್ತದೆ;	ಸದರಿ ಯೋಜನೆಯ ತಾಲ್ಲೂಕಾವಾರು ನೀರಾವರಿಗೆ ಒಳಪಡುವ ಅಚ್ಚುಕಟ್ಟು ಕ್ಷೇತ್ರದ ವಿವರಗಳು ಈ ಕೆಳಗಿನಂತಿವೆ.

ಜಿಲ್ಲೆ ಹೆಸರು	ತಾಲ್ಲೂಕು	ಹನಿ ನೀರಾವರಿ ಸೌಲಭ್ಯಕ್ಕೆ ಒಳಪಡಲಿರುವ ಅಚ್ಚುಕಟ್ಟು ಕ್ಷೇತ್ರ (ಎಕರೆನಲ್ಲಿ)
ಬಾಗಲಕೋಟೆ	ಹುನಗುಂದ	21,736
	ಬಾದಾಮಿ	8,800
ಕೊಪ್ಪಳ	ಕುಷ್ಟಗಿ	1,08,087
	ಕೊಪ್ಪಳ	7,904
	ಯಲಬುರ್ಗ	1,11,940
	ಕನಕಗಿರಿ (ಗಂಗಾವತಿ ಮತಕ್ಷೇತ್ರ)	9,880
ಗದಗ	ರೋಣ	8,329
ಒಟ್ಟು		**2,76,676**

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 17 ಡಬ್ಲ್ಯೂಬಿಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.02.2019

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವನಗೌಡ ನಾಯಕ್ .ಕೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1109ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವನಗೌಡ ನಾಯಕ್ .ಕೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1109ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಡನೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಐ.ಎಸ್.ರುದ್ರಯ್ಯ)
ಶಾಖಾಧಿಕಾರಿ
ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ-5)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1109
ಸದಸ್ಯರ ಹೆಸರು : ಶ್ರೀ ಶಿವನಗೌಡ ನಾಯಕ್.ಕೆ. (ದೇವದುರ್ಗ)
ಉತ್ತರಿಸುವ ದಿನಾಂಕ : 14/02/2019
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಕೃಷ್ಣಾ ಬಲದಂಡೆ ಯೋಜನೆಯ ಆಧುನೀಕರಣಕ್ಕೆ ಸರ್ಕಾರ ಒದಗಿಸಿರುವ ರೂ.750.00 ಕೋಟಿ ಅನುದಾನದಲ್ಲಿ ಆಧುನೀಕರಣ ಮಾಡಲು ಸಾಧ್ಯವಿದೆಯೇ; ಇದಕ್ಕಾಗಿ ಹೆಚ್ಚುವರಿ ಅನುದಾನವನ್ನು ಒದಗಿಸಲು ಸರ್ಕಾರ ಚಿಂತಿಸುವುದೇ; ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಯಾವ ಯಾವ ಆಧುನೀಕರಣ ಕಾಮಗಾರಿಗಳು ಯಾವ ಹಂತದಲ್ಲಿವೆ;	2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕೃ.ಮೇ.ಯೋ. ಹಂತ-2ರ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ.0.00ನಿಂದ 95.00ರ ವರೆಗಿನ ಕಾಲುವೆ ಆಧುನೀಕರಣ ಯೋಜನೆಯನ್ನು ರೂ.750.00 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಘೋಷಣೆಯಾಗಿರುತ್ತದೆ. ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ.0.00ದಿಂದ 95.00 ಹಾಗೂ ವಿತರಣಾ ಕಾಲುವೆ ಸಂಖ್ಯೆ 1ರಿಂದ 18 ಕಾಲುವೆ ಜಾಲಗಳ ಸಮಗ್ರ ಆಧುನೀಕರಣಕ್ಕಾಗಿ ಒಟ್ಟು ರೂ.1800.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆ ತಯಾರಿಸಲಾಗಿರುತ್ತದೆ. ಪ್ರಸ್ತುತ ಸರ್ಕಾರದ ಆಡಳಿತಾತ್ಮಕ ಅನುಮೋದನೆಗೆ ಅನುಗುಣವಾಗಿ ಸಮಗ್ರವಾಗಿ ಕೃ.ಮೇ.ಯೋ. ಹಂತ-3ರ ಅಚ್ಚುಕಟ್ಟು ಪ್ರದೇಶ ಒಳಗೊಂಡಂತೆ ಒಟ್ಟಾರೆ ಅಚ್ಚುಕಟ್ಟು ಕ್ಷೇತ್ರಕ್ಕೆ ಸಮರ್ಪಕ ನೀರು ನಿರ್ವಹಣೆಗೆ ಅನುಕೂಲವಾಗಿಸುವಂತೆ ಸೂಕ್ತ ವಿನ್ಯಾಸದೊಂದಿಗೆ ನಾ.ಬ.ದಂ.ಕಾ. ಮುಖ್ಯ ಕಾಲುವೆ ಕಿ.ಮೀ.0.00ರಿಂದ 95.00ರವರೆಗಿನ ಆಧುನೀಕರಣದ ಅಂದಾಜು ಪ್ರಸ್ತಾವನೆ ತಯಾರಿಸಲಾಗಿದ್ದು ದಿ:01.02.2019ರಂದು ಜರುಗಿದ ನಿಗಮದ 119ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ಚರ್ಚಿಸಲ್ಪಟ್ಟು ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಲು ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತಾವನೆಯನ್ನು ಪಡೆದು ನಿಯಮಾನುಸಾರ ಪರಿಶೀಲಿಸಲಾಗುವುದು.
ಆ	ದೇವದುರ್ಗ ವಿಧಾನ ಸಭಾ ಕ್ಷೇತ್ರದಡಿ ಕಳೆದ ಆರ್ಥಿಕ ವರ್ಷದಲ್ಲಿ ಸಲ್ಲಿಕೆಯಾಗಿರುವ ಎಸ್.ಸಿ.ಪಿ. / ಟಿ.ಎಸ್.ಪಿ. ಅನುದಾನಕ್ಕೆ ವೈಯಕ್ತಿಕ ಕೊಳವೆ ಬಾವಿ ಕಾಮಗಾರಿಗಳಿಗೆ ಇಲ್ಲಿಯವರೆಗೂ ಅನುಮೋದನೆ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣವೇನು;	2016-17ನೇ ಸಾಲಿಗೆ ಹಾಗೂ 2017-18ನೇ ಸಾಲಿಗೆ ರಾಯಚೂರು ಜಿಲ್ಲೆಯ ದೇವದುರ್ಗ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟಾರೆಯಾಗಿ ಎಸ್.ಸಿ.ಪಿ. ಯೋಜನೆ ಅಡಿಯಲ್ಲಿ ರೂ.9.68ಕೋಟಿ ಹಾಗೂ ಟಿ.ಎಸ್.ಪಿ. ಯೋಜನೆಯಡಿಯಲ್ಲಿ ರೂ.14.00ಕೋಟಿ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಹಂಚಿಕೆಯಾದ ಅನುದಾನಕ್ಕೆ ಎದುರಾಗಿ ಎಸ್.ಸಿ.ಪಿ ಯೋಜನೆಯಡಿಯಲ್ಲಿ ರೂ.3.50ಕೋಟಿ ಮೊತ್ತದಲ್ಲಿ 59 ಸಂಖ್ಯೆಯ ಹಾಗೂ ಟಿ.ಎಸ್.ಪಿ ಯೋಜನೆಯಡಿಯಲ್ಲಿ ರೂ.9.50ಕೋಟಿ ಮೊತ್ತದಲ್ಲಿ 158 ಸಂಖ್ಯೆಯ ವೈಯಕ್ತಿಕ ಕೊಳವೆ ಬಾವಿ ಕೊರೆದು ವಿದ್ಯುತ್ ಸಂಪರ್ಕ ಕಲ್ಪಿಸಿ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ನಿಗಮದಿಂದ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗಿದೆ.
ಇ	ಕೆ.ಬಿ.ಜೆ.ಎನ್.ಎಲ್. ನಿಗಮದಿಂದ ಕಳೆದ 2 ವರ್ಷಗಳ ಎಸ್.ಸಿ.ಪಿ. / ಟಿ.ಎಸ್.ಪಿ. ಯೋಜನೆಯಡಿ ಸರ್ಕಾರವು ಮೀಸಲಿರಿಸಿದ್ದ ಅನುದಾನವೆಷ್ಟು; ಕೈಗೆತ್ತಿಕೊಂಡಿರುವ ಕಾಮಗಾರಿಗಳಾವುವು; ಬಾಕಿ ಉಳಿದಿರುವ ಅನುದಾನವೆಷ್ಟು? (ರಾಯಚೂರು ಜಿಲ್ಲೆಯ ತಾಲ್ಲೂಕುವಾರು, ವರ್ಷವಾರು ಮಾಹಿತಿ ನೀಡುವುದು)	ಕಳೆದ 2 ವರ್ಷಗಳಲ್ಲಿ (2016-17 ಮತ್ತು 2017-18) ರಾಯಚೂರು ಜಿಲ್ಲೆಗೆ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ಒದಗಿಸಲಾದ ಅನುದಾನ ಮತ್ತು ತಾಲ್ಲೂಕುವಾರು ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.

ಸಂಖ್ಯೆ: ಜಸಂಇ 17 ಡಬ್ಲ್ಯೂಬಿಎಂ 2019

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು

ಅನುಬಂಧ

ಕ್ರ ಸಂ.	ವರ್ಷ	ತಾಲ್ಲೂಕು	ವಿಧಾನ ಸಭೆ ಕ್ಷೇತ್ರ	ಕಾಮಗಾರಿ ವಿವರಗಳು	ಅನುದಾನ(ರೂ.ಲಕ್ಷಗಳಲ್ಲಿ)
1	ಎಸ್.ಸಿ.ಪಿ. – 2016–17	ಲಿಂಗಸುಗೂರು	ಲಿಂಗಸುಗೂರು	ಬೋರವೆಲ್	350.00
				ಸಿ.ಸಿ. ರಸ್ತೆ	150.00
				ಸಮುದಾಯ ಭವನ	
		ಲಿಂಗಸುಗೂರು	ಮಸ್ಕಿ	ಬೋರವೆಲ್	560.00
				ಸಿ.ಸಿ. ರಸ್ತೆ	240.00
				ಸಮುದಾಯ ಭವನ	
		ದೇವದುರ್ಗ	ದೇವದುರ್ಗ	ಬೋರವೆಲ್	828.00
				ಸಮುದಾಯ ಭವನ	140.00
		ಮಾನ್ವಿ	ಮಾನ್ವಿ	ಬೋರವೆಲ್	770.00
				ಸಿ.ಸಿ. ರಸ್ತೆ	250.00
				ಸಮುದಾಯ ಭವನ	80.00
		ರಾಯಚೂರು	ರಾಯಚೂರು ನಗರ	ಬೋರವೆಲ್	210.00
				ಸಮುದಾಯ ಭವನ	90.00
		ರಾಯಚೂರು	ರಾಯಚೂರು ಗ್ರಾಮೀಣ	ಬೋರವೆಲ್	195.00
				ಸಮುದಾಯ ಭವನ	105.00
2	ಟಿ.ಎಸ್.ಪಿ. – 2016–17	ಲಿಂಗಸುಗೂರು	ಲಿಂಗಸುಗೂರು	ಬೋರವೆಲ್	560.00
				ಸಮುದಾಯ ಭವನ	240.00
				ಶೌಚಾಲಯ	
		ಲಿಂಗಸುಗೂರು	ಮಸ್ಕಿ	ಬೋರವೆಲ್	490.00
				ಸಮುದಾಯ ಭವನ	210.00
				ಸಿ.ಸಿ. ರಸ್ತೆ	
		ದೇವದುರ್ಗ	ದೇವದುರ್ಗ	ಬೋರವೆಲ್	1180.00
				ಸಮುದಾಯ ಭವನ	160.00
				ಲ್ಯಾಟರಲ್ ಕಾಮಗಾರಿ	70.00
		ಮಾನ್ವಿ	ಮಾನ್ವಿ	ಬೋರವೆಲ್	560.00
				ಸಿ.ಸಿ. ರಸ್ತೆ	170.00
				ಸಮುದಾಯ ಭವನ	70.00
		ರಾಯಚೂರು	ರಾಯಚೂರು ನಗರ	ಬೋರವೆಲ್	140.00
				ಸಿ.ಸಿ. ರಸ್ತೆ	30.00
				ಸಮುದಾಯ ಭವನ	30.00
		ರಾಯಚೂರು	ರಾಯಚೂರು ಗ್ರಾಮೀಣ	ಬೋರವೆಲ್	65.00
				ಸಿ.ಸಿ. ರಸ್ತೆ	35.00
3	ಎಸ್.ಸಿ.ಪಿ. – 2017–18	ಲಿಂಗಸುಗೂರು	ಲಿಂಗಸುಗೂರು	ಬೋರವೆಲ್	200.00
				ಸಿ.ಸಿ. ರಸ್ತೆ	75.00
				ಸಮುದಾಯ ಭವನ	50.00
		ಲಿಂಗಸುಗೂರು	ಮಸ್ಕಿ	ಬೋರವೆಲ್	455.00
				ಸಿ.ಸಿ. ರಸ್ತೆ.	245.00
				ಸಮುದಾಯ ಭವನ	
				ಶೌಚಾಲಯ	
		ಮಾನ್ವಿ	ಮಾನ್ವಿ	ಬೋರವೆಲ್	515.00
				ಸಮುದಾಯ ಭವನ	285.00
		ರಾಯಚೂರು	ರಾಯಚೂರು ನಗರ	ಬೋರವೆಲ್	195.00
				ಸಿ.ಸಿ. ರಸ್ತೆ.	79.00
				ಸಮುದಾಯ ಭವನ	16.00
4	ಟಿ.ಎಸ್.ಪಿ. – 2017–18	ಲಿಂಗಸುಗೂರು	ಲಿಂಗಸುಗೂರು	ಬೋರವೆಲ್	78.00
				ಸಮುದಾಯ ಭವನ	22.00
		ಮಸ್ಕಿ	ಮಸ್ಕಿ	ಬೋರವೆಲ್	130.00
				ಸಮುದಾಯ ಭವನ	70.00
		ರಾಯಚೂರು	ರಾಯಚೂರು	ಬೋರವೆಲ್	390.00
				ಸಿ.ಸಿ. ರಸ್ತೆ	210.00
				ಸಮುದಾಯ ಭವನ	
		ಮಾನ್ವಿ	ಮಾನ್ವಿ	ಬೋರವೆಲ್	135.00
				ಸಮುದಾಯ ಭವನ	35.00

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 11 ಡಬ್ಲ್ಯೂಬಿಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.02.2019

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಸನಗೌಡ ದದ್ದಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 894ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಸನಗೌಡ ದದ್ದಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 894ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಡನೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಐ.ಎಸ್.ರುದ್ರಯ್ಯ)
ಶಾಖಾಧಿಕಾರಿ
ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ-5)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 894
ಸದಸ್ಯರ ಹೆಸರು	: ಶ್ರೀ ಬಸನಗೌಡ ದದ್ದಲ್ (ರಾಯಚೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ	: 14/02/2019
ಉತ್ತರಿಸುವ ಸಚಿವರು	: ಜಲ ಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ನಾರಾಯಣಪುರ ಬಲದಂಡೆ ಕಾಲುವೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;	**ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 0.00 ರಿಂದ 95.00 (ಸ್ಕೀಂ A) :** ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-2ರಲ್ಲಿ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ.0.00 ರಿಂದ 95.00 ಹಾಗೂ ಇದರಡಿಯ ವಿತರಣಾ ಕಾಲವೆ ಸಂಖ್ಯೆ 1 ರಿಂದ 18 ಜಾಲ ನಿರ್ಮಾಣ ಮಾಡಲಾಗಿದ್ದು 2002 ನೇ ಸಾಲಿನಿಂದ ರಾಯಚೂರು ಜಿಲ್ಲೆ ಲಿಂಗಸುಗೂರು ಮತ್ತು ದೇವದುರ್ಗ ತಾಲೂಕುಗಳ ವ್ಯಾಪ್ತಿಯಲ್ಲಿ ಸುಮಾರು 97,000 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. ಸರ್ಕಾರವು 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕೃ.ಮೇ.ಯೋ. ಹಂತ-2ರ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 0.00 ರಿಂದ 95.00ರ ವರೆಗಿನ ಕಾಲುವ ಆಧುನೀಕರಣ ಯೋಜನೆಯನ್ನು ರೂ.750.00 ಕೋಟಿ ವೆಚ್ಚದಲ್ಲಿ ಕೈಗೊಳ್ಳುವುದರ ಕುರಿತು ಘೋಷಣೆ ಮಾಡಿರುತ್ತದೆ.
ಆ	ಈ ಕಾಲುವೆಯನ್ನು A ಸ್ಕೀಂನಲ್ಲಿ 96 ಮೈಲಿವರೆಗೆ, B ಸ್ಕೀಂನಲ್ಲಿ 157 ಮೈಲಿ ವರೆಗೆ ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರಕ್ಕಿದೆಯೇ	**ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಕಿ.ಮೀ. 95.00 ರಿಂದ 168.50 (ಸ್ಕೀಂ B) :** ನಾರಾಯಣಪುರ ಬಲದಂಡೆ ಕಾಲುವೆ (ನಾ.ಬ.ದಂ.ಕಾ) ವಿಸ್ತರಣೆ ಕಿ.ಮೀ.95.00 ರಿಂದ 168.50 ರವರೆಗಿನ ಕಾಮಗಾರಿಯು ಕೃಮೇ.ಯೋ. ಹಂತ-3ರಡಿ ಒಂದು ಉಪ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ರಾಯಚೂರು ಜಿಲ್ಲೆಯಡಿ 56,100 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ. ಪ್ರಸ್ತುತ ನಾ.ಬ.ದಂ.ಕಾ ವಿಸ್ತರಣೆಯ ಉಪ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಈಗಾಗಲೇ ಕಿ.ಮೀ.95.00 ರಿಂದ 130.00 ವರೆಗಿನ ಮುಖ್ಯ ಕಾಲುವೆ ವಿಸ್ತರಣೆ ಕಾಮಗಾರಿ ಪೂರ್ಣಗೊಂಡಿರುತ್ತದೆ. ಮುಂದುವರೆದು, ನಾ.ಬ.ದಂ.ಕಾ. ಮುಖ್ಯ ಕಾಲುವೆ ಕಿ.ಮೀ.130.00 ರಿಂದ 168.50 ಹಾಗೂ ಕೆಲವು ವಿತರಣಾ ಕಾಲುವೆ ಜಾಲದ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ.

ಸಂಖ್ಯೆ: ಜಸಂಇ 11 ಡಬ್ಲ್ಯೂಬಿಎಂ 2019

(ಡಿ.ಕೆ.ಶಿವಕುಮಾರ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 12 ಡಬ್ಲ್ಯೂಬಿಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.02.2019

228 14/2/19

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 903ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 903ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಡನೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಐ.ಎಸ್.ರುದ್ರಯ್ಯ)
ಶಾಖಾಧಿಕಾರಿ
ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ–5)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 903
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್(ಇಂಡಿ)
ಉತ್ತರಿಸುವ ದಿನಾಂಕ : 14.02.2019
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
(ಅ)	ಇಂಡಿ ಶಾಖಾ ಕಾಲುವೆ (ಐ.ಬಿ.ಸಿ) ಎನ್.ಎಲ್.ಬಿ.ಸಿ ಯಿಂದ ಅವಶ್ಯಕ ಒಳ ಹರಿವಿನ ನೀರಿನ ಪ್ರಮಾಣ ಎಷ್ಟು ; ಪ್ರತಿ ಹಂಗಾಮಿನಲ್ಲಿ ಹರಿಸುತ್ತಿರುವ ನೀರಿನ ಪ್ರಮಾಣ ಎಷ್ಟು ; ಇದನ್ನು ಯಾವ ರೀತಿ ನಿರ್ವಹಣೆ ಮಾಡಲಾಗುತ್ತಿದೆ;	ಎನ್.ಎಲ್.ಬಿ.ಸಿ. (ನಾರಾಯಣಪೂರ ಎಡದಂಡೆ ಕಾಲುವೆ) ಯಿಂದ ಇಂಡಿ ಶಾಖಾ ಕಾಲುವೆ ಕಿ.ಮೀ 0.00 ರಲ್ಲಿ ವಿನ್ಯಾಸದಂತೆ 2850 ಕ್ಯೂಸೆಕ್ಸ್ ಒಳ ಹರಿವಿನ ಪ್ರಮಾಣ ಇರುತ್ತದೆ ಹಾಗೂ ಪ್ರತಿ ಹಂಗಾಮಿನಲ್ಲಿ ಇಂಡಿ ಶಾಖಾ ಕಾಲುವೆಯ (Demand Table and fortnightly crop water requirement) ನಂತೆ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದ ಬೆಳೆಗಳ ಅವಶ್ಯಕತೆಗನುಗುಣವಾಗಿ ನೀರಿನ ಪ್ರಮಾಣ 2300 ರಿಂದ 2500 ಕ್ಯೂಸೆಕ್ಸ್ ಇರುತ್ತದೆ. ಇಂಡಿ ಶಾಖಾ ಕಾಲುವೆ ಕಿ.ಮೀ 0.00 ರಿಂದ 172.00 ರವರೆಗೆ ಹಾಗೂ ಅದರಡಿಯ ವಿತರಣಾ ಕಾಲುವೆ ಸಂಖ್ಯೆ: 1 ರಿಂದ 46 ರವರೆಗೆ ನೀರಾವರಿ ಸಲಹಾ ಸಮಿತಿಯಲ್ಲಿ ನಿರ್ಧರಿಸಿದಂತೆ ವಾರಾಬಂದಿ ಪದ್ಧತಿ ಅನುಸಾರ ಅಚ್ಚುಕಟ್ಟು ಪ್ರದೇಶದಲ್ಲಿ ನೀರು ನಿರ್ವಹಣೆ ಮಾಡಲಾಗುತ್ತಿದೆ.
(ಆ)	ಇಂಡಿ ಶಾಖಾ ಕಾಲುವೆಯ ಕೊನೆಯ ಭಾಗದ ರೈತರಿಗೆ ನೀರು ಹರಿಯದೆ ರೈತರು ಜನ-ಜಾನುವಾರುಗಳು ಕುಡಿಯುವ ನೀರಿಗಾಗಿ ತೀವ್ರ ಕಷ್ಟಕರ ಪರಿಸ್ಥಿತಿಯನ್ನು ಎದುರಿಸುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;	ಹೌದು ಇಂಡಿ ಶಾಖಾ ಕಾಲುವೆಯಡಿಯಲ್ಲಿ ವಾರಾಬಂದಿ ಪದ್ಧತಿಯನ್ನು ನಿಗದಿಪಡಿಸುವ ಮೂಲಕ, ಕಾಲುವೆಗಳಲ್ಲಿ ಅಡೆತಡೆಗಳನ್ನು ಪ್ರತೀ ವರ್ಷ ಕ್ಲೋಜರ್ ಅವಧಿ ಹಾಗೂ ವಿಶೇಷ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದರಿಂದ, ಸಮರ್ಪಕ ನೀರು ನಿರ್ವಹಣೆ ಮತ್ತು ಕಾಲುವೆಗೆ ಅನಧಿಕೃತವಾಗಿ ಅಳವಡಿಸಿದ ಪಂಪ್‌ಸೆಟ್‌ಗಳನ್ನು ತೆರವುಗೊಳಿಸುವ ಮೂಲಕ ಈ ಕಾಲುವೆಯ ಕೊನೆಯ ಭಾಗದವರೆಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
(ಇ)	ಈ ಕಾಲುವೆಯ ನಾಲೆಯ ಕೊನೆಯ ಭಾಗದವರೆಗೆ ನೀರು ಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	
(ಈ)	ಮಹಾರಾಷ್ಟ್ರ ರಾಜ್ಯದ ಮಾದರಿಯಲ್ಲಿ ಪೋಲೀಸ್ ಭದ್ರತೆ ಒದಗಿಸಿ ಮತ್ತು ಅಕ್ರಮ ಪಂಪ್ ಸೇಟ್‌ಗಳನ್ನು ತೆರವುಗೊಳಿಸಿ ನಾಲೆಯ ಕೊನೆಯ ಭಾಗದವರೆಗೆ ನೀರು ಹರಿಸಲು ಸರ್ಕಾರಕ್ಕೆ ಆಸಕ್ತಿ ಇದೆಯೇ; (ವಿವರ ನೀಡುವುದು)	ಈಗಾಗಲೇ ಇಂಡಿ ಶಾಖಾ ಕಾಲುವೆಗೆ ವಾರಾಬಂದಿ ಪದ್ಧತಿಗೆ ಅನುಗುಣವಾಗಿ ನೀರು ನಿರ್ವಹಣೆ ಮಾಡಲಾಗುತ್ತಿದೆ. ಸಮರ್ಪಕ ನೀರು ನಿರ್ವಹಣೆಗಾಗಿ ಅವಶ್ಯಕತೆ ಕಂಡು ಬಂದಲ್ಲಿ, ಆರಕ್ಷಕ ನಿರೀಕ್ಷಕರವರ ಸಹಾಯವನ್ನು ಪಡೆದುಕೊಂಡು ಕಾಲುವೆಯ ಕೊನೆಯ ಭಾಗದವರೆಗೆ ನೀರನ್ನು ಹರಿಸಲು ಕ್ರಮ ಜರುಗಿಸಲಾಗುತ್ತಿದೆ.
(ಉ)	ನೀರು ನಿರ್ವಹಣೆ ಮಾಡಲು "ಡಿ" ದರ್ಜೆ ನೌಕರರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಊ)	ಸದರಿ ಕಾಲುವೆ ಕಿ.ಮೀ 64.00 ರಿಂದ 172.00 ರವರೆಗೆ ಕಾಲುವೆ ಆಧುನೀಕರಣಗೊಳಿಸಲು (ಇ.ಆರ್.ಎಮ್) ಸರ್ಕಾರ ಆಸಕ್ತಿ ಹೊಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	ಇಂಡಿ ಶಾಖಾ ಕಾಲುವೆ ಕಿ.ಮೀ 64.00 ರಿಂದ 172.00 ರವರೆಗಿನ ಕಾಲುವೆ ಜಾಲದಲ್ಲಿ ಸಮರ್ಪಕ ನೀರು ನಿಯಂತ್ರಣ ಮತ್ತು ನೀರು ನಿರ್ವಹಣೆಗೆ ಸಹಕಾರಿಯಾಗುವ ರೂ. 1050.00 ಕೋಟಿ ಮೊತ್ತದ Phase-II Scada Automation for NLBC, SEC, JBC, MBC & IBC (Km.0.00 to 172.00km) ಪ್ಯಾಕೇಜ್ ಕಾಮಗಾರಿಗೆ ಈಗಾಗಲೇ ಟೆಂಡರ್ ಅನುಮೋದನೆ ಗೊಂಡಿದ್ದು, ಶೀಘ್ರದಲ್ಲಿಯೇ ಕಾಮಗಾರಿ ಪ್ರಾರಂಭಗೊಳಿಸಲಾಗುವುದು.

ಸಂಖ್ಯೆ: ಜಸಂಇ 12 ಡಬ್ಲ್ಯೂಬಿಎಂ 2019

(ಡಿ.ಕೆ.ಶಿವಕುಮಾರ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 13 ಡಬ್ಲ್ಯೂಬಿಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.02.2019

329
14/2/19

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 904ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 904ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಡನೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಐ.ಎಸ್.ರುದ್ರಯ್ಯ)
ಶಾಖಾಧಿಕಾರಿ
ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ-5)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 904
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ : 14.02.2019
ಉತ್ತರಿಸಬೇಕಾದ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ವಿಜಯಪುರ ಜಿಲ್ಲೆಯ ಇಂಡಿ, ಸಿಂಧಗಿ, ಚಡಚಣ ಹಾಗೂ ವಿಜಯಪುರ ತಾಲ್ಲೂಕಿನ 64 ಹಳ್ಳಿಗಳ ನೀರಾವರಿ ವಂಚಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಬೇಕೆಂದು ರೈತಪರ ಸಂಘಟನೆಗಳು ಹಾಗೂ ಸಾರ್ವಜನಿಕರು ಧರಣಿ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಸದರಿ ನೀರಾವರಿ ವಂಚಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ; ಹೊಂದಿದ್ದಲ್ಲಿ, ಅದರ ರೂಪುರೇಷೆಗಳೇನು; (ವಿವರ ನೀಡುವುದು)	ವಿಜಯಪುರ ಜಿಲ್ಲೆಯ ಇಂಡಿ, ಸಿಂಧಗಿ, ಚಡಚಣ ಹಾಗೂ ವಿಜಯಪುರ ತಾಲ್ಲೂಕಿನ 64 ಹಳ್ಳಿಗಳ ನೀರಾವರಿ ವಂಚಿತ ಕ್ಷೇತ್ರದ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಕುರಿತಾಗಿ ನೀರಿನ ಲಭ್ಯತೆ, ತಾಂತ್ರಿಕ ಸಾಧ್ಯ ಸಾಧ್ಯತೆಯ ಪರ್ಯಾಯ ಪ್ರಸ್ತಾವನೆಗಳನ್ನು ದಿನಾಂಕ:05.11.2018 ಮತ್ತು 05.12.2018ರಂದು ಜರುಗಿದ ಕೃಷ್ಣಾ ಭಾಗ್ಯ ಜಲ ನಿಗಮದ 11ನೇ ತಾಂತ್ರಿಕ ಉಪ ಸಮಿತಿಯಲ್ಲಿ ಮಂಡಿಸಲಾಗಿದ್ದು, ಸಮಿತಿಯು ಪರ್ಯಾಯ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯ ಸಾಧ್ಯತೆ ಕುರಿತಂತೆ ಪರಿಶೀಲಿಸಲು ಸೂಚಿಸಿದ್ದು ಅದರಂತೆ ಕ್ರಮ ಜರುಗಿಸಲಾಗುತ್ತಿದೆ.
ಇ)	ಸದರಿ ಯೋಜನೆಯನ್ನು 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಲಾಗುವುದೇ;	ಸರ್ಕಾರವು 2019-20ರ ಆಯವ್ಯಯ ಭಾಷಣದಲ್ಲಿ ರೂ.250.00 ಕೋಟಿ ವೆಚ್ಚದಲ್ಲಿ ಇಂಡಿ ಹಾಗೂ ನಾಗಠಾಣ ವ್ಯಾಪ್ತಿಯ 28,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಹೊರ್ತಿ – ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಘೋಷಿಸಿದೆ.
ಈ)	ಘೋಷಣೆ ಮಾಡಿದಲ್ಲಿ ಈ ಕಾಮಗಾರಿಗಾಗಿ ಕಾಯ್ದಿರಿಸುವ ಅನುದಾನ ಎಷ್ಟು; (ವಿವರ ನೀಡುವುದು)	
ಉ)	ಯಾವ ಕಾಲಮಿತಿಯೊಳಗೆ ಈ ಯೋಜನೆಗೆ ಚಾಲನೆ ನೀಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?	ಸದರಿ ಯೋಜನೆಯ ನೀರಿನ ಲಭ್ಯತೆ, ತಾಂತ್ರಿಕ ಸಾಧ್ಯ ಸಾಧ್ಯತೆಯ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಸಮಿತಿಯ ಶಿಫಾರಸ್ಸಿನಂತೆ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಜಸಂಇ 13 ಡಬ್ಲ್ಯೂಬಿಎಂ 2019

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂ:ಸಾರಿಇ 13 ಸಾಇಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 14-02-2019.

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಚುಕ್ಕೆ ಗುರುತಿಲ್ಲದ/ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:913 ಕ್ಕೆ ದಿನಾಂಕ:14-02-2019 ರಂದು ಸದನದಲ್ಲಿ ಉತ್ತರ ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎನ್.ಎ.ಹ್ಯಾರಿಸ್ ಇವರ ಚುಕ್ಕೆ ಗುರುತಿಲ್ಲದ/ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 913 ಕ್ಕೆ ದಿನಾಂಕ: 14-02-2019 ರಂದು ಸದನದಲ್ಲಿ ಉತ್ತರ ನೀಡುವ ಸಂಬಂಧವಾಗಿ ಉತ್ತರದ 150 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ನಂದಕುಮಾರ್ ಬಿ.)
ಪೀಠಾಧಿಕಾರಿ, ಸಾರಿಗೆ-2,
ಸಾರಿಗೆ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 913

ಸದಸ್ಯರ ಹೆಸರು : ಶ್ರೀ ಎನ್.ಎ.ಹ್ಯಾರಿಸ್ (ಶಾಂತಿನಗರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 14-02-2019

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿರುವ ವಾಹನಗಳಿಗೆ ಜಿಪಿಎಸ್ ವ್ಯವಸ್ಥೆ ಮತ್ತು ಪ್ಯಾನಿಕ್ ಬಟನ್ ಅಳವಡಿಸುವುದನ್ನು ಕಡ್ಡಾಯಗೊಳಿಸುವ ಕುರಿತಾದ ಸರ್ಕಾರದ ನೀತಿನಿಯಮಗಳು ಹಾಗೂ ಅಳವಡಿಕೆಯಿಂದ ಉಂಟಾಗುವ ಉಪಯುಕ್ತತೆಗಳೇನು;	ಕೇಂದ್ರ ಸರ್ಕಾರವು ಅಧಿಸೂಚನೆ ಸಂಖ್ಯೆ:ಎಸ್.ಓ. 5424 (ಇ) ದಿನಾಂಕ:25-10-2018 ರಲ್ಲಿ ದಿನಾಂಕ:01-01-2019 ರಿಂದ ಜಾರಿಗೆ ಬರುವಂತೆ ಸಾರ್ವಜನಿಕ ಸೇವಾ ವಾಹನಗಳಿಗೆ Vehicle Location Tracking System ಮತ್ತು ಎಮರ್ಜೆನ್ಸಿ ಬಟನ್ ಅಳವಡಿಸುವುದನ್ನು ಕಡ್ಡಾಯಗೊಳಿಸಿರುತ್ತದೆ. Vehicle Location Tracking System ಅಳವಡಿಕೆಯಿಂದಾಗಿ ವಾಹನಗಳ ಚಲನ ವಲನಗಳ ಬಗ್ಗೆ ನಿಗಾವಹಿಸಬಹುದಾಗಿರುತ್ತದೆ ಮತ್ತು ಅಗತ್ಯ ಮಾಹಿತಿ ಸಂಗ್ರಹಿಸಬಹುದಾಗಿರುತ್ತದೆ. ಪ್ಯಾನಿಕ್ ಬಟನ್ ಅಳವಡಿಕೆಯಿಂದಾಗಿ ಪ್ರಯಾಣಿಕ ವಾಹನಗಳಲ್ಲಿ ಪ್ರಯಾಣ ಮಾಡುವ ಮಹಿಳಾ ಪ್ರಯಾಣಿಕರು, ವೃದ್ಧರು, ಮಕ್ಕಳು ಮತ್ತು ಪ್ರಯಾಣಿಕರಿಗೆ, ಚಾಲಕರಿಂದ ದೌರ್ಜನ್ಯ/ಅಪಾಯ ಎದುರಾದಾಗ ಪ್ಯಾನಿಕ್ ಬಟನ್‌ನ್ನು ಉಪಯೋಗಿಸಿ ನಿಯಂತ್ರಣ ಕೊಠಡಿಗೆ ಸಂಪರ್ಕ ಸಾಧಿಸಿ ಸಹಾಯ ಪಡೆಯಬಹುದಾಗಿದೆ.
(ಆ)	ಜಿಪಿಎಸ್ ಮತ್ತು ಪ್ಯಾನಿಕ್ ಬಟನ್ ಅಳವಡಿಕೆಯ ಕುರಿತಾದ ಕಾನೂನು, ನೀತಿ-ನಿಯಮಗಳು ಯಾವುವು;	Vehicle Location Tracking system ಮತ್ತು ಎಮರ್ಜೆನ್ಸಿ ಬಟನ್ ಅಳವಡಿಕೆಯ ಕುರಿತು ಕೇಂದ್ರ ಸರ್ಕಾರವು ಹೊರಡಿಸಿದ ಅಧಿಸೂಚನೆ ಸಂಖ್ಯೆ: ಎಸ್.ಓ. 5424 (ಇ) ದಿನಾಂಕ:25-10-2018 ರ ಪ್ರಕಾರ ದಿನಾಂಕ:01-01-2019 ರಿಂದ ಸಾರ್ವಜನಿಕ ಸೇವಾ ವಾಹನಗಳಿಗೆ ಜಿ.ಪಿ.ಎಸ್. ವ್ಯವಸ್ಥೆ ಮತ್ತು ಪ್ಯಾನಿಕ್ ಬಟನ್ ಅಳವಡಿಸುವುದು ಕಡ್ಡಾಯವಾಗಿರುತ್ತದೆ.
(ಇ)	ನೂತನ ತಂತ್ರಜ್ಞಾನಾಧಾರಿತ ವ್ಯವಸ್ಥೆಯ ನಿಯಂತ್ರಣ ಮತ್ತು ನಿರ್ವಹಣೆಯ ಕುರಿತಾದ ವಿವರಗಳೇನು?	ನೂತನ ವ್ಯವಸ್ಥೆಯ ನಿರ್ವಹಣೆ ಮತ್ತು ನಿಯಂತ್ರಣಕ್ಕೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸಮಯಾವಕಾಶ ಬೇಕಾಗಿರುತ್ತದೆ. ಆದ್ದರಿಂದ ಈ ವ್ಯವಸ್ಥೆಯನ್ನು ಜಾರಿಗೊಳಿಸಲು ನಿಗದಿಪಡಿಸಿರುವ ಅವಧಿಯನ್ನು ದಿನಾಂಕ:31-07-2019 ರವರೆಗೆ ವಿಸ್ತರಿಸುವಂತೆ ಕೇಂದ್ರ ಸರ್ಕಾರದ ರಾಷ್ಟ್ರೀಯ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಮಂತ್ರಾಲಯವನ್ನು ಕೋರಲಾಗಿರುತ್ತದೆ.

ಸಾರಿಇ 13 ಸಾಇಪ್ರ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಸಾರಿಇ 20 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:173ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:173ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 173

ಸದಸ್ಯರ ಹೆಸರು : ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ

ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 14-02-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆಯಲ್ಲಿ ಹೊಸದಾಗಿ ರಚನೆಗೊಂಡಿರುವ ಮೂಡಲಗಿ ತಾಲೂಕು ಕೇಂದ್ರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವತಿಯಿಂದ ಹೊಸದಾಗಿ ಬಸ್ ನಿಲ್ದಾಣ ಹಾಗೂ ಡಿಪೋ ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆಯೇ;	ಬೆಳಗಾವಿ ಜಿಲ್ಲೆಯ ಮೂಡಲಗಿಯಲ್ಲಿ 1.04ಎಕರೆ ಜಮೀನಿನಲ್ಲಿ ಬಸ್ ನಿಲ್ದಾಣ ನಿರ್ಮಿಸಲಾಗಿರುತ್ತದೆ.
ಆ	ಹಾಗಿದ್ದಲ್ಲಿ, ನಿಲ್ದಾಣ ಹಾಗೂ ಡಿಪೋಗಳನ್ನು ಯಾವಾಗ ಸ್ಥಾಪಿಸಲಾಗುವುದು; ಯಾವ ಸ್ಥಳ ಗುರುತಿಸಲಾಗಿದೆ; ಅದಕ್ಕಾಗಿ ಸರಕಾರವು ಮೀಸಲಿಟ್ಟ ಅನುದಾನವೆಷ್ಟು; ಈ ಪೈಕಿ ಬಿಡುಗಡೆ ಮಾಡಲಾದ ಹಣವೆಷ್ಟು; (ಸಂಪೂರ್ಣ ವಿವರ ನೀಡುವುದು)	ಪ್ರಸ್ತುತ ಮೂಡಲಗಿಯಿಂದ ಅಂದಾಜು 30 ಕಿ.ಮೀ ದೂರದಲ್ಲಿ ಗೋಕಾಕ ಘಟಕವಿದ್ದು, 45 ಕಿ.ಮೀ ದೂರದಲ್ಲಿ ಅಥಣಿ ಘಟಕವಿದ್ದು, 40 ಕಿ.ಮೀ ದೂರದಲ್ಲಿ ರಾಯಬಾಗ ಘಟಕವಿದ್ದು, ಹೊಸ ಬಸ್ ಡಿಪೋ/ಬಸ್ ನಿಲ್ದಾಣ ಸ್ಥಾಪಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ.
ಇ	ಹೊಸ ನಿಲ್ದಾಣ ಹಾಗೂ ಬಸ್ ಡಿಪೋ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು;	
ಈ	ಮೂಡಲಗಿ ತಾಲೂಕು ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ.ವತಿಯಿಂದ ಗ್ರಾಮೀಣ ಪ್ರದೇಶದ ಪ್ರತಿ ಹಳ್ಳಿಗೂ ಬಸ್ ಸಂಚಾರ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ; ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಬಸ್ಸುಗಳ ವ್ಯವಸ್ಥೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದೇ? (ವಿವರ ನೀಡುವುದು)	ಮೂಡಲಗಿ ಬಸ್ ನಿಲ್ದಾಣದ ಮುಖಾಂತರ ಒಟ್ಟು 163 ಸರತಿಗಳು ಕಾರ್ಯಾಚರಣೆಯಲ್ಲಿರುತ್ತವೆ. ಮೂಡಲಗಿ ತಾಲೂಕು ವ್ಯಾಪ್ತಿಯಲ್ಲಿ ಬರುವ ಎಲ್ಲ ಹಳ್ಳಿಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಸಾರ್ವಜನಿಕರ ಹಾಗೂ ವಿಧ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಹಂತಹಂತವಾಗಿ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು.

ಸಾರಿಇ 20 ಸಾಸಂಪ್ರ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಸಾರಿಇ 35 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಸೌಮ್ಯ ರೆಡ್ಡಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1028ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಸೌಮ್ಯ ರೆಡ್ಡಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1028ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1028
ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 14-02-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಜಯನಗರ ವಿಧಾನ ಸಭಾ ಕ್ಷೇತ್ರದ ಜಯನಗರ 9ನೇ ಬ್ಲಾಕ್ ಹಾಗೂ ಜಯನಗರ 4ನೇ ಟಿ ಬ್ಲಾಕ್ ಮುಂಖಾತರ ಸಂಚರಿಸುತ್ತಿದ್ದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾರ್ಗ ಸಂಖ್ಯೆ:20, 23, 181, 60ಬಿ, 17ಬಿ, 3ಬಿ, 3ಇ, ಜಿ12, 235ಹೆಚ್, 235ಜಿ, 1ಎ ಬಸ್ಸುಗಳನ್ನು ಸ್ಥಗಿತಗೊಳಿಸಿರುವುದರಿಂದ ಈ ಭಾಗದ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಯನಗರ 9 ನೇ ಬ್ಲಾಕ್ ಹಾಗೂ ಜಯನಗರ 4ನೇ ಟಿ ಬ್ಲಾಕ್ ನಿಂದ ಮತ್ತು ಮಾರ್ಗವಾಗಿ ನಗರದ ವಿವಿಧ ಭಾಗಗಳಿಗೆ ಒಟ್ಟು 5 ಮಾರ್ಗಗಳಲ್ಲಿ 21 ಅನುಸೂಚಿಗಳಿಂದ 203 ಏಕಮುಖ ಸುತ್ತುವಳಿಗಳನ್ನು ಪ್ರಯಾಣಿಕರ ಬೇಡಿಕೆ/ಅಗತ್ಯಕ್ಕೆ ಅನುಗುಣವಾಗಿ ಕಾರ್ಯಾಚರಣೆಗೊಳಿಸಲಾಗುತ್ತಿದೆ. ಕಾರ್ಯಾಚರಣೆಗೊಳಿಸುತ್ತಿರುವ ಅನುಸೂಚಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ)	ಹಾಗಿದ್ದಲ್ಲಿ, ಸಾರ್ವಜನಿಕ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬಸ್ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ;	
ಇ)	ಜಯನಗರ ವಿಧಾನ ಸಭಾ ಕ್ಷೇತ್ರದ ಸಾರ್ವಜನಿಕರ ಬೇಡಿಕೆಯಂತೆ ಜಯನಗರ 9ನೇ ಬ್ಲಾಕ್‌ನಿಂದ ಜಯನಗರ 4ನೇ 'ಟಿ' ಬ್ಲಾಕ್ ಮಾರ್ಗವಾಗಿ ಕೆ.ಆರ್.ಮಾರುಕಟ್ಟೆ, ಶಿವಾಜಿನಗರ, ಶಾಂತಿನಗರ, ಯಶವಂತಪುರ, ಬನಶಂಕರಿಗೆ ನೇರ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದೇ?	ಜಯನಗರ 9 ನೇ ಬ್ಲಾಕ್, ಜಯನಗರ 4ನೇ ಟಿ ಬ್ಲಾಕ್ ಹಾಗೂ ಜಯನಗರ 4ನೇ ಬ್ಲಾಕ್ ನಿಂದ ಸಾರ್ವಜನಿಕ ಪ್ರಯಾಣಿಕರ ಅಗತ್ಯಕ್ಕೆ ಅನುಗುಣವಾಗಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಸಾರಿಇ 35 ಸಾಸಂಪ್ರ 2019

(ಡಿ.ಸಿ. ತಮ್ಮಣ್ಣ)
ಸಾರಿಗೆ ಸಚಿವರು

ಅನುಬಂಧ

ಜಯನಗರ 9ನೇ ಬ್ಲಾಕ್ ನಿಂದ ಜಯನಗರ 4ನೇ ಟಿ ಬ್ಲಾಕ್ ಮಾರ್ಗವಾಗಿ ಆಚರಣೆಯಲ್ಲಿರುವ ಅನುಸೂಚಿಗಳ ವಿವರ

ಕ್ರ.ಸಂ	ಮಾರ್ಗ ಸಂಖ್ಯೆ	ಎಲ್ಲಿಂದ	ಎಲ್ಲಿಗೆ	ಒಟ್ಟು ಅನುಸೂಚಿ	ಒಟ್ಟು ಸುತ್ತುವಳಿ
1	3–ಇ	ಕುವೆಂಪು ನಗರ	ಶ್ರೀವಿದ್ಯಾನಗರ	01	09
2	18	ಅಟಲ್‌ಬಿಹಾರಿ ವಾಜಪೇಯಿ ಬಸ್ ನಿಲ್ದಾಣ (ಜಯನಗರ 9 ನೇ ಬ್ಲಾಕ್)	ಕೆಂಪೇಗೌಡ ಬಸ್ ನಿಲ್ದಾಣ	04	52
3	60–ಎ	ಅಟಲ್‌ಬಿಹಾರಿ ವಾಜಪೇಯಿ ಬಸ್ ನಿಲ್ದಾಣ (ಜಯನಗರ 9 ನೇ ಬ್ಲಾಕ್)	ವಿಜಯನಗರ ಟಿಟಿಎಂಸಿ	10	120
4	181	ಅಟಲ್‌ಬಿಹಾರಿ ವಾಜಪೇಯಿ ಬಸ್ ನಿಲ್ದಾಣ (ಜಯನಗರ 9 ನೇ ಬ್ಲಾಕ್)	ಕಾವೇರಿನಗರ	02	12
5	235–ಹೆಚ್	ಅಟಲ್‌ಬಿಹಾರಿ ವಾಜಪೇಯಿ ಬಸ್ ನಿಲ್ದಾಣ (ಜಯನಗರ 9 ನೇ ಬ್ಲಾಕ್)	ಬಂಡೇ ಮಾರಮ್ಮ ಬಸ್ ನಿಲ್ದಾಣ	01	10
			ಒಟ್ಟು	**21**	**203**

ಕರ್ನಾಟಕ ಸರ್ಕಾರ

ಸಂ:ಸಾರಿಇ 10 ಸಾಇಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 14-02-2019.

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಚುಕ್ಕೆ ಗುರುತಿಲ್ಲದ/ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:270 ಕ್ಕೆ ದಿನಾಂಕ:14-02-2019 ರಂದು ಸದನದಲ್ಲಿ ಉತ್ತರ ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ್ ಇವರ ಚುಕ್ಕೆ ಗುರುತಿಲ್ಲದ/ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 270 ಕ್ಕೆ ದಿನಾಂಕ: 14-02-2019 ರಂದು ಸದನದಲ್ಲಿ ಉತ್ತರ ನೀಡುವ ಸಂಬಂಧವಾಗಿ ಉತ್ತರದ 150 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ನಂದಕುಮಾರ್ ಬಿ.)
ಪೀಠಾಧಿಕಾರಿ, ಸಾರಿಗೆ-2,
ಸಾರಿಗೆ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	270
ಸದಸ್ಯರ ಹೆಸರು	:	ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ್ (ರಾಮದುರ್ಗ)
ಉತ್ತರಿಸಬೇಕಾದ ಸಚಿವರು	:	ಮಾನ್ಯ ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	14-02-2019

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿರುವ RTO ಕಚೇರಿಗಳು ಎಷ್ಟು;
(ವಿವರ ನೀಡುವುದು)</td><td>ರಾಜ್ಯದಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗಳ ವಿವರ ಈ ಕೆಳಕಂಡಂತಿರುತ್ತದೆ:
<table>
<tr><th>ಕ್ರ.ಸಂ.</th><th>ವಿಭಾಗೀಯ ಕಚೇರಿ</th><th>ಸಂಖ್ಯೆ</th></tr>
<tr><td>1)</td><td>ಉಪ ಸಾರಿಗೆ ಆಯುಕ್ತರು / ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ</td><td>15</td></tr>
<tr><td>2)</td><td>ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ</td><td>31</td></tr>
<tr><td>3)</td><td>ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ</td><td>20</td></tr>
</table>
</td></tr>
<tr><td>(ಆ)</td><td>2017-18ನೇ ಸಾಲಿಗೆ ಈ ಕಚೇರಿಗಳಿಂದ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಬಂದಿರುವ ಆದಾಯವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td rowspan="3">ಪ್ರಾದೇಶಿಕ ಸಾರಿಗೆ ಕಚೇರಿಗಳು ತಾಲ್ಲೂಕುವಾರು ಇಲ್ಲದಿರುವುದರಿಂದ ಉ.ಸಾ.ಆ./ಹಿ.ಪ್ರಾ.ಸಾ.ಅ., ಪ್ರಾ.ಸಾ.ಅ. ಮತ್ತು ಸ.ಪ್ರಾ.ಸಾ.ಅ. ಕಚೇರಿವಾರು 2017-18ನೇ ಸಾಲಿನಲ್ಲಿ ನಿಗದಿಪಡಿಸಲಾದ ವಾರ್ಷಿಕ ತೆರಿಗೆ ಗುರಿ ಮತ್ತು ಸಂಗ್ರಹಣೆಯಾದ ತೆರಿಗೆ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

<u>ಈವರೆವಿಗೂ ಸಂಗ್ರಹಣೆಯಾಗಿರುವ ತೆರಿಗೆ ವಿವರ:</u>
<table>
<tr><th>ವರ್ಷ</th><th>ನಿಗಧಿಪಡಿಸಿದ ಗುರಿ (ರೂ. ಕೋಟಿಗಳಲ್ಲಿ)</th><th>ಒಟ್ಟು ತೆರಿಗೆ ಸಂಗ್ರಹಣೆ (ರೂ. ಕೋಟಿಗಳಲ್ಲಿ)</th></tr>
<tr><td>2017-18</td><td>6006.00</td><td>6156.14</td></tr>
<tr><td>2018-19 (ಜನವರಿ ಅಂತ್ಯದವರೆಗೆ)</td><td>5547.02 (ವಾರ್ಷಿಕ ಗುರಿ 6656.42)</td><td>5333.77</td></tr>
</table>
</td></tr>
<tr><td>(ಇ)</td><td>ನಿಗದಿಪಡಿಸಲಾದ ಗುರಿ ಎಷ್ಟು;</td></tr>
<tr><td>(ಈ)</td><td>ಈವರೆವಿಗೆ ಸಂಗ್ರಹಣೆಯಾದ ತೆರಿಗೆ/ ಆದಾಯವೆಷ್ಟು;
(ವಿವರ ನೀಡುವುದು)</td></tr>
<tr><td>(ಉ)</td><td>ತೆರಿಗೆ ಸಂಗ್ರಹಣೆ ಕಡಿಮೆಯಾಗಲು ಕಾರಣವೇನು?
(ವಿವರ ನೀಡುವುದು)</td><td>2018-19 ನೇ ಸಾಲಿನಲ್ಲಿ ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆಗೆ ತೆರಿಗೆ ವಿನಾಯಿತಿ ನೀಡಿರುವುದರಿಂದ ಮತ್ತು ಸಾರಿಗೆ ಸಂಸ್ಥೆಗಳಿಗೆ ನಿಗಧಿಪಡಿಸಿದ ತೆರಿಗೆಯನ್ನು ಮಾರ್ಚ್ 2019ರ ಅಂತ್ಯಕ್ಕೆ ಪುಸ್ತಕ ಹೊಂದಾಣಿಕೆ ಆದೇಶ ನೀಡುವುದರಿಂದ ಜನವರಿ 2019ರ ಅಂತ್ಯಕ್ಕೆ ರಾಜಸ್ವ ಸಂಗ್ರಹಣೆ ಕಡಿಮೆಯಾಗಿದೆ.</td></tr>
</table>

ಸಾರಿಇ 10 ಸಾಇಪ್ರ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

2017-18ನೇ ಸಾಲಿನಲ್ಲಿ ಸಾರಿಗೆ ಇಲಾಖೆಯ ಕಛೇರಿಗಳಿಂದ ಸರ್ಕಾರಕ್ಕೆ ಬಂದಿರುವ ಆದಾಯದ ವಿವರ.			
			(ರೂ. ಲಕ್ಷಗಳಲ್ಲಿ)
ಕ್ರ. ಸಂ.	ಕಛೇರಿಯ ಹೆಸರು	ವಾರ್ಷಿಕ ಗುರಿ 2017-18	2017-18ನೇ ಸಾಲಿನಲ್ಲಿ ಸಂಗ್ರಹವಾದ ರಾಜಸ್ವ
1	ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ	19300	22523
2	ರಾಜ್ಯ ಸಾರಿಗೆ ಸಂಸ್ಥೆಗಳು	44438	20211
3	ಉ.ಸಾ.ಆ/ಹಿ.ಪ್ರಾ.ಸಾ.ಅ, ಕೋರಮಂಗಲ, ಬೆಂಗಳೂರು (ಕೇಂದ್ರ).	45150.00	51639.95
4	ಉ.ಸಾ.ಆ/ಹಿ.ಪ್ರಾ.ಸಾ.ಅ, ರಾಜಾಜಿನಗರ, ಬೆಂಗಳೂರು (ಪಶ್ಚಿಮ).	24700.00	25213.93
5	ಉ.ಸಾ.ಆ/ಹಿ.ಪ್ರಾ.ಸಾ.ಅ, ಇಂದಿರಾನಗರ, ಬೆಂಗಳೂರು (ಪೂರ್ವ).	49000.00	50588.82
6	ಉ.ಸಾ.ಆ/ಹಿ.ಪ್ರಾ.ಸಾ.ಅ, ಯಶವಂತಪುರ ಬೆಂಗಳೂರು (ಉತ್ತರ).	32400.00	34136.52
7	ಉ.ಸಾ.ಆ/ಹಿ.ಪ್ರಾ.ಸಾ.ಅ, ಜಯನಗರ, ಬೆಂಗಳೂರು (ದಕ್ಷಿಣ).	43200.00	44688.89
8	ಉ.ಸಾ.ಆ/ಹಿ.ಪ್ರಾ.ಸಾ.ಅ, ಕೃಷ್ಣರಾಜಪುರಂ.	20400.00	21589.59
9	ಉ.ಸಾ.ಆ/ಹಿ.ಪ್ರಾ.ಸಾ.ಅ, ಎಲೆಕ್ಟ್ರಾನಿಕ್ ಸಿಟಿ.	41650.00	40751.71
10	ಪ್ರಾ.ಸಾ.ಅ, ಚಂದಾಪುರ.	0.00	0.00
11	ಪ್ರಾ.ಸಾ.ಅ, ಜ್ಞಾನಭಾರತಿ.	11500.00	13993.67
12	ಪ್ರಾ.ಸಾ.ಅ, ಯಲಹಂಕ.	7520.00	9550.50
13	ಸ.ಪ್ರಾ.ಸಾ.ಅ, ದೇವನಹಳ್ಳಿ.	2920.00	2963.20
14	ಪ್ರಾ.ಸಾ.ಅ, ಆಟೋರಿಕ್ಷಾ ಪರವಾನಿಗೆ.	372.00	468.18
15	ಉ.ಸಾ.ಆ/ಹಿ.ಪ್ರಾ.ಸಾ.ಅ, ತುಮಕೂರು.	8600.00	10007.28
16	ಸ.ಪ್ರಾ.ಸಾ.ಅ, ಮಧುಗಿರಿ.	2850.00	2374.24
17	ಪ್ರಾ.ಸಾ.ಅ, ಕೋಲಾರ.	3500.00	3629.26
18	ಪ್ರಾ.ಸಾ.ಅ, ಚಿಕ್ಕಬಳ್ಳಾಪುರ.	4158.50	4495.31
19	ಸ.ಪ್ರಾ.ಸಾ.ಅ. ಚಿಂತಾಮಣಿ	0.00	0.00
20	ಸ.ಪ್ರಾ.ಸಾ.ಅ, ಕೆ.ಜಿ.ಎಫ್.	2380.00	2518.84

21	ಸ.ಪ್ರಾ.ಸಾ.ಅ, ತಿಪಟೂರು.	2070.00	2333.44
22	ಪ್ರಾ.ಸಾ.ಅ, ನೆಲಮಂಗಲ.	4050.00	4404.59
23	ಪ್ರಾ.ಸಾ.ಅ, ರಾಮನಗರಂ.	6000.00	6014.85
24	ಸ.ಪ್ರಾ.ಸಾ.ಅ. ಬಾಗೇಪಲ್ಲಿ (ತ.ಠಾಣೆ)	255.00	310.51
25	ಸ.ಪ್ರಾ.ಸಾ.ಅ. ಗೌರಿಬಿದನೂರು (ತ.ಠಾಣೆ)	53.50	58.77
26	ಸ.ಪ್ರಾ.ಸಾ.ಅ, ರಾಯಲ್‌ಪಾಡ್ (ತ.ಠಾ).	57.00	62.42
27	ಸ.ಪ್ರಾ.ಸಾ.ಅ, ನಂಗಲಿ (ತ.ಠಾ).	420.00	450.88
28	ಸ.ಪ್ರಾ.ಸಾ.ಅ, ಅತ್ತಿಬೆಲೆ (ತ.ಠಾ).	1600.00	1964.74
29	ಉ.ಸಾ.ಆ/ಹಿ.ಪ್ರಾ.ಸಾ.ಅ, ಮೈಸೂರು (ಪಶ್ಚಿಮ).	15000.00	17199.59
30	ಪ್ರಾ.ಸಾ.ಅ, ಮೈಸೂರು (ಪೂರ್ವ).	3550.00	3724.14
31	ಪ್ರಾ.ಸಾ.ಅ, ಮಂಡ್ಯ.	5020.00	5935.45
32	ಪ್ರಾ.ಸಾ.ಅ, ಹಾಸನ.	6500.00	7357.36
33	ಪ್ರಾ.ಸಾ.ಅ, ಚಾಮರಾಜನಗರ.	2840.00	3400.45
34	ಪ್ರಾ.ಸಾ.ಅ, ಮಡಿಕೇರಿ.	5420.00	5797.15
35	ಸ.ಪ್ರಾ.ಸಾ.ಅ, ಹುಣಸೂರು.	2170.00	2399.68
36	ಸ.ಪ್ರಾ.ಸಾ.ಅ, ನಾಗಮಂಗಲ.	1290.00	1481.38
37	ಸ.ಪ್ರಾ.ಸಾ.ಅ, ಸಕಲೇಶಪುರ.	1520.00	1553.01
38	ಸ.ಪ್ರಾ.ಸಾ.ಅ, ಪುಣಜನೂರು.	375.00	534.53
39	ಸ.ಪ್ರಾ.ಸಾ.ಅ, ಗುಂಡ್ಲುಪೇಟೆ.	820.00	1033.81
40	ಉ.ಸಾ.ಆ/ಹಿ.ಪ್ರಾ.ಸಾ.ಅ, ಶಿವಮೊಗ್ಗ.	7950.00	8554.25
41	ಪ್ರಾ.ಸಾ.ಅ, ಚಿತ್ರದುರ್ಗ.	6330.00	6671.30
42	ಪ್ರಾ.ಸಾ.ಅ, ದಾವಣಗೆರೆ.	8810.00	9192.02
43	ಪ್ರಾ.ಸಾ.ಅ, ಚಿಕ್ಕಮಗಳೂರು.	5600.00	5543.67
44	ಸ.ಪ್ರಾ.ಸಾ.ಅ, ತರೀಕೆರೆ	2000.00	1905.42

45	ಉ.ಸಾ.ಆ/ಹಿ.ಪ್ರಾ.ಸಾ.ಅ, ಮಂಗಳೂರು.	21900.00	22174.69
46	ಸ.ಪ್ರಾಸಾ.ಅ. ಬಂಟ್ವಾಳ	0.00	13679.06
47	ಉ.ಸಾ.ಆ/ಹಿ.ಪ್ರಾ.ಸಾ.ಅ, ಉಡುಪಿ.	13650.00	0.00
48	ಪ್ರಾ.ಸಾ.ಅ, ಪುತ್ತೂರು.	4950.00	5283.76
49	ಸ.ಪ್ರಾ.ಸಾ.ಅ, ಸಾಗರ.	3400.00	3752.71
50	ಸ.ಪ್ರಾ.ಸಾ.ಅ, ತಲಪಾಡಿ (ತ.ಠಾ).	452.00	546.35
51	ಉ.ಸಾ.ಆ/ಹಿ.ಪ್ರಾ.ಸಾ.ಅ, ಬೆಳಗಾವಿ.	10180.00	10784.41
52	ಉ.ಸಾ.ಆ/ಹಿ.ಪ್ರಾ.ಸಾ.ಅ, ಧಾರವಾಡ (ಪ)	6500.00	7262.09
53	ಪ್ರಾ.ಸಾ.ಅ, ಧಾರವಾಡ (ಪೂರ್ವ)	8600.00	8877.32
54	ಪ್ರಾ.ಸಾ.ಅ, ವಿಜಾಪುರ.	8070.00	8920.91
55	ಪ್ರಾ.ಸಾ.ಅ, ಕಾರವಾರ.	1860.00	2075.88
56	ಪ್ರಾ.ಸಾ.ಅ, ಚಿಕ್ಕೋಡಿ.	4200.00	4675.03
57	ಸ.ಪ್ರಾ.ಸಾ.ಅ. ರಾಮದುರ್ಗ,	0.00	0.00
58	ಪ್ರಾ.ಸಾ.ಅ, ಸಿರಸಿ.	2630.00	2829.71
59	ಪ್ರಾ.ಸಾ.ಅ, ಗದಗ.	2790.00	3066.54
60	ಪ್ರಾ.ಸಾ.ಅ, ಬಾಗಲಕೋಟೆ.	4120.00	4333.85
61	ಪ್ರಾ.ಸಾ.ಅ, ಹಾವೇರಿ.	4860.00	5010.72
62	ಸ.ಪ್ರಾ.ಸಾ.ಅ, ರಾಣಿಬೆನ್ನೂರು	0.00	0.00
63	ಸ.ಪ್ರಾ.ಸಾ.ಅ, ಬೈಲಹೊಂಗಲ.	2170.00	2077.82
64	ಸ.ಪ್ರಾ.ಸಾ.ಅ, ಜಮಖಂಡಿ.	2660.00	2753.70
65	ಸ.ಪ್ರಾ.ಸಾ.ಅ, ಗೋಕಾಕ.	2050.00	2124.18
66	ಸ.ಪ್ರಾ.ಸಾ.ಅ, ಹೊನ್ನಾವರ.	2580.00	2612.73
67	ಸ.ಪ್ರಾ.ಸಾ.ಅ, ಝುಲ್ಕಿ (ತ.ಠಾ).	1300.00	1409.24
68	ಸ.ಪ್ರಾ.ಸಾ.ಅ, ರಾಮನಗರ (ತ.ಠಾ). ಅಸ್‌ಮೋಡ್	155.00	189.12

69	ಸ.ಪ್ರಾ.ಸಾ.ಅ, ನಿಪ್ಪಾಣಿ (ತ.ಠಾ)ಕೊಗ್ಗನಳ್ಳಿ	1200.00	1303.52
70	ಸ.ಪ್ರಾ.ಸಾ.ಅ, ಕಾಗವಾಡ (ತ.ಠಾ).	114.00	124.51
71	ಸ.ಪ್ರಾ.ಸಾ.ಅ, ದಾಂಡೇಲಿ	860.00	834.80
72	ಉ.ಸಾ.ಆ/ಹಿ.ಪ್ರಾ.ಸಾ.ಅ, ಗುಲ್ಬರ್ಗಾ.	7350.00	8664.96
73	ಪ್ರಾ.ಸಾ.ಅ, ಬಳ್ಳಾರಿ.	5200.00	5164.53
74	ಪ್ರಾ.ಸಾ.ಅ, ರಾಯಚೂರು.	5380.00	6413.89
75	ಪ್ರಾ.ಸಾ.ಅ, ಕೊಪ್ಪಳ.	4040.00	4074.86
76	ಪ್ರಾ.ಸಾ.ಅ, ಹೊಸಪೇಟೆ.	5650.00	5927.25
77	ಪ್ರಾ.ಸಾ.ಅ, ಬೀದರ್.	2070.00	2497.29
78	ಪ್ರಾ.ಸಾ.ಅ, ಯಾದಗಿರಿ.	2380.00	3024.61
79	ಸ.ಪ್ರಾ.ಸಾ.ಅ, ಬಾಲ್ಕಿ.	1150.00	1349.65
80	ಸ.ಪ್ರಾ.ಸಾ.ಅ, ಬಸವಕಲ್ಯಾಣ.	1600.00	1726.34
81	ಸ.ಪ್ರಾ.ಸಾ.ಅ, ಅಳಂದ (ತ.ಠಾ).	90.00	104.77
82	ಸ.ಪ್ರಾ.ಸಾ.ಅ, ಹುಮ್ನಾಬಾದ್ (ತ.ಠಾ).	500.00	544.10
83	ಸ.ಪ್ರಾ.ಸಾ.ಅ, ಹಗರಿ (ತ.ಠಾ).	200.00	191.99
	ಒಟ್ಟು ಸಂಗ್ರಹಣೆಯಾದ ರಾಜಸ್ವ ಮೊತ್ತ ರೂ.	600600	615614.19

ಕರ್ನಾಟಕ ಸರ್ಕಾರ

ಸಂ: ಆಕುಕ 09 ಹೆಚ್ ಎಸ್ ಡಿ 2019

ಕರ್ನಾಟಕ ಸರ್ಕಾರದ ಸಚಿವಾಲಯ.
ವಿಕಾಸ ಸೌಧ.
ಬೆಂಗಳೂರು.ದಿನಾಂಕ:13-2-2019.

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
ವಿಕಾಸಸೌಧ.

401 101
US
14/2/19

ಇವರಿಗೆ.
ಕಾರ್ಯದರ್ಶಿ.
ಕರ್ನಾಟಕ ವಿಧಾನ ಸಭೆ.
ಬೆಂಗಳೂರು.

ಮಾನ್ಯರೇ.

ವಿಷಯ:-ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ.ಕುಮಾರ ಬಂಗಾರಪ್ಪ ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:394 ಕ್ಕೆ ಉತ್ತರಗಳನ್ನು ಒದಗಿಸುವ ಕುರಿತು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ.ಕುಮಾರ ಬಂಗಾರಪ್ಪ ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:394 ಕ್ಕೆ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ.

(ಯ.ಶಿವಶಂಕರ್) 13/2
ಸರ್ಕಾರದ ಅದೀನ ಕಾರ್ಯದರ್ಶಿ.
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಸೇವೆಗಳು)

ಪ್ರತಿಗಳು:-

1) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿರವರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿರವರ ಆಪ್ತ ಶಾಖೆ. ಆರೋಗ್ಯ ಮತ್ತು ಕುಟುಂಭ ಕಲ್ಯಾಣ ಇಲಾಖೆ. ವಿಕಾಸಸೌಧ.
3) ಸ್ವೀಮರ ಮತ್ತು ಸಮನ್ವಯ ಶಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ	394
ಮಾನ್ಯ ಸದಸ್ಯರ ಹೆಸರು	ಶ್ರೀ ಕುಮಾರ ಬಂಗಾರಪ್ಪ ಎಸ್ (ಸೊರಬ)
ಉತ್ತರಿಸಬೇಕಾದ ದಿನಾಂಕ	14-02-2019
ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಸೊರಬ ವಿಧಾನಸಭಾ ಕ್ಷೇತ್ರವಲ್ಲಿ ಕೊರತೆಯಿರುವ ವೈದ್ಯರ ಸಂಖ್ಯೆ ಎಷ್ಟು;	ಸೊರಬ ವಿಧಾನ ಸಭಾ ಕ್ಷೇತ್ರದಲ್ಲಿನ ಹುದ್ದೆಗಳ ವಿವರಗಳು ಈ ಕೆಳಗಿನಂತಿದೆ:- (see table below)
ಆ)	ಕೊರತೆಯಿರುವ ವೈದ್ಯರನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;	ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ವೈದ್ಯರ ಕೊರತೆಯಿಂದ ಮಂಗನ ಖಾಯಿಲೆ ಹಾಗೂ ...... ಇನ್ನಿತರ ಖಾಯಿಲೆಗಳಿಂದ ಕ್ಷೇತ್ರವಲ್ಲಿ ಉದ್ಭವಿಸಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ ಖಾಯಿಲೆಯನ್ನು ನಿಯಂತ್ರಿಸಲು ಸರ್ಕಾರ ಎಲ್ಲಾ ಸೂಕ್ತ ಕ್ರಮಗಳನ್ನು ವಹಿಸಿದೆ.

ಹುದ್ದೆಗಳು

ಕ್ರಸಂ	ಸಂಸ್ಥೆಯ ಹೆಸರು	ಸಂಸ್ಥೆ	ಮಂಜೂರು	ಕಾರ್ಯನಿರತ	ಖಾಲಿ
1	ಸಾರ್ವಜನಿಕ ಆಸ್ಪತ್ರೆ, ಸೊರಬ	1	11	3	8
2	ಸಮುದಾಯ ಆರೋಗ್ಯ ಕೇಂದ್ರ, ಆನವಟ್ಟಿ	1	5	1	4
3	ಪ್ರಾಥಮಿಕ ಆರೋಗ್ಯ ಕೇಂದ್ರ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು	18	18	6	12
4	ಒಟ್ಟು	20	34	10	24

ಆಕುಕ 09 ಹೆಚ್.ಎಸ್.ಡಿ 2019

(ಶಿವಾನಂದ ಎಸ್ ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನೇಮಕ ಮಾಡಲು ಹಾಗೂ ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆಪಿಎಸ್‌ಸಿ ಮೂಲಕ ಆಯ್ಕೆಗೊಂಡು 255 ತಜ್ಞ ವೈದ್ಯರು ಸ್ಥಳ ಆಯ್ಕೆಮಾಡಿಕೊಂಡಿದ್ದು 159 ತಜ್ಞ ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

- 255 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು, ಸ್ಥಳ ಆಯ್ಕೆಮಾಡಿಕೊಂಡಿದ್ದು 233 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರಿ ಆದೇಶ ಸಂಖ್ಯೆ: ಆಕುಕ 297 ಹೆಚ್‌ಎಸ್‌ಹೆಚ್ 2015, ದಿನಾಂಕ: 22-04-2016 ಮತ್ತು ಸೇರ್ಪಡೆ ದಿ:07.10.2016 ಹಾಗೂ ಆಕುಕ 359 ಹೆಚ್‌ಎಸ್‌ಹೆಚ್ 2016, ದಿನಾಂಕ:01-08-2016ರ ಆದೇಶಗಳಲ್ಲಿ ಅನುಮತಿ ನೀಡಲಾಗಿದೆ.

- ತಜ್ಞ ವೈದ್ಯರನ್ನು "On Call Basis" ಮೇಲೆ ತೆಗೆದುಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ.ಆಕುಕ 178 ಹೆಚ್‌ಎಸ್‌ಹೆಚ್ 2011 ದಿನಾಂಕ: 20-05-2016ರಲ್ಲಿ ಅನುಮತಿ ನೀಡಲಾಗಿದೆ.

- ಸರ್ಕಾರದ ಆದೇಶ ಸಂಖ್ಯೆ: ಆಕುಕ 554 ಹೆಚ್‌ಎಸ್‌ಹೆಚ್ 2016, ದಿನಾಂಕ: 22-11-2016 ರಲ್ಲಿ ಸೂಚಿತವಾದಂತೆ ತಜ್ಞ ವೈದ್ಯರುಗಳ ಎದುರು ಹುದ್ದೆಯಲ್ಲಿ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಯುಕ್ತರು, ಆರೋಗ್ಯ ಮತ್ತು ಕು.ಕ ಸೇವೆಗಳು, ಬೆಂಗಳೂರು ಸುತ್ತೋಲೆ ಸಂಖ್ಯೆ: ಜೆಆರ್‌ಓ(1ಎ)/101/2012-13, ದಿನಾಂಕ: 09-12-2016 ರಂತೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

- ವೈದ್ಯರ ಪದವಿಯನ್ನು ಸರ್ಕಾರಿ ಕೋಟಾದಲ್ಲಿ ಪೂರ್ಣಗೊಳಿಸಿದ ವೈದ್ಯರುಗಳನ್ನು 1 ವರ್ಷ ಕಡ್ಡಾಯ ಗ್ರಾಮೀಣ ಸೇವೆಯಡಿಯಲ್ಲಿ ವೈದ್ಯರುಗಳನ್ನು ನೇಮಿಸಿಕೊಳ್ಳಲಾಗುತ್ತಿದೆ.

- ವೈದ್ಯರ ನೇಮಕಾತಿ ಸಮಾಲೋಚನೆ ನಂತರ ಹೆಚ್ಚಿನ ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಖಾಲಿ ಇರುವ ತಜ್ಞರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ನೇರ ನೇಮಕಾತಿ ಹುದ್ದೆಗಳನ್ನು ತುರ್ತಾಗಿ ವಿಶೇಷ ನಿಯಮಗಳ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

- ವೈದ್ಯರ ನೇಮಕಾತಿ ಸಮಾಲೋಚನೆ ನಂತರ ಹೆಚ್ಚಿನ ತಜ್ಞ / ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಇರುವುದರಿಂದ ಕೆ.ಪಿ.ಎಸ್.ಸಿ ಯಿಂದ ತಜ್ಞ ವೈದ್ಯರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹೆಚ್ಚುವರಿ ಪಟ್ಟಿಯನ್ನು ಕಳುಹಿಸಿಕೊಡುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕೋರಿಕೆ ಸಲ್ಲಿಸಿದ್ದು, ಪ್ರಸ್ತುತ ಕೆ.ಪಿ.ಎಸ್.ಸಿ ಯು 8 ತಜ್ಞತೆಗಳಿಗೆ ಹೆಚ್ಚುವರಿ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಈ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಕರ್ನಾಟಕ ಸರ್ಕಾರ

ಸಂ: ಸಾರಿಇ 26 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ನಂಜೇಗೌಡ ಕೆ.ವೈ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:794ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ನಂಜೇಗೌಡ ಕೆ.ವೈ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:794ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	794
ಸದಸ್ಯರ ಹೆಸರು :	ಶ್ರೀ ನಂಜೇಗೌಡ ಕೆ.ವೈ
ಉತ್ತರಿಸಬೇಕಾದ ಸಚಿವರು :	ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ :	14-02-2019

ಕ್ರಸಂ	ಪ್ರಶ್ನೆ	ಉತ್ತರ
ಅ	ಮಾಲೂರು ವಿಧಾನಸಭಾ ಕ್ಷೇತ್ರದ ಗಡಿ ಭಾಗದ ಗ್ರಾಮಗಳಿಗೆ ಸಾರಿಗೆ ಬಸ್ಸುಗಳ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಾಲೂರು ತಾಲ್ಲೂಕು ಗಡಿಭಾಗದಲ್ಲಿ ಒಟ್ಟು 16 ಗ್ರಾಮಗಳಿದ್ದು, ಇವುಗಳ ಪೈಕಿ 15 ಗ್ರಾಮಗಳಿಗೆ ಈಗಾಗಲೇ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಉಳಿದ ಒಂದು ಗ್ರಾಮವಾದ ಕಲ್ಲಿಪುರ ಗ್ರಾಮದಲ್ಲಿ ವಿರಳ ಜನಸಂದಣಿಯಿರುವುದರಿಂದ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.
ಆ	ಬಂದಿದ್ದಲ್ಲಿ, ಸಮಸ್ಯೆಯನ್ನು ಪರಿಹರಿಸಲು ಈವರೆವಿಗೂ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)	ಸಾರ್ವಜನಿಕ ಪ್ರಯಾಣಿಕರ ಮತ್ತು ಜನಪ್ರತಿನಿಧಿಗಳ ಕೋರಿಕೆಗಳನ್ನು ಪರಿಗಣಿಸಿ ಮಾಲೂರು-ಬಂಗಾರಪೇಟೆ, ಮಾಲೂರು-ಮಾಕಾರಹಳ್ಳಿ, ಕೋಲಾರ-ಟೇಕಲ್-ಶೆಟ್ಟಿಹಳ್ಳಿ-ಹುಳದೇನಹಳ್ಳಿ-ರಾಜೇನಹಳ್ಳಿ, ಮಾಲೂರು-ಅರಸನಹಳ್ಳಿ-ಚಿಕ್ಕತಿರುಪತಿ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಸದರಿ ಸಾರಿಗೆಗಳ ಅನುಕೂಲವನ್ನು ಈ ಭಾಗದ ಸಾರ್ವಜನಿಕ ಪ್ರಯಾಣಿಕರು ಮತ್ತು ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿರುತ್ತಾರೆ.
ಇ	ಸದರಿ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಬಸ್ಸುಗಳು ಹಾಗೂ ಸಿಬ್ಬಂದಿಗಳ ಕೊರತೆಯಿದೆ; ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?	ಸದರಿ ಕ್ಷೇತ್ರದ ವ್ಯಾಪ್ತಿಯ ಮಾಲೂರು ಘಟಕದಲ್ಲಿ 93 ಅನುಸೂಚಿಗಳನ್ನು 97 ವಾಹನಗಳ ಬಲದಿಂದ ಕಾರ್ಯಾಚರಣೆ ಮಾಡುತ್ತಿದ್ದು, 4 ಹೆಚ್ಚುವರಿ ವಾಹನಗಳಿರುತ್ತವೆ. ಮಾಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕರಾರಸಾನಿಗಮದ ಮಾಲೂರು ಘಟಕವಿದ್ದು, ಸದರಿ ಘಟಕದಲ್ಲಿ ಈ ಕೆಳಕಂಡಂತೆ ಸಿಬ್ಬಂದಿಗಳ ಕೊರತೆಯಿರುತ್ತದೆ.

ಕ್ರಸಂ.	ವೃಂದ	ಕೊರತೆ
1	ಆಡಳಿತ ಸಿಬ್ಬಂದಿಗಳು	04
2	ತಾಂತ್ರಿಕ ಸಿಬ್ಬಂದಿಗಳು	19
3	ಸಂಚಾರ ಸಿಬ್ಬಂದಿಗಳು	11

ಮುಂಬಡ್ತಿಗೆ ಮೀಸಲಿರುವ ಹುದ್ದೆಗಳನ್ನು ಆಯಾಕಾಲಕ್ಕೆ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದ್ದು, ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಮುಂಬಡ್ತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ.

ಮುಂದುವರೆದು, ನೇರ ನೇಮಕಾತಿಗೆ ಮೀಸಲಿರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

ಸಾರಿಇ 26 ಸಾಸಂಪ್ರ 2019

(ಡಿ.ಸಿ. ತಮ್ಮಣ್ಣ)
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಸಾರಿಇ 36 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1122ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1122ಕ್ಕೆ ದಿನಾಂಕ:14.02.2019ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1122
ಸದಸ್ಯರ ಹೆಸರು : ಶ್ರೀ ಅಶೋಕ್ ನಾಯಕ್ ಕೆ.ಬಿ
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 14-02-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಜೆ.ನರ್ಮ್‌ಯೋಜನೆಯಡಿ ಶಿವಮೊಗ್ಗ ವಿಭಾಗಕ್ಕೆ ಎಷ್ಟು ಸಾರಿಗೆ ಬಸ್‌ಗಳನ್ನು ಮಂಜೂರು ಮಾಡಲಾಗಿದೆ; ಘಟಕವಾರು ವಿವರ ನೀಡುವುದು)	ಜೆಎನ್ ನರ್ಮ್ ಯೋಜನೆಯಡಿ ಶಿವಮೊಗ್ಗ ವಿಭಾಗಕ್ಕೆ ಒಟ್ಟು 60 ವಾಹನಗಳನ್ನು ಮಂಜೂರು ಮಾಡಲಾಗಿದ್ದು, ಸದರಿ ವಾಹನಗಳಲ್ಲಿ ಶಿವಮೊಗ್ಗ ಘಟಕದಲ್ಲಿ 40 ವಾಹನಗಳು ಹಾಗೂ ಭದ್ರಾವತಿ ಘಟಕದಲ್ಲಿ 20 ವಾಹನಗಳು ಕಾರ್ಯಾಚರಣೆಯಲ್ಲಿರುತ್ತವೆ.
ಆ	ಸದರಿ ಬಸ್‌ಗಳು ಯಾವ ಮಾರ್ಗಗಳಲ್ಲಿ ಸಂಚರಿಸುತ್ತಿವೆ; (ಸಂಪೂರ್ಣ ಮಾರ್ಗವಾರು, ಬಸ್‌ವಾರು ವಿವರ ನೀಡುವುದು)	ಜೆಎನ್ ನರ್ಮ್ ಯೋಜನೆಯಡಿ 60 ವಾಹನಗಳಿಂದ 55 ಅನುಸೂಚಿಗಳನ್ನು ಕಾರ್ಯಾಚರಿಸಲಾಗುತ್ತಿದೆ. (ಮಾರ್ಗವಾರು ಹಾಗೂ ಬಸ್ಸುಗಳ ವಿವರವನ್ನು ಅನುಬಂಧ-'ಅ' ರಲ್ಲಿ ಒದಗಿಸಲಾಗಿದೆ).
ಇ	ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಗ್ರಾಮೀಣ ಭಾಗಕ್ಕೆ ಜೆ. ನರ್ಮ್ ಯೋಜನೆಯ ಎಷ್ಟು ಬಸ್‌ಗಳು ಸಂಚರಿಸುತ್ತಿವೆ; (ಸಂಪೂರ್ಣ ಮಾರ್ಗವಾರು, ಬಸ್‌ವಾರು ವಿವರ ನೀಡುವುದು)	ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಗ್ರಾಮೀಣ ಭಾಗಕ್ಕೆ ಜೆಎನ್ ನರ್ಮ್ ಯೋಜನೆಯ ಒಟ್ಟು 41 ಬಸ್‌ಗಳು ಸಂಚರಿಸುತ್ತಿವೆ. (ಮಾರ್ಗವಾರು ವಿವರವನ್ನು ಅನುಬಂಧ 'ಆ' ರಲ್ಲಿ ಒದಗಿಸಲಾಗಿದೆ).
ಈ	ಸಂಚರಿಸದೇ ಇದ್ದಲ್ಲಿ, ಕಾರಣಗಳೇನು; ಶಿವಮೊಗ್ಗ ಗ್ರಾಮಾಂತರ ಭಾಗದಲ್ಲಿ ಬಸ್‌ಗಳು ಸಂಚರಿಸಲು ಜರೂರಾಗಿ ಕ್ರಮ ಕೈಗೊಳ್ಳಲಾಗುವುದೇ?	ಶಿವಮೊಗ್ಗ ಗ್ರಾಮಾಂತರ ಪ್ರದೇಶದಲ್ಲಿ ಹಾದು ಹೋಗುವ ಶಿವಮೊಗ್ಗ-ಭದ್ರಾವತಿ-ಕಡೂರು ಹಾಗೂ ಶಿವಮೊಗ್ಗ-ಹೊನ್ನಾಳಿ-ಹರಿಹರ ಮಾರ್ಗಗಳನ್ನು ಹೊರತುಪಡಿಸಿದಲ್ಲಿ ಇನ್ನುಳಿದ ಇತರೇ ಮಾರ್ಗಗಳು ರಾಷ್ಟ್ರೀಕೃತವಾಗದ ವಲಯದಲ್ಲಿರುತ್ತವೆ. ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ವ್ಯಾಪ್ತಿಯಲ್ಲಿ 2011ರ ಜನಗಣತಿಯ ಪ್ರಕಾರ 193 ಗ್ರಾಮಗಳಿದ್ದು, ಇವುಗಳ ಪೈಕಿ 16 ಗ್ರಾಮಗಳು ರಾಷ್ಟ್ರೀಕೃತ ವಲಯದಲ್ಲಿದ್ದು ಈ ಎಲ್ಲಾ ಗ್ರಾಮಗಳಿಗೆ ನಿಗಮದ ವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಇನ್ನುಳಿದಂತೆ, 177 ಗ್ರಾಮಗಳು ರಾಷ್ಟ್ರೀಕೃತವಾಗದ ವಲಯದಲ್ಲಿದ್ದು, ಇವುಗಳ ಪೈಕಿ 98 ಗ್ರಾಮಗಳಿಗೆ ನಿಗಮದ ವತಿಯಂದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಜೆಎನ್ ನರ್ಮ್ ವಾಹನಗಳನ್ನು ಹೊರತುಪಡಿಸಿ ಇತರೆ ಗ್ರಾಮಾಂತರ ಸಾರಿಗೆಗಳ 23 (ಬಸ್ಸುಗಳು) ಅನುಸೂಚಿಗಳಿಂದ ಒಟ್ಟಾರೆ 133 ಸಿಂಗಲ್ ಟ್ರಿಪ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.

		ಒಟ್ಟಾರೆ ಶಿವಮೊಗ್ಗ ಗ್ರಾಮಾಂತರ ವ್ಯಾಪ್ತಿಯ ವಿವಿಧ ಮಾರ್ಗಗಳಲ್ಲಿ ನಿಗಮವು 64 (ಬಸ್ಸುಗಳು) ಅನುಸೂಚಿಗಳಿಂದ ಒಟ್ಟಾರೆ 545 ಸಿಂಗಲ್ ಟ್ರಿಪ್ಸ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ. ಶಿವಮೊಗ್ಗ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸ್ತುತ ಖಾಸಗಿ ಪ್ರವರ್ತಕರು ಹೆಚ್ಚಿನ ಪ್ರಮಾಣದಲ್ಲಿ ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿದ್ದಾರೆ. ಮೇಲೆ ತಿಳಿಸಿರುವ ಸಾರಿಗೆಗಳ ಅನುಕೂಲತೆಯನ್ನು ಶಿವಮೊಗ್ಗ ಗ್ರಾಮಾಂತರ ಭಾಗದ ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ಪಡೆಮುಕೊಳ್ಳುತ್ತಿದ್ದಾರೆ. ಪ್ರಸ್ತುತ ನಿಗಮದ ವತಿಯಿಂದ ಕಲ್ಪಿಸಿರುವ ಸಾರಿಗೆಯು ಈ ಭಾಗದ ಪ್ರಯಾಣಿಕರ ಒತ್ತಡಕ್ಕನುಗುಣವಾಗಿವೆ.

ಸಾರಿಇ 36 ಸಾಸಂಪ್ರ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

ಅನುಬಂಧ– 'ಅ'

ಕರಾರಸಾ ನಿಗಮದ ಶಿವಮೊಗ್ಗ ವಿಭಾಗದ ವತಿಯಿಂದಜೆಎನ್‌ನರ್ಮ್ ವಾಹನಗಳು ಕಾರ್ಯಚರಣೆಯಾಗುತ್ತಿರುವ ಮಾರ್ಗಗಳ ವಿವರ.

ಕ್ರ ಸಂ	ಅನುಸೂಚಿ ಸಂಖ್ಯೆ	ಘಟಕ	ಮಾರ್ಗ		ಒಟ್ಟು ಬಸ್ಸುಗಳು
			ಎಲ್ಲಿಂದ	ಎಲ್ಲಿಗೆ	
1	151/1	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
2	151/2	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
3	151/3	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
4	151/4	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
5	151/5–6	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	2
6	151/7	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
7	151/8	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
8	151/9	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
9	151/10ಜಿಎ	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ/ಜಿ.ಆರ್.ಪಿ	1
10	152/3	ಶಿವಮೊಗ್ಗ	ಕಾಶಿಪುರ	ಭದ್ರಾವತಿ	1
11	152/4	ಶಿವಮೊಗ್ಗ	ಕಾಶಿಪುರ	ಭದ್ರಾವತಿ	1
12	152/5	ಶಿವಮೊಗ್ಗ	ಕಾಶಿಪುರ	ಭದ್ರಾವತಿ	1
13	155/3	ಶಿವಮೊಗ್ಗ	ಬೊಮ್ಮನಕಟ್ಟೆ	ಭದ್ರಾವತಿ	1
14	156/2	ಶಿವಮೊಗ್ಗ	ವೃದ್ಧಾಶ್ರಮ	ಭದ್ರಾವತಿ	1
15	160/1	ಶಿವಮೊಗ್ಗ	ಶಿವಮೊಗ್ಗ	ಆನವೇರಿ	1
16	160/2	ಶಿವಮೊಗ್ಗ	ಶಿವಮೊಗ್ಗ	ಆನವೇರಿ	1
17	160/3	ಶಿವಮೊಗ್ಗ	ಶಿವಮೊಗ್ಗ	ಆನವೇರಿ	1
18	160/4	ಶಿವಮೊಗ್ಗ	ಶಿವಮೊಗ್ಗ	ಆನವೇರಿ	1
19	59ಎಜಿ	ಶಿವಮೊಗ್ಗ	ಶಿವಮೊಗ್ಗ	ನಗರ–ಜೀಸು	1
20	161/2	ಶಿವಮೊಗ್ಗ	ಶಿವಮೊಗ್ಗ	ಮುದ್ದಿನಕೊಪ್ಪ	1
21	ಸಿಟಿ–2	ಶಿವಮೊಗ್ಗ	ಶಿವಮೊಗ್ಗ	ಪುರದಾಳು	1
22	ಸಿಟಿ–1	ಶಿವಮೊಗ್ಗ	ಶಿವಮೊಗ್ಗ	ಸಿದ್ಲಿಪುರ	1
23	55	ಶಿವಮೊಗ್ಗ	ಶಿವಮೊಗ್ಗ	ಹಣಗೆರೆಕಟ್ಟೆ	1
24	60	ಶಿವಮೊಗ್ಗ	ಶಿವಮೊಗ್ಗ	ಕೋರನಕೋಟೆ / ಭದ್ರಾವತಿ	1
25	162/1	ಶಿವಮೊಗ್ಗ	ಶಿವಮೊಗ್ಗ	ಚೆನ್ನಗಿರಿ/ ಭದ್ರಾವತಿ	1
26	162/2	ಶಿವಮೊಗ್ಗ	ಶಿವಮೊಗ್ಗ	ಹಳೆಬೆಳಗಲು	1
27	157/1	ಶಿವಮೊಗ್ಗ	ಸೋಮಿನಕೊಪ್ಪ	ಇಂದಿರಾನಗರ	1
28	163/1	ಶಿವಮೊಗ್ಗ	ಒಡ್ಡಿನಕೊಪ್ಪ	ಅಬ್ಬಿಗೆರೆ	1
29	164/1	ಶಿವಮೊಗ್ಗ	ಚಾಲುಕ್ಯನಗರ	ಅಬ್ಬಿಗೆರೆ	1
30	159/1	ಶಿವಮೊಗ್ಗ	ಸಕ್ಕರೆಬೈಲು	ಅಬ್ಬಿಗೆರೆ	1
31	155/2	ಶಿವಮೊಗ್ಗ	ಬೊಮ್ಮನಕಟ್ಟೆ	ಮಹಿಳಾ ಪಾಲಿಟೆಕ್ನಿಕ್	1
32	161/1	ಶಿವಮೊಗ್ಗ	ಶಿವಮೊಗ್ಗ	ಮುದ್ದಿನಕೊಪ್ಪ	1
33	62/63	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	2
34	40	ಶಿವಮೊಗ್ಗ	ಶಿವಮೊಗ್ಗ	ತೀರ್ಥಹಳ್ಳಿ	1
35	101/1	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
36	101/2	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
37	101/3	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
38	101/4	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
39	101/5	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
40	101/6–7	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	2
41	102/1	ಭದ್ರಾವತಿ	ಭದ್ರಾವತಿ	ತರಿಕೆರೆ	1
42	102/2	ಭದ್ರಾವತಿ	ಭದ್ರಾವತಿ	ತರಿಕೆರೆ	1
43	102/3	ಭದ್ರಾವತಿ	ಭದ್ರಾವತಿ	ತರಿಕೆರೆ	1
44	15/27	ಭದ್ರಾವತಿ	ಭದ್ರಾವತಿ	ಕೈಮರ	2
45	103/1	ಭದ್ರಾವತಿ	ಭದ್ರಾವತಿ	ಉಜ್ಜನಿಪುರ/ಹೊಸಮನೆ	1
46	103/2	ಭದ್ರಾವತಿ	ಭದ್ರಾವತಿ	ಉಜ್ಜನಿಪುರ/ಹೊಸಮನೆ	1
47	103/3	ಭದ್ರಾವತಿ	ಭದ್ರಾವತಿ	ಉಜ್ಜನಿಪುರ/ಹೊಸಮನೆ	1
48	103/4	ಭದ್ರಾವತಿ	ಭದ್ರಾವತಿ	ಉಜ್ಜನಿಪುರ/ಹೊಸಮನೆ	1
49	103/5/6	ಭದ್ರಾವತಿ	ಭದ್ರಾವತಿ	ಉಜ್ಜನಿಪುರ/ಹೊಸಮನೆ	2
50	42	ಭದ್ರಾವತಿ	ಭದ್ರಾವತಿ	ರಬ್ಬರ್‌ಕಾಡ್	1
	ಒಟ್ಟು.				55

ಅನುಬಂಧ- 'ಅ'

ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಗ್ರಾಮೀಣ ಭಾಗಕ್ಕೆ ಜೆಎನ್ ನರ್ಮ್ ಯೋಜನೆಯ ಬಸ್ಸುಗಳು ಕಾರ್ಯಾಚರಣೆಯಾಗುತ್ತಿರುವ ಮಾರ್ಗಗಳ ವಿವರ

ಕ್ರ ಸಂ	ಅನುಸೂಚಿ ಸಂಖ್ಯೆ	ಘಟಕ	ಮಾರ್ಗ		ಒಟ್ಟು ಬಸ್ಸುಗಳು
			ಎಲ್ಲಿಂದ	ಎಲ್ಲಿಗೆ	
1	151/1	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
2	151/2	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
3	151/3	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
4	151/4	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
5	151/5-6	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	2
6	151/7	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
7	151/8	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
8	151/9	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	1
9	151/10ಜಿ.ಎ	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ / ಜಿ.ಆರ್.ಪಿ	1
10	152/3	ಶಿವಮೊಗ್ಗ	ಕಾಶಿಪುರ	ಭದ್ರಾವತಿ	1
11	152/4	ಶಿವಮೊಗ್ಗ	ಕಾಶಿಪುರ	ಭದ್ರಾವತಿ	1
12	152/5	ಶಿವಮೊಗ್ಗ	ಕಾಶಿಪುರ	ಭದ್ರಾವತಿ	1
13	155/3	ಶಿವಮೊಗ್ಗ	ಬೊಮ್ಮನಕಟ್ಟೆ	ಭದ್ರಾವತಿ	1
14	156/2	ಶಿವಮೊಗ್ಗ	ವೃದ್ಧಾಶ್ರಮ	ಭದ್ರಾವತಿ	1
15	160/1	ಶಿವಮೊಗ್ಗ	ಶಿವಮೊಗ್ಗ	ಆನವೇರಿ	1
16	160/2	ಶಿವಮೊಗ್ಗ	ಶಿವಮೊಗ್ಗ	ಆನವೇರಿ	1
17	160/3	ಶಿವಮೊಗ್ಗ	ಶಿವಮೊಗ್ಗ	ಆನವೇರಿ	1
18	160/4	ಶಿವಮೊಗ್ಗ	ಶಿವಮೊಗ್ಗ	ಆನವೇರಿ	1
19	161/2	ಶಿವಮೊಗ್ಗ	ಶಿವಮೊಗ್ಗ	ಮುದ್ದಿನಕೊಪ್ಪ	1
20	ಸಿಟಿ-2	ಶಿವಮೊಗ್ಗ	ಶಿವಮೊಗ್ಗ	ಪುರದಾಳು	1
21	ಸಿಟಿ-1	ಶಿವಮೊಗ್ಗ	ಶಿವಮೊಗ್ಗ	ಸಿದ್ಲಿಪುರ	1
22	55	ಶಿವಮೊಗ್ಗ	ಶಿವಮೊಗ್ಗ	ಹಣಗೆರೆಕಟ್ಟೆ	1
23	60	ಶಿವಮೊಗ್ಗ	ಶಿವಮೊಗ್ಗ	ಕೋರನಕೋಟೆ / ಭದ್ರಾವತಿ	1
25	162/1	ಶಿವಮೊಗ್ಗ	ಶಿವಮೊಗ್ಗ	ಚೆನ್ನಗಿರಿ / ಭದ್ರಾವತಿ	1
26	162/2	ಶಿವಮೊಗ್ಗ	ಶಿವಮೊಗ್ಗ	ಹಳೆಜಳಗಲು / ಭದ್ರಾವತಿ	1
27	163/1	ಶಿವಮೊಗ್ಗ	ಒಡ್ಡಿನಕೊಪ್ಪ	ಅಬ್ಬಿಗೆರೆ	1
28	164/1	ಶಿವಮೊಗ್ಗ	ಚಾಲುಕ್ಯನಗರ	ಅಬ್ಬಿಗೆರೆ	1
29	159/1	ಶಿವಮೊಗ್ಗ	ಸಕ್ಕರೆಬೈಲು	ಅಬ್ಬಿಗೆರೆ	1
30	161/1	ಶಿವಮೊಗ್ಗ	ಶಿವಮೊಗ್ಗ	ಮುದ್ದಿನಕೊಪ್ಪ	1
31	62/63	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ / ಶೆಟ್ಟಿಕೆರೆ	2
32	101/1	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
33	101/2	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
34	101/3	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
35	101/4	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
36	101/5	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	1
37	101/6-7	ಭದ್ರಾವತಿ	ಭದ್ರಾವತಿ	ಶಿವಮೊಗ್ಗ	2
38	15/27	ಭದ್ರಾವತಿ	ಭದ್ರಾವತಿ	ಕೈಮರ	2
	ಒಟ್ಟು				41

ಕರ್ನಾಟಕ ಸರ್ಕಾರ

ಸಂ: ಸಾರಿಇ 33 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಂಜೀವ ಮಠಂದೂರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:981ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಂಜೀವ ಮಠಂದೂರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:981ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

182 LA/S 14/2/19

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 981
ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 14-02-2019

ಕ್ರಸಂ	ಪ್ರಶ್ನೆ	ಉತ್ತರ
ಅ	ಪುತ್ತೂರು ತಾಲ್ಲೂಕಿನ ಎರಡನೇ ಅತೀ ದೊಡ್ಡ ಪಟ್ಟಣವಾದ ಉಪ್ಪಿನಂಗಡಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಷ್ಟು ಬಸ್ಸುಗಳು ಸಂಚರಿಸುತ್ತವೆ; (ವಿವರ ನೀಡುವುದು)	ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಬಸ್ಸು ನಿಲ್ದಾಣದಿಂದ ವಿವಿಧ ವಿಭಾಗಗಳಿಗೆ ಸೇರಿರುವ ಒಟ್ಟು 355 ಸಾರಿಗೆಗಳು ಸಂಚರಿಸುತ್ತಿವೆ. ಇವುಗಳ ವಿವರ ಈ ಕೆಳಕಂಡಂತಿದೆ.
ಆ	ಇಲ್ಲಿಗೆ ಬರುವ ಪ್ರಯಾಣಿಕರು ಮತ್ತು ಸಂಸ್ಥೆಯ ಬಸ್ಸುಗಳಿಗೆ ನಿಗಮದ ತಂಗುದಾಣವಿದೆಯೇ;	ಉಪ್ಪಿನಂಗಡಿಯಲ್ಲಿ ನಿಗಮದ ಬಸ್ಸು ನಿಲ್ದಾಣ ಅಥವಾ ತಂಗುದಾಣ ಇರುವುದಿಲ್ಲ. ಉಪ್ಪಿನಂಗಡಿಯಲ್ಲಿರುವ ಬಸ್ಸು ನಿಲ್ದಾಣ ಗ್ರಾಮ ಪಂಚಾಯಿತಿಯ ಆಡಳಿತ ವ್ಯಾಪ್ತಿಗೆ ಸೇರಿದ್ದು, ನಿಗಮದ ಸಾರಿಗೆಗಳನ್ನು ಪ್ರಸ್ತುತ ಈ ಬಸ್ಸು ನಿಲ್ದಾಣದಿಂದ ಕಾರ್ಯಾಚರಿಸಲಾಗುತ್ತಿದೆ.
ಇ	ಅಲ್ಲಿ ಸಾರ್ವಜನಿಕರಿಗೆ ಮತ್ತು ಬಸ್ಸು ತಂಗಲು ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಈ	ಹಾಗಿದ್ದಲ್ಲಿ, ಪ್ರಯಾಣಿಕರಿಗೆ ಮತ್ತು ಬಸ್ಸು ತಂಗಲು ನಿಗಮದ ವತಿಯಿಂದ ಹೊಸ ಬಸ್ಸು ತಂಗುದಾಣ ನಿರ್ಮಾಣಕ್ಕೆ ಸರ್ಕಾರ ಕ್ರಮಕ್ಕೈಗೊಳ್ಳುವುದೇ?	ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ ಪಡೆಯಲು ಪ್ರಯತ್ನಿಸಲಾಗುತ್ತಿದೆ. ನಿವೇಶನ ಲಭ್ಯವಾದ ನಂತರ ಈ ಬಗ್ಗೆ ನಿಗಮದ ಆರ್ಥಿಕ ಲಭ್ಯತೆ ಹಾಗೂ ಸಂಚಾರ ಅವಶ್ಯಕತೆಗನುಗುಣವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ಮಾದರಿ	ಸಾರಿಗೆಗಳ ಸಂಖ್ಯೆ
ಸಾಮಾನ್ಯ	232
ವೇಗದೂತ	121
ನಾನ್ ಎಸಿ ಸ್ಲೀಪರ್	01
ರಾಜಹಂಸ	01
ಒಟ್ಟು	355

ಸಾರಿಇ 33 ಸಾಸಂಪ್ರ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಸಾರಿಇ 34 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಹದೇವ ಕೆ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1025ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಹದೇವ ಕೆ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1025ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Malas

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1025
ಸದಸ್ಯರ ಹೆಸರು : ಶ್ರೀ ಮಹಾದೇವ ಕೆ
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 14-02-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾಪಟ್ಟಣ ವಿಧಾನ ಸಭಾ ಕ್ಷೇತ್ರವು ಅರೆಮಲೆನಾಡು ಪ್ರದೇಶವಾಗಿದ್ದು, ಸರ್ಕಾರಿ ಸಾರಿಗೆ ಬಸ್‌ಗಳು ಕಡಿಮೆ ಸಂಖ್ಯೆಯಲ್ಲಿರುವ ಕಾರಣ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ 196 ಗ್ರಾಮಗಳಿದ್ದು, ಇವುಗಳ ಪೈಕಿ ನಿಗಮದ ವತಿಯಿಂದ 195 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಒಂದು ಗ್ರಾಮಕ್ಕೆ (ದೊಡ್ಡಹರವೇ ಅರಣ್ಯ) ಪ್ರಯಾಣಿಕರ ಬಸ್ಸಿನ ಕಾರ್ಯಾಚರಣೆಗೆ ಯೋಗ್ಯವಾದ ರಸ್ತೆ ಇಲ್ಲದ ಕಾರಣ ಇಲ್ಲಿಗೆ ಸಾರಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. ಪಿರಿಯಾಪಟ್ಟಣದಲ್ಲಿ ನಿಗಮದ ಘಟಕವಿದ್ದು, ಪ್ರಸ್ತುತ ಪ್ರತಿನಿತ್ಯ 54 ಅನುಸೂಚಿಗಳನ್ನು ಕಾರ್ಯಾಚರಿಸಲಾಗುತ್ತಿದೆ. ಹಾಲಿ ಕಲ್ಪಿಸಿರುವ ಸಾರಿಗೆಗಳು ಈ ಭಾಗದ ಪ್ರಯಾಣಿಕರ ಒತ್ತಡಕ್ಕನುಗುಣವಾಗಿದೆ.
ಆ)	ಬಂದಿದ್ದಲ್ಲಿ, ಸದರಿ ಕ್ಷೇತ್ರಕ್ಕೆ ಬೇಡಿಕೆ ಇರುವ ಬಸ್‌ಗಳ ಸಂಖ್ಯೆ ಮತ್ತು ಮಾರ್ಗಗಳು ಎಷ್ಟು;	ಪಿರಿಯಾಪಟ್ಟಣ ವಿಧಾನ ಸಭಾ ಕ್ಷೇತ್ರದಲ್ಲಿನ 13 ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲು ಬೇಡಿಕೆ ಇದ್ದು, ಇದಕ್ಕಾಗಿ 10 ಬಸ್ಸುಗಳ ಅವಶ್ಯಕತೆ ಇರುತ್ತದೆ.
ಇ)	ಈ ಕ್ಷೇತ್ರಕ್ಕೆ ಹೆಚ್ಚುವರಿಯಾಗಿ ಎಷ್ಟು ಬಸ್‌ಗಳನ್ನು ಒದಗಿಸಲಾಗಿದೆ? (ಮಾರ್ಗಗಳ ವಿವರಗಳೊಂದಿಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು)	ಪಿರಿಯಾಪಟ್ಟಣ ಘಟಕದಿಂದ ಹೆಚ್ಚುವರಿಯಾಗಿ 5 ಅನುಸೂಚಿಗಳನ್ನು ಪ್ರಾರಂಭಿಸಲಾಗಿದೆ. ಸದರಿ ಘಟಕದಲ್ಲಿ ಪ್ರಸ್ತುತ 59 ಬಸ್ಸುಗಳಿದ್ದು, ಇವುಗಳಿಂದ ಒಟ್ಟು 54 ಅನುಸೂಚಿಗಳನ್ನು ಕಾರ್ಯಾಚರಿಸಲಾಗುತ್ತಿದೆ. ಇವುಗಳು ಕ್ರಮಿಸುತ್ತಿರುವ ಮಾರ್ಗಗಳ ಹಾಗೂ ಬಸ್ಸುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಾರಿಇ 34 ಸಾಸಂಪ್ರ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

ಅನುಬಂಧ

ಪಿರಿಯಾಪಟ್ಟಣ ಘಟಕದಿಂದ ಕಾರ್ಯಾಚರಿಸುತ್ತಿರುವ ಮಾರ್ಗಗಳ ಮತ್ತು ಬಸ್‌ಗಳ ವಿವರ.

ಕ್ರ.ಸಂ	ಮಾರ್ಗಗಳ ವಿವರ	ಕಾರ್ಯಾಚರಿಸುತ್ತಿರುವ ಬಸ್‌ಗಳ ಸಂಖ್ಯೆ
1	ಪಿರಿಯಾಪಟ್ಟಣ-ಬೆಂಗಳೂರು	1
2	ಪಿರಿಯಾಪಟ್ಟಣ-ಮಲೆಮಹದೇಶ್ವರಬೆಟ್ಟ	2
3	ಪಿರಿಯಾಪಟ್ಟಣ-ಬೆಟ್ಟದಪುರ	1
4	ಪಿರಿಯಾಪಟ್ಟಣ-ಹೊನ್ನಾಪುರ	1
5	ಪಿರಿಯಾಪಟ್ಟಣ-ಗೋಣಿಕೊಪ್ಪ	1
6	ಪಿರಿಯಾಪಟ್ಟಣ-ಬೆಂಗಳೂರು	2
7	ಪಿರಿಯಾಪಟ್ಟಣ-ಬೆಟಟ್ಟದಪುರ	1
8	ಪಿರಿಯಾಪಟ್ಟಣ-ಹೆಬ್ಬಾಲೆ	1
9	ಪಿರಿಯಾಪಟ್ಟಣ-ಕೊಣನೂರು	1
10	ಪಿರಿಯಾಪಟ್ಟಣ-ಸುಲಗೋಡು	1
11	ಪಿರಿಯಾಪಟ್ಟಣ-ಬೆಟ್ಟದಪುರ	1
12	ಪಿರಿಯಾಪಟ್ಟಣ-ಗಂಗನಕುಪ್ಪೆ	1
13	ಪಿರಿಯಾಪಟ್ಟಣ-ಬೆಟ್ಟದಪುರ	2
14	ಪಿರಿಯಾಪಟ್ಟಣ-ಬೆಟ್ಟದಪುರ	1
15	ಪಿರಿಯಾಪಟ್ಟಣ-ತುಮಕೂರು	1
16	ಪಿರಿಯಾಪಟ್ಟಣ-ಕುಶಾಲನಗರ	1
17	ಪಿರಿಯಾಪಟ್ಟಣ-ಸಾಲಿಗ್ರಾಮ	1
18	ಪಿರಿಯಾಪಟ್ಟಣ-ಬೆಂಗಳೂರು	2
19	ಪಿರಿಯಾಪಟ್ಟಣ-ಕೊಟಗೇರಿ	1
20	ಪಿರಿಯಾಪಟ್ಟಣ-ಬೆಮ್ಮತ್ತಿ	1
21	ಪಿರಿಯಾಪಟ್ಟಣ-ಕಿತ್ತೂರು	1
22	ಪಿರಿಯಾಪಟ್ಟಣ-ರಾವಂದೂರು	1
23	ಪಿರಿಯಾಪಟ್ಟಣ-ಬೆಂಗಳೂರು-ಸೋಮವಾರಪೇಟೆ	2
24	ಪಿರಿಯಾಪಟ್ಟಣ-ಬೆಂಗಳೂರು	2
25	ಪಿರಿಯಾಪಟ್ಟಣ-ಚಿಕ್ಕಮಗಳೂರು	1
26	ಪಿರಿಯಾಪಟ್ಟಣ-ಗೋಣಿಕೊಪ್ಪ	1
27	ಪಿರಿಯಾಪಟ್ಟಣ-ಬೆಂಗಳೂರು	2
28	ಪಿರಿಯಾಪಟ್ಟಣ-ಮಡಿಕೇರಿ	2
29	ಪಿರಿಯಾಪಟ್ಟಣ-ವಿರಾಜಪೇಟೆ	2
30	ಪಿರಿಯಾಪಟ್ಟಣ-ಕೆ.ಆರ್.ನಗರ	2
31	ಪಿರಿಯಾಪಟ್ಟಣ-ಹೊನ್ನಾಪುರ	1
32	ಪಿರಿಯಾಪಟ್ಟಣ-ಸರಗೂರು	2
33	ಪಿರಿಯಾಪಟ್ಟಣ-ಗೋಣಿಕೊಪ್ಪ	1
34	ಪಿರಿಯಾಪಟ್ಟಣ-ಕುಶಾಲನಗರ	1
35	ಪಿರಿಯಾಪಟ್ಟಣ-ಕೆ.ಆರ್.ನಗರ	1
36	ಪಿರಿಯಾಪಟ್ಟಣ-ಕೆ.ಆರ್.ನಗರ	1
37	ಪಿರಿಯಾಪಟ್ಟಣ-ಹುಣಸೂರು	1
38	ಪಿರಿಯಾಪಟ್ಟಣ-ಕಿತ್ತೂರು	2
39	ಪಿರಿಯಾಪಟ್ಟಣ-ಕಿತ್ತೂರು	2
40	ಪಿರಿಯಾಪಟ್ಟಣ-ಉಡುಪಿ	2
	ಒಟ್ಟು	54

ಕರ್ನಾಟಕ ಸರ್ಕಾರ

ಸಂ: ಸಾರಿಇ 28 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಶ್ವಿನ್ ಕುಮಾರ್ ಎಂ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 899ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಶ್ವಿನ್ ಕುಮಾರ್ ಎಂ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 899ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
Mala S
(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 899
ಸದಸ್ಯರ ಹೆಸರು : ಶ್ರೀ ಅಶ್ವಿನ್ ಕುಮಾರ್ ಎಂ.
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 14-02-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೂಕು ವ್ಯಾಪ್ತಿಯಲ್ಲಿನ ಹಲವಾರು ಹಳ್ಳಿಗಳಿಗೆ ಸಾರಿಗೆ ಸಂಪರ್ಕವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕು ಸಂಪೂರ್ಣವಾಗಿ ರಾಷ್ಟ್ರೀಕೃತವಲ್ಲದ ವಲಯದಲ್ಲಿದೆ. 2011ರ ಜನಗಣತಿ ಪ್ರಕಾರ ಈ ತಾಲ್ಲೂಕಿನಲ್ಲಿ ಒಟ್ಟು 115 ಗ್ರಾಮಗಳಿದ್ದು ಇವುಗಳ ಪೈಕಿ 78 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಇದರೊಂದಿಗೆ ಖಾಸಗಿ ಪ್ರವರ್ತಕರೂ ಸಹ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಇದರ ಪ್ರಯೋಜನೆ ಪಡೆದುಕೊಳ್ಳುತ್ತಿದ್ದಾರೆ.
ಆ)	ಸಾರ್ವಜನಿಕರ ಕೋರಿಕೆ ಮೇರೆಗೆ ಜನವಸತಿಯಿರುವ ಯಾವ ಯಾವ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸಲು ಮನವಿಗಳು ಸ್ವೀಕೃತವಾಗಿವೆ: ಈ ಬಗ್ಗೆ ಸರ್ಕಾರದ ತೆಗೆದುಕೊಂಡ ಕ್ರಮಗಳೇನು:	ಸಾರ್ವಜನಿಕರ ಕೋರಿಕೆ ಮೇರೆಗೆ ಜನವಸತಿಯಿರುವ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸಲು ಸ್ವೀಕೃತವಾಗಿರುವ ಮನವಿಗಳು ಹಾಗೂ ಈ ಬಗ್ಗೆ ತೆಗೆದುಕೊಂಡ ಕ್ರಮಗಳ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಇ)	ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೂಕು ಮಂಡ್ಯ-ತುರುಗನೂರು-ಮೈಸೂರು ಮಾರ್ಗಗಳಲ್ಲಿ ಸಂಚರಿಸುತ್ತಿದ್ದ ಬಸ್ಸುಗಳನ್ನು ತಡೆಹಿಡಿಯಲು ಕಾರಣವೇನು: ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಆಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ:	ಮೈಸೂರು ನಗರ ಸಾರಿಗೆ ವಿಭಾಗದಿಂದ ಮೈಸೂರು-ಬನ್ನೂರು-ತುರುಗನೂರು-ಯಾಚೇನಹಳ್ಳಿ ನಡುವೆ ಕಾರ್ಯಾಚರಣೆ ಮಾಡಲಾಗುತ್ತಿದ್ದ 4 ಅನುಸೂಚಿಗಳನ್ನು ಸದರಿ ಸಾರಿಗೆಗಳಲ್ಲಿ ನಿರೀಕ್ಷಿತ ಸಂಖ್ಯೆಯ ಪ್ರಯಾಣಿಕರು ಪ್ರಯಾಣಿಸದಿರುವುದರಿಂದ ಈ ಸಾರಿಗೆಗಳನ್ನು ದಿನಾಂಕ:23.11.2018 ರಿಂದ ಕಡಿತಗೊಳಿಸಲಾಗಿರುತ್ತದೆ. ಪ್ರಸ್ತುತ ಮಂಡ್ಯ-ಬನ್ನೂರು ನಡುವೆ ಒಟ್ಟು 41 ಟ್ರಿಪ್‌ಗಳ ಸಾರಿಗೆ ಸೌಲಭ್ಯವಿದ್ದು, ಬನ್ನೂರಿನಿಂದ ಮೈಸೂರಿಗೆ ಪ್ರತಿ 15 ನಿಮಿಷಕ್ಕೆ ಸಾರಿಗೆ ಸೌಲಭ್ಯವಿರುತ್ತದೆ. ಸಾರ್ವಜನಿಕ ಪ್ರಯಾಣಿಕರು ಸದರಿ ಸಾರಿಗೆಗಳ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.
ಈ)	ಬಂದಿದ್ದಲ್ಲಿ, ಈ ಮಾರ್ಗಗಳಿಗೆ ಹೆಚ್ಚು ಬಸ್ಸುಗಳನ್ನು ಒದಗಿಸಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸರ್ಕಾರದ ಕ್ರಮವೇನು?	

ಸಾರಿಇ 28 ಸಾಸಂಪ್ರ 2019

(ಡಿ.ಸಿ. ತಮ್ಮಣ್ಣ)
ಸಾರಿಗೆ ಸಚಿವರು

ಅನುಬಂಧ

ನಿಗಮದ ವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಕೋರಿ ಸಾರ್ವಜನಿಕರು ಮನವಿ ಮಾಡಿರುವ ಮಾರ್ಗಗಳು ಹಾಗೂ ತೆಗೆದುಕೊಂಡಿರುವ ಕ್ರಮಗಳ ವಿವರ

ಕ್ರ.ಸಂ	ಬಸ್ ಸಂಚಾರ ವ್ಯವಸ್ಥೆ ಕೋರಿರುವ ಮಾರ್ಗ	ತೆಗೆದುಕೊಂಡಿರುವ ಕ್ರಮ
1	ನೇರಳಕೆರೆಯಿಂದ-ಬನ್ನೂರಿಗೆ (ಬೀಡನಹಳ್ಳಿ, ಹನುಮನಾಳು, ಎಂ.ಜಿ.ಹಳ್ಳಿ, ನೇರಳೇಕೆರೆ)	ಬನ್ನೂರಿನಿಂದ-ಗಾಡಿಜೋಗಿಹುಂಡಿ-ಸೀಹಳ್ಳಿ-ಹುಣಸನಹಳ್ಳಿ-ನೇರಳೇಕೆರೆ ಮಾರ್ಗವಾಗಿ ಮಳವಳ್ಳಿ ಘಟಕದ ಅನುಸೂಚಿ ಸಂಖ್ಯೆ-66 ರಲ್ಲಿ ಸಮಯ 8.00, 15.30 ರಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
2	ಮಂಡ್ಯಕೊಪ್ಪಲು-ಬನ್ನೂರು	ಪಾಂಡವಪುರ ಘಟಕದ ಅನುಸೂಚಿ ಸಂಖ್ಯೆ-27/28 ಬನ್ನೂರು-ಮಂಡ್ಯಕೊಪ್ಪಲು ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ಸಮಯ 6.30, 8.45, 10.15, 11.15, 12.30 13.30, 15.00, 16.30, 18.00 ರಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
3	ಯಾಚೇನಹಳ್ಳಿ-ಬನ್ನೂರು	ಮಂಡ್ಯ-ಟಿ.ನರಸೀಪುರ ಮಾರ್ಗದಲ್ಲಿ ಆಚರಣೆಯಾಗುವ ಸಾರಿಗೆಗಳು ವಯಾ ಯಾಚೇನಹಳ್ಳಿ-ಬನ್ನೂರು ಮಾರ್ಗವಾಗಿ ಆಚರಣೆ ಮಾಡಲಾಗುತ್ತಿದೆ.
4	ಟಿ.ನರಸೀಪುರ-ಬನ್ನೂರು	
5	ತುಂಬಲ-ಬನ್ನೂರು	ಮಂಡ್ಯ ಘಟಕದ ಅನುಸೂಚಿ ಸಂಖ್ಯೆ-30 ರಲ್ಲಿ ಸಮಯ 8.45, 14.30 ರಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
6	ನೇರಳೇಕೆರೆ-ಬನ್ನೂರು	ಮಳವಳ್ಳಿ ಘಟಕದ ಅನುಸೂಚಿ ಸಂಖ್ಯೆ-66 ರಲ್ಲಿ ಸಮಯ 8.00, 15.30 ರಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
7	ಕಿರುಗಾವಲು ಗ್ರಾಮದ ಒಳಭಾಗದಿಂದ ಬನ್ನೂರು	ಮಳವಳ್ಳಿ ಘಟಕದ ಅನುಸೂಚಿ ಸಂಖ್ಯೆ-33 ರಲ್ಲಿ ಬನ್ನೂರಿನಿಂದ ಕಿರುಗಾವಲು ಗ್ರಾಮಕ್ಕೆ ಸಮಯ 9.00, 18.45, 21.30 ರಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
8	ಮೆಳ್ಳಹಳ್ಳಿ-ಬನ್ನೂರು	ಮೈಸೂರು-ಮಳವಳ್ಳಿ ಮಾರ್ಗದಲ್ಲಿ ಆಚರಣೆಯಾಗುವ ಎಲ್ಲಾ ಸಾರಿಗೆಗಳು ಮೆಳ್ಳಹಳ್ಳಿಯಲ್ಲಿ ನಿಲುಗಡೆ ನೀಡಲಾಗಿದೆ.
9	ಬೆಳಕವಾಡಿ-ತಲಕಾಡು-ಟಿ.ನರಸೀಪುರ	ಮಳವಳ್ಳಿ ಘಟಕದ ಅನುಸೂಚಿ ಸಂಖ್ಯೆ-36ಎಜಿ ಬೆಳಕವಾಡಿಯಿಂದ 10.00, 16.45 ರ ಸಮಯದಲ್ಲಿ ತಲಕಾಡಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
10	ಮಳವಳ್ಳಿ-ಕುಂತನಹಳ್ಳಿ	ಮಳವಳ್ಳಿಯಿಂದ ಬನ್ನೂರಿಗೆ ಪ್ರತಿ 10 ನಿಮಿಷಗಳ ಅಂತರದಲ್ಲಿ ಸಾರಿಗೆ ಸೌಲಭ್ಯವಿದ್ದು, ಬನ್ನೂರಿನಿಂದ ಟಿ.ನರಸೀಪುರ ಮಾರ್ಗದಲ್ಲಿ ಆಚರಣೆಯಾಗುವ ಸಾರಿಗೆಗಳು ಕುಂತನಹಳ್ಳಿ ಮಾರ್ಗವಾಗಿ ಆಚರಣೆಯಾಗುತ್ತಿದ್ದು ಇದರ ಸದುಪಯೋಗ ಪಡೆದುಕೊಳ್ಳುತ್ತಿರುತ್ತಾರೆ.
11	ಬನ್ನೂರು-ಕುಂತನಹಳ್ಳಿ,	ಬನ್ನೂರು-ಟಿ.ನರಸೀಪುರ ಮಾರ್ಗದಲ್ಲಿ ಆಚರಣೆಯಾಗುವ ಸಾರಿಗೆಗಳು ವಯಾ ಕುಂತನಹಳ್ಳಿ ಮಾರ್ಗವಾಗಿ ಆಚರಣೆ ಮಾಡಲಾಗುತ್ತಿದೆ.
12	ಎಂ.ಸೀಹಳ್ಳಿ-ಕುರುಬೂರು ಮಾರ್ಗ(ಎಂ.ಸೀಹಳ್ಳಿ, ಕನ್ನಹಳ್ಳಿ, ಮಾಡ್ರಹಳ್ಳಿ, ಕುರುಬೂರು)	ಕೊಳ್ಳೇಗಾಲ ಘಟಕದ ವತಿಯಿಂದ ಕೊಳ್ಳೇಗಾಲ-ಎಂ.ಸೀಹಳ್ಳಿ-ಕನ್ನಹಳ್ಳಿ-ಮಾಡ್ರಹಳ್ಳಿ-ಕುರುಬೂರು-ತಿ.ನರಸೀಪುರಕ್ಕೆ ಕೊಳ್ಳೇಗಾಲದಿಂದ 7.10ಕ್ಕೆ ಮತ್ತು ತಿ.ನರಸೀಪುರದಿಂದ 17.00ಕ್ಕೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.
13	ಮಡವಾಯಿಂದ ತಲಕಾಡು ಮಾರ್ಗವಾಗಿ ತಿ. ನರಸೀಪುರ	ತಿ.ನರಸೀಪುರದಿಂದ ಹೆಮ್ಮಿಗೆ-ತಲಕಾಡು-ಕಾವೇರಿಪುರ-ಮೇದಿನಿ-ಬೆಳಕವಾಡಿ ಮಾರ್ಗದಲ್ಲಿ ತಿ.ನರಸೀಪುರದಿಂದ ಬೆಳಿಗ್ಗೆ 9.30, 11.20, 15.00, 17.30ಕ್ಕೆ ಹಾಗೂ ಬೆಳಕವಾಡಿಯಿಂದ ಅದೇ ಮಾರ್ಗ ತಿ.ನರಸೀಪುರಕ್ಕೆ ಸಮಯ 8.30, 10.25, 12.45, 16.20ಕ್ಕೆ ಕೊಳ್ಳೇಗಾಲ ಘಟಕದ ಸಾರಿಗೆಗಳಿಂದ ಸಾರಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ.
14	ಹಳೆತಲಕಾಡು- ತಿ.ನರಸೀಪುರ	
15	ತಿ.ನರಸೀಪುರ-ಹೆಮ್ಮಿಗೆ-ತಲಕಾಡು-ಕಾವೇರಿಪುರ-ಮೇದಿನಿಯಿಂದ ಬೆಳಕವಾಡಿ.	
16	ಬೆಳಕವಾಡಿ-ತಲಕಾಡು-ತಿ.ನರಸೀಪುರ	

17	ಕರೋಹಟ್ಟಿಯಿಂದ ವಾಟಾಳುಪುರ, ಆದಿಬೆಟ್ಟಹಳ್ಳಿ, ಮೂಗೂರು ಮಾರ್ಗವಾಗಿ ತಿ.ನರಸೀಪುರ	ಚಾಮರಾಜನಗರ ಘಟಕದ ವತಿಯಿಂದ ಮೂಗೂರಿನಿಂದ ಕೋರಿರುವ ಮಾರ್ಗದಲ್ಲಿ ತಿ.ನರಸೀಪುರಕ್ಕೆ 8.10ಕ್ಕೆ ಮತ್ತು ತಿ.ನರಸೀಪುರದಿಂದ ಅದೇ ಮಾರ್ಗದಲ್ಲಿ 17.15ಕ್ಕೆ ಸಾರಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.
18	ನರಸೀಪುರದಿಂದ ಮಾದಾಪುರ, ಕಲಿಯೂರು, ಮುಳ್ಳೂರು ಮಾರ್ಗ ಕೊಳ್ಳೇಗಾಲ	ಕೊಳ್ಳೇಗಾಲ ಘಟಕದ ವತಿಯಿಂದ ಕೊಳ್ಳೇಗಾಲ–ಮುಳ್ಳೂರು–ಕಲಿಯೂರು–ಮಾದಾಪುರ–ತಿ.ನರಸೀಪುರಕ್ಕೆ ಕೊಳ್ಳೇಗಾಲದಿಂದ 7.00, 8.30 ಮತ್ತು ತಿ.ನರಸೀಪುರದಿಂದ 7.40, 17.15ಕ್ಕೆ ಸಾರಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ.
19	ಬೆಳಕವಾಡಿ ಯಿಂದ ಕುರುಬಾಳುಹುಂಡಿ, ಮುಡುಕುತೊರೆ ಮಾರ್ಗ ತಲಕಾಡು	ಕೊಳ್ಳೇಗಾಲ ಘಟಕದ ವತಿಯಿಂದ ತಿ.ನರಸೀಪುರ–ತಲಕಾಡು–ಮುಡುಕುತೊರೆ–ಕುರುಬಾಳುಹುಂಡಿ–ಬೆಳಕವಾಡಿ ಮಾರ್ಗದಲ್ಲಿ ತಿ.ನರಸೀಪುರದಿಂದ 14.20ಕ್ಕೆ ಹಾಗೂ ಬೆಳಕವಾಡಿಯಿಂದ ಅದೇ ಮಾರ್ಗ ತಿ.ನರಸೀಪುರಕ್ಕೆ 16.00ಕ್ಕೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.
20	ತಿ.ನರಸೀಪುರದಿಂದ ಕೊಳ್ಳೇಗಾಲಕ್ಕೆ ಕುರುಬೂರು ಕೊತ್ತೆಗಾಲ ತೊಟ್ಟವಾಡಿ, ಕನ್ನಹಳ್ಳಿಮೋಳೆ, ಕನ್ನಹಳ್ಳಿ, ಹೊಸಮಾಲಂಗಿ, ಸೀಲಕಪುರ, ಕಜ್ಜಿಹುಂಡಿ, ಟಗರಪುರ, ಕುಂತೂರು	ಕೋರಿರುವ ಮಾರ್ಗದಲ್ಲಿ ಕೊಳ್ಳೆಗಾಲದಿಂದ ತಿ.ನರಸೀಪುರಕ್ಕೆ ಬೆಳಿಗ್ಗೆ 8.00ಗಂಟೆಗೆ ಮತ್ತು ತಿ.ನರಸೀಪುರದಿಂದ ಅದೇ ಮಾರ್ಗ ಕೊಳ್ಳೆಗಾಲಕ್ಕೆ ಸಂಜೆ 17.35ಕ್ಕೆ ಹಾಗೂ ತಿ.ನರಸೀಪುರದಿಂದ 9.30 ಕುರುಬೂರು ಕೊತ್ತೆಗಾಲ ತೊಟ್ಟವಾಡಿ, ಕನ್ನಹಳ್ಳಿಮೋಳೆ, ಕನ್ನಹಳ್ಳಿ, ಹೊಸಮಾಲಂಗಿ, ಸೀಲಕಪುರ, ಕಜ್ಜಿಹುಂಡಿ, ಟಗರಪುರಕ್ಕೆ ಮತ್ತು ಟಗರಪುರದಿಂದ ತಿ.ನರಸೀಪುರಕ್ಕೆ ಅದೇ ಮಾರ್ಗ 10.30ಕ್ಕೆ ಕೊಳ್ಳೇಗಾಲ ಘಟಕದ ಸಾರಿಗೆಗಳಿಂದ ಸಾರಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ.
21	ಟಿ.ನರಸೀಪುರ–ಬನ್ನೂರು	ಪ್ರಸ್ತುತ ಮಂಡ್ಯ–ಬನ್ನೂರು ನಡುವೆ ಸಮಯ 5.50, 6.15, 6.30, 6.50, 7.10, 7.30, 745, 8.30, 9.00, 9.15, 9.30, 9.50, 10.00, 10.10, 10.35, 10.45, 11.00, 11.20, 11.30, 11.45, 12.15, 12.45, 13.00, 13.15, 13.30, 13.45, 14.15, 14.30, 15.00, 15.15, 15.45, 16.30, 16.45, 17.00, 17.30, 18.00, 18.45, 19.00, 20.00, 20.45, 21.00 ರಲ್ಲಿ ಒಟ್ಟು 41 ಟ್ರಿಪ್‌ಗಳ ಸಾರಿಗೆ ಸೌಲಭ್ಯವಿದ್ದು, ಬನ್ನೂರಿನಿಂದ ಮೈಸೂರಿಗೆ ಪ್ರತಿ 15 ನಿಮಿಷಕ್ಕೆ ಸಾರಿಗೆ ಸೌಲಭ್ಯವಿರುತ್ತದೆ. ಸಾರ್ವಜನಿಕ ಪ್ರಯಾಣಿಕರು ಸದರಿ ಸಾರಿಗೆಗಳ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.
22	ಬನ್ನೂರು ಪಟ್ಟಣದ ಸಮೀಪದ ಗ್ರಾಮಗಳಿಗೆ ನಿರಂತರವಾಗಿ ನಗರ ಸಾರಿಗೆ ಸೌಲಭ್ಯ	ಮೈಸೂರು ನಗರ ಸಾರಿಗೆ ವಿಭಾಗದ ವತಿಯಿಂದ ಈ ಹಿಂದೆ ಮೈಸೂರು–ಬನ್ನೂರು–ತುರುಗನೂರು–ಯಾಚೇನಹಳ್ಳಿ ನಡುವೆ 4 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಸದರಿ ಸಾರಿಗೆಯ ಸಾರಿಗೆ ಆದಾಯವು ಅತೀ ಕಡಿಮೆ ಬಂದು ನಿಗಮಕ್ಕೆ ಆರ್ಥಿಕ ನಷ್ಟ ಉಂಟಾಗುತ್ತಿದ್ದ ಹಿನ್ನೆಲೆಯಲ್ಲಿ ಈ ಸಾರಿಗೆಯನ್ನು ದಿನಾಂಕ:30.10.2018ರಂದು ಕಡಿತಗೊಳಿಸಲಾಗಿರುತ್ತದೆ.
23	ಕಟ್ಟೆಪುರ ಮಾರನಪುರ, ಹೆಮ್ಮಿಗೆ ಮಾರ್ಗ ತಿ.ನರಸೀಪುರ	ಈ ಮಾರ್ಗದಲ್ಲಿ ಸಾರಿಗೆ ಕಾರ್ಯಾಚರಣೆ ಮಾಡಲು ರಸ್ತೆ ಕಿರಿದಾಗಿದ್ದು, ಬಾರೀ ವಾಹನಗಳ ಕಾರ್ಯಾಚರಣೆ ಕಷ್ಟಸಾಧ್ಯವಾಗಿರುವುದರಿಂದ ಈ ಮಾರ್ಗದಲ್ಲಿ ಸಾರಿಗೆ ಸೌಲಭ್ಯ ಒದಗಿಸಲಾಗಿರುವುದಿಲ್ಲ.

ಕರ್ನಾಟಕ ಸರ್ಕಾರ

ಸಂ: ಸಾರಿಇ 24 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ರೂಪಾಲಿ ಸಂತೋಷ್ ನಾಯ್ಕ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:673ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ರೂಪಾಲಿ ಸಂತೋಷ್ ನಾಯ್ಕ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:673ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 673
ಸದಸ್ಯರ ಹೆಸರು : ಶ್ರೀಮತಿ ರೂಪಾಲಿ ಸಂತೋಷ್ ನಾಯ್ಕ್
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 14-02-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕಾರವಾರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಬಸ್ಸುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಾರವಾರ ವಿಧಾನ ಸಭಾ ವ್ಯಾಪ್ತಿಯ ಕಾರವಾರ ಘಟಕದಲ್ಲಿ 87 ಅನುಸೂಚಿಗಳನ್ನು 90 ವಾಹನಗಳಿಂದ ಕಾರ್ಯಾಚರಣೆಗೊಳಿಸಲಾಗುತ್ತಿದ್ದು, 3 ವಾಹನಗಳು ಹೆಚ್ಚುವರಿಯಾಗಿರುತ್ತವೆ.
ಆ	ಬಂದಿದ್ದಲ್ಲಿ ಹೆಚ್ಚುವರಿ ಬಸ್ಸುಗಳನ್ನು ಯಾವಾಗ ನೀಡಲಾಗುವುದು. (ಸಂಪೂರ್ಣ ವಿವರ ನೀಡುವುದು)	ಅದರಂತೆ, ಅಂಕೋಲಾ ಘಟಕದಲ್ಲಿ 56 ಅನುಸೂಚಿಗಳನ್ನು 58 ವಾಹನಗಳಿಂದ ಕಾರ್ಯಾಚರಣೆಗೊಳಿಸಲಾಗುತ್ತಿದ್ದು, 2 ವಾಹನಗಳು ಹೆಚ್ಚುವರಿಯಾಗಿರುತ್ತವೆ. ಆದ್ದರಿಂದ, ವಾಹನಗಳ ಕೊರತೆ ಇರುವುದಿಲ್ಲ.

ಸಂಖ್ಯೆ: ಸಾರಿಇ 24 ಸಾಸಂಪ್ರ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಸಾರಿಇ 25 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ.ಎನ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:675ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ.ಎನ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:675ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 675
ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಸಿ.ಎನ್.
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 14-02-2019

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಸಕ್ತ ಸಾಲಿನಲ್ಲಿ ಖರೀದಿಸಿದ ಬಸ್ಸುಗಳ ಸಂಖ್ಯೆ ಎಷ್ಟು; ಹಾಸನ ವಿಭಾಗದ ಚನ್ನರಾಯಪಟ್ಟಣ ಘಟಕಕ್ಕೆ ನೀಡಲಾಗಿರುವ ಹೊಸ ಬಸ್ಸುಗಳೆಷ್ಟು; (ವಿವರ ನೀಡುವುದು)</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ದಿನಾಂಕ: 07-02-2019 ರವರೆಗೆ ಒಟ್ಟು 342 ವಿವಿಧ ಮಾದರಿಯ ಹೊಸ ಬಸ್ಸುಗಳನ್ನು ಖರೀದಿಸಿ ವಿಭಾಗಗಳಿಗೆ ನೀಡಲಾಗಿರುತ್ತದೆ. ಖರೀದಿಸಿರುವ ಬಸ್ಸುಗಳ ವಿವರ ಕೆಳಕಂಡಂತಿರುತ್ತದೆ.

<table><tr><th>ಬಸ್ಸುಗಳ ಮಾದರಿ</th><th>ಸಂಖ್ಯೆ</th></tr><tr><td>ಕರ್ನಾಟಕ ಸಾರಿಗೆ</td><td>265</td></tr><tr><td>ಗ್ರಾಮೀಣ ಸಾರಿಗೆ</td><td>11</td></tr><tr><td>ರಾಜಹಂಸ</td><td>16</td></tr><tr><td>ನಾನ್ ಎಸಿ ಸ್ಲೀಪರ್</td><td>20</td></tr><tr><td>ವೋಲ್ವೋ ಮಲ್ಟಿ ಆಕ್ಸಲ್</td><td>30</td></tr><tr><td>ಒಟ್ಟು</td><td>342</td></tr></table>
ಹಾಸನ ವಿಭಾಗದ ಚನ್ನರಾಯಪಟ್ಟಣ ಘಟಕಕ್ಕೆ ಪ್ರಸಕ್ತ ಸಾಲಿನಲ್ಲಿ 2 ಹೊಸ ಬಸ್ಸುಗಳನ್ನು ನೀಡಲಾಗಿರುತ್ತದೆ.</td></tr>
<tr><td>ಆ</td><td>ಹಾಸನ ವಿಭಾಗದ ಚನ್ನರಾಯಪಟ್ಟಣ ಘಟಕದಲ್ಲಿ ತುಂಬಾ ಹಳೆಯ ಹಾಗೂ ಸಂಚಾರಕ್ಕೆ ಯೋಗ್ಯವಲ್ಲದ ಬಸ್ಸುಗಳು ಗ್ರಾಮೀಣ ಪ್ರದೇಶದಲ್ಲಿ ಸಂಚರಿಸುತ್ತಿರುವುದರಿಂದ ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊಸ ಬಸ್ಸುಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುವುದೇ?</td><td>ಚನ್ನರಾಯಪಟ್ಟಣ ಘಟಕದಿಂದ ಗ್ರಾಮೀಣ ಪ್ರದೇಶದಲ್ಲಿ ಸಂಚರಿಸುತ್ತಿರುವ ಎಲ್ಲಾ ವಾಹನಗಳು ಸುಸ್ಥಿತಿಯಲ್ಲಿರುತ್ತವೆ.</td></tr>
</table>

ಸಾರಿಇ 25 ಸಾಸಂಪ್ರ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಸಾರಿಇ 21 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದು ಸವದಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 399ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದು ಸವದಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 399ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 399
ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 14-02-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ	ತೇರದಾಳ ಮತಕ್ಷೇತ್ರಗಳಲ್ಲಿನ ಅನೇಕ ಹಳ್ಳಿಗಳಿಗೆ ಬಸ್ಸಿನ ಸೌಕರ್ಯಗಳಿಲ್ಲದೇ ಸಾರ್ವಜನಿಕರಿಗೆ ಮತ್ತು ಶಾಲಾ ಮಕ್ಕಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ.	ತೇರದಾಳ ಬಸ್ ನಿಲ್ದಾಣದ ಮೂಲಕ ಒಟ್ಟು 259 ಸರತಿಗಳು ಕಾರ್ಯಾಚರಣೆಯಲ್ಲಿರುತ್ತವೆ. ಸಾರ್ವಜನಿಕರ ಹಾಗೂ ವಿಧ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಹಂತಹಂತವಾಗಿ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು.
ಆ	ಹಾಗಿದ್ದಲ್ಲಿ ಈ ಕ್ಷೇತ್ರದಲ್ಲಿ ಬಸ್ಸುಗಳ ಕೊರತೆ ಇದೆಯೇ: ಇದ್ದಲ್ಲಿ ಎಷ್ಟು ಕೊರತೆ ಇದೆ.: ಯಾವಾಗ ಈ ಕೊರತೆಯನ್ನು ಸರಿಪಡಿಸಲಾಗುವುದು. (ವಿವರ ಒದಗಿಸುವುದು)	
ಇ	ಹಳ್ಳಿಗಳಿಗೆ ಮಿನಿ ಬಸ್ಸು ಸೇವೆಯನ್ನು ಒದಗಿಸಲು ಮಿನಿ ಬಸ್ಸುಗಳನ್ನು ಖರೀದಿಸಲು ಸರ್ಕಾರಕ್ಕಿರುವ ತೊಂದರೆಗಳೇನು?	ಪ್ರಸ್ತುತ ಮಿನಿ ಬಸ್ಸು ಖರೀದಿಸುವ ಪ್ರಸ್ತಾವನೆ ಇರುವುದಿಲ್ಲ.

ಸಾರಿಇ 21 ಸಾಸಂಪ್ರ 2019

(ಡಿ.ಸಿ. ತಮ್ಮಣ್ಣ)
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 904
ಸದಸ್ಯರ ಹೆಸರು	: ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ	: 14.02.2019
ಉತ್ತರಿಸಬೇಕಾದ ಸಚಿವರು	: ಜಲ ಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ವಿಜಯಪುರ ಜಿಲ್ಲೆಯ ಇಂಡಿ, ಸಿಂಧಗಿ, ಚಡಚಣ ಹಾಗೂ ವಿಜಯಪುರ ತಾಲ್ಲೂಕಿನ 64 ಹಳ್ಳಿಗಳ ನೀರಾವರಿ ವಂಚಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಬೇಕೆಂದು ರೈತಪರ ಸಂಘಟನೆಗಳು ಹಾಗೂ ಸಾರ್ವಜನಿಕರು ಧರಣಿ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಸದರಿ ನೀರಾವರಿ ವಂಚಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ; ಹೊಂದಿದ್ದಲ್ಲಿ, ಅದರ ರೂಪುರೇಷೆಗಳೇನು; (ವಿವರ ನೀಡುವುದು)	ವಿಜಯಪುರ ಜಿಲ್ಲೆಯ ಇಂಡಿ, ಸಿಂಧಗಿ, ಚಡಚಣ ಹಾಗೂ ವಿಜಯಪುರ ತಾಲ್ಲೂಕಿನ 64 ಹಳ್ಳಿಗಳ ನೀರಾವರಿ ವಂಚಿತ ಕ್ಷೇತ್ರದ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಕುರಿತಾಗಿ ನೀರಿನ ಲಭ್ಯತೆ, ತಾಂತ್ರಿಕ ಸಾಧ್ಯ ಸಾಧ್ಯತೆಯ ಪರ್ಯಾಯ ಪ್ರಸ್ತಾವನೆಗಳನ್ನು ದಿನಾಂಕ:05.11.2018 ಮತ್ತು 05.12.2018ರಂದು ಜರುಗಿದ ಕೃಷ್ಣಾ ಭಾಗ್ಯ ಜಲ ನಿಗಮದ 11ನೇ ತಾಂತ್ರಿಕ ಉಪ ಸಮಿತಿಯಲ್ಲಿ ಮಂಡಿಸಲಾಗಿದ್ದು, ಸಮಿತಿಯು ಪರ್ಯಾಯ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯ ಸಾಧ್ಯತೆ ಕುರಿತಂತೆ ಪರಿಶೀಲಿಸಲು ಸೂಚಿಸಿದ್ದು ಅದರಂತೆ ಕ್ರಮ ಜರುಗಿಸಲಾಗುತ್ತಿದೆ.
ಇ)	ಸದರಿ ಯೋಜನೆಯನ್ನು 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಲಾಗುವುದೇ;	ಸರ್ಕಾರವು 2019-20ರ ಆಯವ್ಯಯ ಭಾಷಣದಲ್ಲಿ ರೂ.250.00 ಕೋಟಿ ವೆಚ್ಚದಲ್ಲಿ ಇಂಡಿ ಹಾಗೂ ನಾಗಠಾಣ ವ್ಯಾಪ್ತಿಯ 28,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಹೊರ್ತಿ – ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಘೋಷಿಸಿದೆ.
ಈ)	ಘೋಷಣೆ ಮಾಡಿದಲ್ಲಿ ಈ ಕಾಮಗಾರಿಗಾಗಿ ಕಾಯ್ದಿರಿಸುವ ಅನುದಾನ ಎಷ್ಟು; (ವಿವರ ನೀಡುವುದು)	
ಉ)	ಯಾವ ಕಾಲಮಿತಿಯೊಳಗೆ ಈ ಯೋಜನೆಗೆ ಚಾಲನೆ ನೀಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?	ಸದರಿ ಯೋಜನೆಯ ನೀರಿನ ಲಭ್ಯತೆ, ತಾಂತ್ರಿಕ ಸಾಧ್ಯ ಸಾಧ್ಯತೆಯ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಸಮಿತಿಯ ಶಿಫಾರಸ್ಸಿನಂತೆ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಜಸಂಇ 13 ಡಬ್ಲ್ಯೂಬಿಎಂ 2019

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು

<u>ಕರ್ನಾಟಕ ಸರ್ಕಾರ</u>

ಸಂ: ಆಕುಕ 13 ಹೆಚ್ ಎಸ್ ಡಿ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು,ದಿನಾಂಕ:13-2-2019.

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸಸೌಧ.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ಬೆಂಗಳೂರು.

ಮಾನ್ಯರೇ,

ವಿಷಯ:-ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ.ಅನಿಲ್ ಚಿಕ್ಕಮಾದು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:1161 ಕ್ಕೆ ಉತ್ತರಗಳನ್ನು ಒದಗಿಸುವ ಕುರಿತು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ.ಅನಿಲ್ ಚಿಕ್ಕಮಾದು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:1161 ಕ್ಕೆ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಯ.ಶಿವಶಂಕರ್) 13/2
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಸೇವೆಗಳು)

<u>ಪ್ರತಿಗಳು:-</u>

1) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿರವರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿರವರ ಆಪ್ತ ಶಾಖೆ, ಆರೋಗ್ಯ ಮತ್ತು ಕುಟುಂಭ ಕಲ್ಯಾಣ ಇಲಾಖೆ, ವಿಕಾಸಸೌಧ.
3) ಸ್ವೀಮರ ಮತ್ತು ಸಮನ್ವಯ ಶಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:	1161
ಮಾನ್ಯ ಸದಸ್ಯರ ಹೆಸರು	ಶ್ರೀ ಅನಿಲ್ ಚಿಕ್ಕಮಾದು (ಹೆಚ್. ಡಿ. ಕೋಟೆ)
ಉತ್ತರಿಸಬೇಕಾದ ದಿನಾಂಕ	14-02-2019
ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ವೈದ್ಯಕೇತರ ಹುದ್ದೆಗಳು ಖಾಲಿಯಿರುವುದರಿಂದ ರೋಗಿಗಳಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ)	ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)	ವೈದ್ಯೇತರ ಹುದ್ದೆಗಳಲ್ಲಿ ಖಾಲಿ ಇರುವ ಗ್ರೂಪ್ ಡಿ ಹುದ್ದೆಗಳ ಎದುರು ಹುದ್ದೆಗಳಿಗೆ ಹೊರಗುತ್ತಿಗೆಯಲ್ಲಿ ನಾನ್ ಕ್ಲಿನಿಕಲ್ ಸರ್ವಿಸ್ ಮತ್ತು ಗ್ರೂಪ್ -ಡಿ ಸೇವೆಯನ್ನು ಪಡೆಯಲಾಗಿರುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ಡಿ.ಬಿ. ಕುಪ್ಪೆ, ಮೊಳೆಯೂರು, ಯಡಿಯಾಲ ಅರಣ್ಯ ವಲಯಗಳ ಕಾಡಂಚಿನ ಪ್ರದೇಶಗಳ ಹಾಡಿಗಳಲ್ಲಿ ವನ್ಯ ಮೃಗಗಳ ದಾಳಿಯಿಂದ ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ತುರ್ತು ಚಿಕಿತ್ಸಾ ಘಟಕಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ಅಭಿಪ್ರಾಯವೇನು? (ವಿವರ ನೀಡುವುದು)	ಸಂಚಾರಿ ಗಿರಿಜನ ಆರೋಗ್ಯ ತಪಾಸಣಾ ತಂಡಗಳು ತುರ್ತು ವಾಹನದೊಂದಿಗೆ ಕಾರ್ಯ ನಿರ್ವಹಿಸುತ್ತಿವೆ.

ಆಕುಕ 13 ಹೆಚ್.ಎಸ್.ಡಿ 2019

(ಶಿವಾನಂದ ಎಸ್ ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನೇಮಕ ಮಾಡಲು ಹಾಗೂ ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆಪಿಎಸ್‌ಸಿ ಮೂಲಕ ಆಯ್ಕೆಗೊಂಡು 255 ತಜ್ಞ ವೈದ್ಯರು ಸ್ಥಳ ಆಯ್ಕೆಮಾಡಿಕೊಂಡಿದ್ದು 159 ತಜ್ಞ ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

- 255 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು, ಸ್ಥಳ ಆಯ್ಕೆಮಾಡಿಕೊಂಡಿದ್ದು 233 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರಿ ಆದೇಶ ಸಂಖ್ಯೆ: ಆಕುಕ 297 ಹೆಚ್‌ಎಸ್‌ಹೆಚ್ 2015, ದಿನಾಂಕ: 22-04-2016 ಮತ್ತು ಸೇರ್ಪಡೆ ದಿ:07.10.2016 ಹಾಗೂ ಆಕುಕ 359 ಹೆಚ್‌ಎಸ್‌ಹೆಚ್ 2016, ದಿನಾಂಕ:01-08-2016ರ ಆದೇಶಗಳಲ್ಲಿ ಅನುಮತಿ ನೀಡಲಾಗಿದೆ.

- ತಜ್ಞ ವೈದ್ಯರನ್ನು "On Call Basis" ಮೇಲೆ ತೆಗೆದುಕೊಳ್ಳಲು ಸರ್ಕಾರದ ಆದೇಶ ಸಂಖ್ಯೆಆಕುಕ 178 ಹೆಚ್‌ಎಸ್‌ಹೆಚ್ 2011 ದಿನಾಂಕ: 20-05-2016ರಲ್ಲಿ ಅನುಮತಿ ನೀಡಲಾಗಿದೆ.

- ಸರ್ಕಾರದ ಆದೇಶ ಸಂಖ್ಯೆ: ಆಕುಕ 554 ಹೆಚ್‌ಎಸ್‌ಹೆಚ್ 2016, ದಿನಾಂಕ: 22-11-2016 ರಲ್ಲಿ ಸೂಚಿತವಾದಂತೆ ತಜ್ಞ ವೈದ್ಯರುಗಳ ಎದುರು ಹುದ್ದೆಯಲ್ಲಿ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಯುಕ್ತರು, ಆರೋಗ್ಯ ಮತ್ತು ಕು.ಕ ಸೇವೆಗಳು, ಬೆಂಗಳೂರು ಸುತ್ತೋಲೆ ಸಂಖ್ಯೆ: ಜೆಆರ್‌ಓ(1ಎ)/101/2012-13, ದಿನಾಂಕ: 09-12-2016 ರಂತೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

- ವೈದ್ಯರ ಪದವಿಯನ್ನು ಸರ್ಕಾರಿ ಕೋಟಾದಲ್ಲಿ ಪೂರ್ಣಗೊಳಿಸಿದ ವೈದ್ಯರುಗಳನ್ನು 1 ವರ್ಷ ಕಡ್ಡಾಯ ಗ್ರಾಮೀಣ ಸೇವೆಯಡಿಯಲ್ಲಿ ವೈದ್ಯರುಗಳನ್ನು ನೇಮಿಸಿಕೊಳ್ಳಲಾಗುತ್ತಿದೆ.

- ವೈದ್ಯರ ನೇಮಕಾತಿ ಸಮಾಲೋಚನೆ ನಂತರ ಹೆಚ್ಚಿನ ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಖಾಲಿ ಇರುವ ತಜ್ಞರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ನೇರ ನೇಮಕಾತಿ ಹುದ್ದೆಗಳನ್ನು ತುರ್ತಾಗಿ ವಿಶೇಷ ನಿಯಮಗಳ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

- ವೈದ್ಯರ ನೇಮಕಾತಿ ಸಮಾಲೋಚನೆ ನಂತರ ಹೆಚ್ಚಿನ ತಜ್ಞ / ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಇರುವುದರಿಂದ ಕೆ.ಪಿ.ಎಸ್.ಸಿ ಯಿಂದ ತಜ್ಞ ವೈದ್ಯರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ

ಹೆಚ್ಚುವರಿ ಪಟ್ಟಿಯನ್ನು ಕಳುಹಿಸಿಕೊಡುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕೋರಿಕೆ ಸಲ್ಲಿಸಿದ್ದು, ಪ್ರಸ್ತುತ ಕೆ.ಪಿ.ಎಸ್.ಸಿ ಯಿಂದ 8 ತಜ್ಞತೆಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಪಟ್ಟಿಯು ಸ್ವೀಕೃತಗೊಂಡಿದ್ದು, ಈ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

- ಕಿರಿಯ ವೈದ್ಯಕೀಯ ಪ್ರಯೋಗಾಶಾಲಾ ಟೆಕ್ನಾಲಜಿಸ್ಟ್/ಫಾರ್ಮಸಿಸ್ಟ್/ ಎಲೆಕ್ಟ್ರೀಷಿಯನ್ /ಸೋಷಿಯಲ್‌ವರ್ಕರ್/ ಡೆಂಟಲ್ ಮೆಕ್ಯಾನಿಕ್/ ಗ್ರೂಪ್-ಡಿ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

- ಇಲಾಖೆಯ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ 2017-18ನೇ ಸಾಲಿನಲ್ಲಿ ಮತ್ತು 2018-19 ನೇ ಸಾಲಿನಲ್ಲಿ ವಿವಿಧ ಅರೆ ವೈದ್ಯಕೀಯ ಹುದ್ದೆಗಳಲ್ಲಿ 2181 ಹುದ್ದೆಗಳನ್ನು ನೇಮಕಾತಿ ಮಾಡಿ ಆದೇಶ ಹೊರಡಿಸಲಾಗಿದೆ.

- ಕಿರಿಯ ಆರೋಗ್ಯ ಸಹಾಯಕರು (ಮಹಿಳೆ)-50 ಹುದ್ದೆಗಳಿಗೆ ಪೊಲೀಸ್ ಪೂರ್ವಾಪರ/ಜಾತಿ ಸಿಂಧುತ್ವ/ಹೈ-ಕ ಮೀಸಲಾತಿ ಸಿಂಧುತ್ವ ವರದಿಗಳು ಸ್ವೀಕೃತವಾದ ನಂತರ ಹಂತ ಹಂತವಾಗಿ ನೇಮಕಾತಿ ಆದೇಶ ನೀಡಲಾಗುವುದು. ಮತ್ತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು-62 ಹುದ್ದೆಗಳಿಗೆ ಹೊರರಾಜ್ಯದ ವಿಶ್ವವಿದ್ಯಾನಿಲಯಗಳಿಂದ ಪದವಿ ಪಡೆದಿರುವ ಅಭ್ಯರ್ಥಿಗಳ ಅಂಕಪಟ್ಟಿಗಳ ನೈಜತೆಯ ಬಗ್ಗೆ ಪತ್ರ ಬರೆಯಲಾಗಿದ್ದು, ಸ್ಪಷ್ಟ ಮಾಹಿತಿ ಬಂದ ನಂತರ ತಾತ್ಕಾಲಿಕ ಆಯ್ಕೆಪಟ್ಟಿ ತಯಾರಿಸಲಾಗುವುದು. ಹಾಗೂ 889 ಶುಶ್ರೂಷಕರ ಹುದ್ದೆಗಳನ್ನು ಭರ್ತಿ ಮಾಡಲು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾವೆ ಹೂಡಿದ್ದು, ಸದರಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಹಿನ್ನಲ್ಲೆಯಲ್ಲಿ ಅಂತಿಮ ತೀರ್ಪು ಬಂದ ನಂತರ ನೇಮಕಾತಿ ಪ್ರಕ್ರಿಯೆ ಚಾಲನೆಗೊಳಿಸಲಾಗುವುದು.

- ಉಳಿದ 981 ಶುಶ್ರೂಷಕರ ಹುದ್ದೆಗಳಿಗೆ ನೇಮಕಾತಿ ಮಾಡಲು ಕ್ರಮ ಕೈಗೊಂಡಿದೆ ಹಾಗೂ ಪದೋನ್ನತಿ ನೀಡುವ ಮೂಲಕ ಸಹ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು.

- ಪ್ರಸ್ತುತ ಇಲಾಖೆಯಲ್ಲಿ ಖಾಲಿ ಇರುವ 5375 ಪ್ಯಾರಾ ಮೆಡಿಕಲ್ ಹುದ್ದೆಗಳ ಪೈಕಿ 4981 ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಅನುಮೋದನೆಗೆ ಸಲ್ಲಿಸಲಾಗಿದೆ. ಅನುಮೋದನೆ ದೊರೆತ ನಂತರ ನೇಮಕಾತಿ ಪ್ರಕ್ರಿಯೆ ಚಾಲನೆ ನೀಡಲಾಗುವುದು

- ಇಲಾಖೆಯಲ್ಲಿ ಖಾಲಿ ಇರುವ 177 ಪ್ರಥಮ ದರ್ಜೆ ಸಹಾಯಕರು ಮತ್ತು 143 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ದೊರೆತಿದ್ದು,ಸದರಿ ಹುದ್ದೆಗಳನ್ನು ಕೆಪಿಎಸ್‌ಸಿ ಮುಖಾಂತರ ಭರ್ತಿಮಾಡುವ ಸಲುವಾಗಿ ಪತ್ರ ಬರೆಯಲಾಗಿದೆ

ಕರ್ನಾಟಕ ಸರ್ಕಾರ

ಸಂ: ಸಾರಿಇ 23 ಸಾಸಂಪ್ರ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13.02.2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ದೇವಾನಂದ್ ಘುಲಸಿಂಗ್ ಚವಾಣ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:412ಕ್ಕೆ ಉತ್ತರಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ದೇವಾನಂದ್ ಘುಲಸಿಂಗ್ ಚವಾಣ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:412ಕ್ಕೆ ದಿನಾಂಕ:14.02.2019 ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 412
ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವ್ಹಾಣ್
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 14-02-2019

ಕ್ರಸಂ	ಪ್ರಶ್ನೆ	ಉತ್ತರ
